

ಏಪ್ರಿಲ್ ೧೬, ೧೯೮೯ ರೂ. ೧-೦೦

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ-೧೧ ಸಂಚಿಕೆ-೧೬

ವಿದೇಶೀ ಪಿತೂರಿಯತ್ತ ಬೊಟ್ಟು ಮಾಡುವ ಠಕ್ಕರ್ ವರದಿ

ಕೇಂದ್ರ ಸರ್ಕಾರ ಯಾರನ್ನು ಉಳಿಸ ಬಯಸುತ್ತಿದೆ ?

ಭಾರತವನ್ನು ಆಂತರಿಕವಾಗಿ ಅಸ್ಥಿರಗೊಳಿಸುವಲ್ಲಿ ತೊಡಗಿದವರಿಗೆ ವಿದೇಶೀ ಏಜೆನ್ಸಿ ನೆರವಾಗಿದೆ ಎಂದು ನ್ಯಾಯಮೂರ್ತಿ ಠಕ್ಕರ್‌ರವರಿಗೆ ಬಹಳ ಮನವರಿಕೆಯಾಗಿದೆ. ಅದಕ್ಕೆ ಆಧಾರ ಒದಗಿಸುವ ಭಾಗ ೧-ಎ ನ್ನು ಅವರು ವರದಿಯಲ್ಲಿ ಪ್ರಸ್ತಾಪಿಸಿದ್ದಾರೆ. ಅಂದರೆ ಇದು ಅಂತಿಮ ವರದಿಯ ಒಂದು ಭಾಗ. ಆದರೆ ಸರ್ಕಾರ ಸಂಸತ್ತಿನಲ್ಲಿ ಮಂಡಿಸಿದ ಅಂತಿಮ ವರದಿಯಲ್ಲಿ ಈ ಭಾಗವಿಲ್ಲ. ಏಕೆ? ಸರ್ಕಾರ ಯಾರನ್ನು ಉಳಿಸಬಯಸುತ್ತಿದೆ?

ಠಕ್ಕರ್ ಆಯೋಗದ ವರದಿಯನ್ನು ಮುಚ್ಚಿಡುವ ಮೂರ್ಖ ಪ್ರಯತ್ನಗಳ ಫಲ ವ್ಯಾಪಕ ಊಹಾ-ಪೋಹ, ವದಂತಿಗಳು. ಆದರೂ ಈ ಅದಕ್ಷ, ಅವಿವೇಕಿ ಸರ್ಕಾರ ಪಾಠ ಕಲಿತಂತಿಲ್ಲ. ಸರ್ಕಾರದ, ವಿಶೇಷವಾಗಿ ಪ್ರಧಾನಮಂತ್ರಿಗಳ ವಿಶ್ವಾಸಾರ್ಹತೆಗೆ ಇದರಿಂದಾಗುತ್ತಿರುವ ತೀವ್ರ ಆಪತ್ತಿನ ಪರಿವೆಯೇ ಇಲ್ಲದೆ "ಸಾರ್ವಜನಿಕ ಹಿತಾಸಕ್ತಿ", "ರಾಷ್ಟ್ರೀಯ ಭದ್ರತೆ" ಮರಳಿನಲ್ಲಿ ಮುಖ ಹುದುಗಿಸಿ ಉಷ್ಟ್ರ ಪಕ್ಷಿಯಂತೆ ಅದು ವರ್ತಿಸುತ್ತಿದೆ.

ಸಂಸತ್ತು ಮತ್ತು ಪತ್ರಿಕೆಗಳ ಒತ್ತಡ ಹಾಗೂ ಸಾರ್ವಜನಿಕರ ಹೆಚ್ಚುತ್ತಿರುವ ಸಂಶಯದಿಂದಾಗಿ ಸರ್ಕಾರ ಸಂಸತ್ತಿನ ಎರಡೂ ಸದನಗಳಲ್ಲಿ ಠಕ್ಕರ್ ಆಯೋಗದ ಮಧ್ಯಮಾವಧಿ ಮತ್ತು ಅಂತಿಮ ವರದಿಗಳನ್ನು ಮಂಡಿಸಿತು. ಆದರೆ ಮತ್ತೆ ನಡುವಿನ ಕೆಲವು ಸಂಪುಟಗಳನ್ನು ಬಚ್ಚಿಟ್ಟಿತು. ಈ ವಿವಾದಗ್ರಸ್ತ ಸ್ಥಿತಿಯನ್ನು ಅದು ತಪ್ಪಿಸಬಹುದಿತ್ತು.

ಸರ್ಕಾರ ಹೇಳುವಂತೆ "ಸಾರ್ವಜನಿಕ ಹಿತಾಸಕ್ತಿ" ಮತ್ತು "ರಾಷ್ಟ್ರೀಯ ಭದ್ರತೆ"ಯ ಪ್ರಶ್ನೆಗಳಿದ್ದರೆ ವಿರೋಧ ಪಕ್ಷಗಳ ಮುಖಂಡರನ್ನು ಕರೆದು ಅವರೇ ನೋಡಿ ತೀರ್ಮಾನಕ್ಕೆ ಬರಲು ಹೇಳಬಹುದಿತ್ತು ಅಥವಾ ಸಂಸತ್ತಿನ ಗುಪ್ತ ಅಧಿವೇಶನ ನಡೆಸಬಹುದಿತ್ತು. ಸಂಸದೀಯ ಸಮಿತಿಯ ವಿಧಾನ ಅನುಸರಿಸಬಹುದಿತ್ತು ಅಥವಾ ದೇಶದ ಭದ್ರತೆಯ ಸೂಕ್ಷ್ಮಗಳ ಕುರಿತಾದ ಹೆಸರುಗಳನ್ನು ಬಿಟ್ಟು ಮಂಡಿಸಬಹುದಿತ್ತು.

ಇವೇನನ್ನೂ ಮಾಡುವ ಪ್ರಯತ್ನ ಕೂಡಾ ಸರ್ಕಾರ ಮಾಡಲಿಲ್ಲ. ಅಷ್ಟೇ ಅಲ್ಲ, ಕೇಂದ್ರ ಸರ್ಕಾರ ಸಾಮಾನ್ಯವಾಗಿ ಪ್ರದರ್ಶಿಸುವ ಧಿಮಾಕಿನ ವರ್ತನೆ ಕೂಡಾ ಇಲ್ಲ. ಸರ್ಕಾರ ಭಯಗ್ರಸ್ತವಾಗಿದೆಯೇನೋ ಎಂದೆನಿಸುವಂತಿತ್ತು ಅದರ ವರ್ತನೆ.

ಇಂದಿರಾಗಾಂಧಿಯವರ ಕೊಲೆ ಪಿತೂರಿಯಲ್ಲಿ ವಿದೇಶೀ ಹಸ್ತಕ್ಷೇಪವಿತ್ತೇ? ಬಹಳ ಹಿಂದಿನಿಂದಲೇ ನಮ್ಮ ಪಕ್ಷ ದೇಶವನ್ನು ಅಸ್ಥಿರಗೊಳಿಸುವ, ಛಿದ್ರಗೊಳಿಸುವ ಸಾಮ್ರಾಜ್ಯಶಾಹೀ ಪಿತೂರಿಗಳ ಬಗ್ಗೆ ಜನರಿಗೆ ಎಚ್ಚರ ನೀಡುತ್ತಾ ಬಂದಿದೆ. ದೇಶವನ್ನು ಛಿದ್ರಗೊಳಿಸುವ ಆಪರೇಷನ್ ಬ್ರಹ್ಮಪುತ್ರಾ ಯೋಜನೆ, ಚುನಾವಣೆಗಳಲ್ಲಿ ಕಮ್ಯೂನಿಸ್ಟರನ್ನು ಸೋಲಿಸಲು ಆಳುವ ಕಾಂಗ್ರೆಸ್ ಪಕ್ಷಕ್ಕೆ ಹಣ ಕೊಟ್ಟೆವೆಂದು ಅಮೆರಿಕನ್ ರಾಯಭಾರಿ ಮೊಯ್ನಿಹಾನ್ ಬಹಿರಂಗಗೊಳಿಸಿದ್ದು, ಮೂಲಭೂತವಾದಿ ಸಂಘಟನೆಗಳಿಗೆ ವಿದೇಶೀ ಹಣ ಹರಿದು

ಪುಟ 8

ಜಾಲಿಯಾನ್‌ವಾಲಾಬಾಗ್ ಹತ್ಯಾಕಾಂಡದ 70ನೇ ವಾರ್ಷಿಕದಂದು
ದೇಶಾದ್ಯಂತ ಪಂಜಾಬ್ ದಿನಾಚರಣೆ

ಏಪ್ರಿಲ್ 13 ಪಂಜಾಬಿನ ಜಾಲಿಯಾನ್‌ವಾಲಾಬಾಗ್‌ನಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ನರಮೇಧ ನಡೆಸಿ ಎಪ್ಪತ್ತು ವರ್ಷಗಳಾದವು. ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಈ ಜ್ವಲಂತ ಅಧ್ಯಾಯ ಬರೆದ ಪಂಜಾಬನ್ನು ತನ್ಮೂಲಕ ಭಾರತವನ್ನು ಉಳಿಸಲು ಹೋರಾಡುತ್ತಿರುವ ಎಡಶಕ್ತಿಗಳು ದೇಶಾದ್ಯಂತ ಈ ದಿನವನ್ನು ಪಂಜಾಬ್ ದಿನವಾಗಿ ಆಚರಿಸಬೇಕೆಂದು ಸಿ.ಪಿ.ಐ.(ಎಂ) ಮತ್ತು ಸಿ.ಪಿ.ಐ. ಸಂಯೋಜನಾ ಸಮಿತಿ ನೀಡಿದ ಕರೆಗೆ ಓಗೊಟ್ಟು ದೇಶಾದ್ಯಂತ ಪಂಜಾಬ್ ದಿನ ಆಚರಿಸಲಾಯಿತು.

ಏಪ್ರಿಲ್ 1ರಂದು ಸಂಯೋಜನಾ ಸಮಿತಿಯ ಸಭೆ ನವದೆಹಲಿಯಲ್ಲಿ ನಡೆಯಿತು. ಸಿ.ಪಿ.ಐ.(ಎಂ)ನ ಇ.ಎಂ.ಎಸ್., ಬಿ.ಟಿ.ಆರ್., ಬಸವಪುನ್ನಯ್ಯ, ಸುರ್ಜಿತ್ ಹಾಗೂ ಬಾಲಾನಂದನ್, ಸಿ.ಪಿ.ಐ.ನಿಂದ ರಾಜೇಶ್ವರರಾವ್, ಇಂದ್ರಜಿತ್ ಗುಪ್ತ, ಬಲರಾಂ, ಫಾರೂಕಿ, ಅವತಾರ್‌ಸಿಂಗ್ ಮಲ್ಹೋತ್ರಾ ಮತ್ತು ಹೋಮಿದಾಜಿ ಈ ಸಭೆಯಲ್ಲಿ ಭಾಗವಹಿಸಿದ್ದರು.

ಸಭೆಯಲ್ಲಿ ದೇಶದ ರಾಜಕೀಯ ಸನ್ನಿವೇಶವನ್ನು ಚರ್ಚಿಸಿ ರಾಜೀವ್ ಸರ್ಕಾರವನ್ನು ಅಧಿಕಾರದಿಂದ ಇಳಿಸುವ ಪ್ರಕ್ಷೋಭೆಯನ್ನು ತೀವ್ರಗೊಳಿಸಲು ನಿರ್ಧರಿಸಲಾಯಿತು.

ಠಕ್ಕರ್ ಆಯೋಗದ ವರದಿ ಮಂಡನೆ ಬಗ್ಗೆ ಸರ್ಕಾರದ ವರ್ತನೆಯನ್ನು ಖಂಡಿಸಿ ವಿದೇಶಿ ಮತ್ತು ಸಾಮ್ರಾಜ್ಯಶಾಹೀ ಪಿತೂರಿಗಳ ಬಗ್ಗೆ ಪೂರ್ಣವಾಗಿ ತಿಳಿಯುವ ಹಕ್ಕು ಜನರಿಗೆ ಇದೆ ಎಂದು ಘೋಷಿಸಿತು.

ಕೋಮುವಾದದ ವಿರುದ್ಧ ಪ್ರಚಾರವನ್ನು ತೀವ್ರಗೊಳಿಸಬೇಕು. ಮೇ ತಿಂಗಳಲ್ಲಿ ದೆಹಲಿಯಲ್ಲಿ ಕೋಮುವಾದದ ವಿರುದ್ಧ ಒಂದು ಸಮಾವೇಶ ನಡೆಸಬೇಕೆಂದೂ ಸಂಯೋಜನಾ ಸಮಿತಿ ನಿರ್ಧರಿಸಿತು.

ಭೂಮಿಯ ಪ್ರಶ್ನೆಯ ಕುರಿತು ಒಂದು ಸಮಾವೇಶ ಹಾಗೂ ಈ ಪ್ರಶ್ನೆಯ ಮೇಲೆ ಹೋರಾಟ ಯೋಜಿಸಿರುವ ರೈತ ಮತ್ತು ಕೃಷಿ ಕಾರ್ಮಿಕರ ಸಂಘಟನೆಗಳ ನಿರ್ಧಾರಕ್ಕೆ ಸಿ.ಪಿ.ಐ.(ಎಂ) ಮತ್ತು ಸಿ.ಪಿ.ಐ. ಸಂಯೋಜಕ ಸಮಿತಿ ಪೂರ್ಣ ಬೆಂಬಲ ವ್ಯಕ್ತಪಡಿಸಿತು.

ಸಂಯೋಜಕ ಸಮಿತಿಯ ಕೆಲಸವನ್ನು ಉತ್ತಮಗೊಳಿಸಲು, ಎರಡು ಪಕ್ಷಗಳ ಅಭಿಪ್ರಾಯ ಹಾಗೂ ಚಟುವಟಿಕೆಗಳನ್ನು ಸಂಯೋಜಿಸಲು ಇನ್ನೂ ಹೆಚ್ಚು ಬಾರಿ ಸಭೆ ಸೇರಲು ನಿರ್ಧರಿಸಲಾಯಿತು.

ಹಿಂದೂ ಪುನರುತ್ಥಾನ ವಾದಿಗಳು ಏನು ಬಯಸುತ್ತಿದ್ದಾರೆ!

ಹಿಂದೂ ಪುನರುತ್ಥಾನವಾದದ ಪ್ರತಿಪಾದಕರು ಆರ್.ಎಸ್.ಎಸ್.- ಬಿ.ಜೆ.ಪಿ. ಎಲ್ಲರನ್ನೂ ಒಳಗೊಂಡ ವಿರೋಧೀ ಐಕ್ಯತೆಯ ಪ್ರತಿಪಾದಕರು ಎಚ್ಚರಿಸಿದ್ದಾರೆ. ಅವರ ಸಿದ್ಧಾಂತಿ ಶ್ರೀಯುತ ಕೆ.ಆರ್. ಮಲ್ಕಾನಿ ಇ.ಎಂ.ಎಸ್.ಗೆ ಉತ್ತರ ನೀಡುತ್ತಾ 'ಸ್ಟೇಟ್ಸ್‌ಮನ್' ಪತ್ರಿಕೆಯಲ್ಲಿ ಮೂರು ಪ್ರಶ್ನೆಗಳನ್ನು ಪ್ರಸ್ತಾಪಿಸಿದ್ದಾರೆ. ಮೊದಲನೆಯದಾಗಿ, "ಹಿಂದೂಗಳಿಗಾದ ಚಾರಿತ್ರಿಕ ಅನ್ಯಾಯ ಸರಿಪಡಿಸುವ ಒಂದು ಸಂಕೇತವಾಗಿ ಅಯೋಧ್ಯೆ, ಮಥುರೆ ಮತ್ತು ವಾರಣಾಸಿಯನ್ನು ಹಿಂದೂಗಳಿಗೆ ಮತ್ತೆ ಒಪ್ಪಿಸಬೇಕು" ಎರಡನೆಯದು, "ಸಂವಿಧಾನದ 370ನೇ ಕಲಮು ರದ್ದಾಗಬೇಕು" ಮೂರನೆಯದಾಗಿ, "ಅಲ್ಪಸಂಖ್ಯಾತರ ಆಯೋಗವನ್ನು ವಿಸರ್ಜಿಸಬೇಕು" ಈ ಮೂರು ಪ್ರಶ್ನೆಗಳಿಗೆ ಇತರರು ಒಪ್ಪದಿದ್ದರೆ ಆರ್.ಎಸ್.ಎಸ್.- ಬಿ.ಜೆ.ಪಿ. ಇತರರೊಂದಿಗೆ ಸೇರದೆ ಏಕಾಂಗಿಯಾಗಿ ಮುಂದೆ ಸಾಗುತ್ತದೆ ಎಂದಿದ್ದಾರೆ ಮಲ್ಕಾನಿ. ವಿಶಾಲ ಹಿಂದೂ ಮತ ಬ್ಯಾಂಕಿನ ಮೇಲೆ ಅವಲಂಬಿಸಿ ಏಕಾಂಗಿಯಾಗಿ ಚುನಾವಣೆ ಎದುರಿಸುತ್ತದೆ!

ಇದು ಕೇವಲ ಒಬ್ಬ ವ್ಯಕ್ತಿಯ ಪತ್ರಿಕಾ ಲೇಖನ ಎಂದು ತಳ್ಳಿಹಾಕಬೇಡಿ. ಆರ್.ಎಸ್.ಎಸ್.- ಬಿ.ಜೆ.ಪಿ.ಯ ಸಂಪೂರ್ಣ ನಾಯಕತ್ವದ ಬೆಂಬಲ

ಪುಟ 8

ಚಾರ್ಲಿ ಚಾಪ್ಲಿನ್‌ಗೆ ನೂರು ವರ್ಷ

ಉದಯ



ಚಾರ್ಲಿಚಾಪ್ಲಿನ್ ವಿಶ್ವದ ಚಲನ ಚಿತ್ರರಂಗದಲ್ಲಿ ಎಂದೆಂದಿಗೂ ನೆನಪಿನಲ್ಲುಳಿಯುವ ಅದ್ಭುತ ವ್ಯಕ್ತಿ. ಇದೇ ಏಪ್ರಿಲ್ 16ರಂದ ಚಾಪ್ಲಿನ್ನ ಜನ್ಮಶತಾಬ್ದಿಯನ್ನು ವಿಶ್ವದಾದ್ಯಂತ ಆಚರಿಸಲಾಗುತ್ತದೆ.

ಚಾಪ್ಲಿನ್ ಎಂದೊಡನೆ ನಮ್ಮ ಮನದ ತೆರೆಯ ಮೇಲೆ ಬಂದು ನಿಲ್ಲುವುದು ಸೂಟುಬೂಟು ಧರಿಸಿದ, ಕತ್ತಿಗೊಂದು ಟೈ, ತಲೆಗೊಂದು ಹ್ಯಾಟು, ಕೈಯಲ್ಲೊಂದು ವಾಕಿಂಗ್ ಸ್ಟಿಕ್ ಹಿಡಿದು ಮೂಗಿನಡಿಗೆ ಎರಡೇಬೆಟ್ಟುಗಲದ ಮೀಸೆ ಬಿಟ್ಟುಕೊಂಡು ಮುಗ್ಧತೆಯೇ ಮೂರ್ತಿವೆತ್ತಂತೆ ಕಾಣಬರುವ ಕುಳ್ಳನೆಯ ಬೆಳ್ಳನೆಯ ಆಸಾಮಿ.

ಹೌದು ಈತ ತನ್ನೆಲ್ಲಾ ಚಿತ್ರಗಳಲ್ಲೂ ಹೀಗೆಯೇ ಕಾಣಿಸಿಕೊಳ್ಳುತ್ತಿದ್ದ. 20ನೇ ಶತಮಾನದ ಇಂಗ್ಲೆಂಡಿನ ಮೇಲು ವರ್ಗದ ಜನರ ಉಡುಗೆ ತೊಡುಗೆ ಧರಿಸಿ ಅವರುಗಳನ್ನೇ ಅಪಹಾಸ್ಯ ಮಾಡುವ ಮೂಲಕ ತನ್ನೊಳಗಿನ ಕ್ರೋಧವನ್ನು ಕಾರಿಕೊಳ್ಳುತ್ತಿದ್ದ ಈತ ಹುಟ್ಟಿದ್ದು ಬೆಳೆದಿದ್ದು ಅತ್ಯಂತ ದಾರುಣವಾದ ಬಡತನದಲ್ಲಿ.

1889ರ ಏಪ್ರಿಲ್ 16ರಂದು ಇಂಗ್ಲೆಂಡಿನಲ್ಲಿ ಜನಿಸಿದ ಚಾಪ್ಲಿನ್ ಮಗುವಾಗಿದ್ದಾಗಲೇ ಆತನ ತಾಯಿ ಗಂಡನನ್ನು ತೊರೆಯಬೇಕಾಯಿತು. ಇದೇ ಚಿಂತೆಯಲ್ಲಿ ತಾಯಿ ಮನೋವಿಕಲತೆ ಹೊಂದಿ ಆಸ್ಪತ್ರೆ ಸೇರಿದಳು. ನಂತರ ಆಸ್ಪತ್ರೆಯಿಂದ ಹೊರಬಂದ ಮೇಲೆ ಊಟಕ್ಕಾಗಿ ಬೀದಿ ಬೀದಿ ಅಲೆದು ಭಿಕ್ಷೆ ಬೇಡುವ ಪರಿಸ್ಥಿತಿ ಒದಗಿತು. ನಂತರ ಯಾರೋ ಆಕೆಯನ್ನು ಅನಾಥಾಲಯಕ್ಕೆ ಸೇರಿಸಿದರು. ಅನಾಥಾಲಯಗಳಲ್ಲಿ ಆಗಿನ ಕಾಲದಲ್ಲಿ ಮಕ್ಕಳನ್ನು ತುಂಬಾ ಗೋಳುಹೊಯ್ದುಕೊಳ್ಳುತ್ತಿದ್ದರು.

"ಮಾನವನ ಬದುಕಿನ ಮೌಲ್ಯಗಳ ಕುರಿತಾದ ಅಸ್ಪಷ್ಟ ಭಾವನೆಗಳು ಈ ಸಂದರ್ಭದಲ್ಲೇ ನನಗೆ ಅರಿವಾಗತೊಡಗಿದ್ದು. ಶ್ರೀಮಂತ ವರ್ಗದವರ ಬದುಕು ಎಲ್ಲರಿಗೂ ದೊರೆಯದಂತೆ ಮಾಡಿರುವುದನ್ನು ನಾನು ಅರ್ಥ ಮಾಡಿಕೊಂಡೆ"ಎಂಬುದಾಗಿ ಚಾಪ್ಲಿನ್ ಈ ಬಗ್ಗೆ ಹೇಳಿದ್ದಾರೆ.

ತನ್ನ 17ನೇ ವಯಸ್ಸಿನಲ್ಲೇ ನಾಟಕಗಳಲ್ಲಿ ಅಭಿನಯಿಸಲು ತೊಡಗಿದ ಚಾಪ್ಲಿನ್ನರ ಮೊದಲ ಚಲನಚಿತ್ರ "ಮೇಕಿಂಗ್ ಎ ಲಿವಿಂಗ್" 1913ರಲ್ಲಿ ತೆರೆಕಂಡಿತು.

1915 ರಲ್ಲಿ ಹೊರಬಂದ ಚಾಪ್ಲಿನ್ನರ 'ದಿ ಟ್ರ್ಯಾಂಪ್' (THE TRAMP) ಅತ್ಯುತ್ತಮ ಕಲಾವಂತಿಕೆಯನ್ನು ಪ್ರದರ್ಶಿಸಿತು.

ಪ್ರೇಕ್ಷಕರನ್ನು ನಗಿಸುತ್ತಲೇ ಅವರ ಅಂತರಂಗವನ್ನು ಅಲುಗುವಂತೆ ಮಾಡುವ ಅದ್ಭುತವಾದ ಕಲಾಸಿದ್ಧಿಯನ್ನು ಪಡೆದವ ರೆಂಬ ಹೆಗ್ಗಳಿಕೆ ಚಾಪ್ಲಿನ್ನರಿಗೆ ಪ್ರಾಪ್ತವಾದದ್ದು ಈ ಚಿತ್ರದಿಂದಲೇ.

ಜನಗತ್ತಿನೆಲ್ಲೆಡೆಗಳಿಂದಲೂ ಇವರಿಗೆ ಪ್ರಶಂಸೆಗಳ ಸುರಿಮಳೆಯಾಯಿತು. ಈ ಬಗ್ಗೆ ಚಾಪ್ಲಿನ್ ಹೇಳುತ್ತಾರೆ; "ಹಣ ಮತ್ತು ಖ್ಯಾತಿ ನನಗೆ ಹಲವು ವಿಷಯಗಳನ್ನು ಅರಿತುಕೊಳ್ಳುವ ಅವಕಾಶಗಳನ್ನು ಒದಗಿಸಿತು. ಜಗತ್ತಿನ ದೊಡ್ಡ ದೊಡ್ಡ ವ್ಯಕ್ತಿಗಳೊಂದಿಗೆ ಬೆರೆಯುವ ಅವಕಾಶ ಸಿಕ್ಕಿತು. ಅವರಲ್ಲಿ ಹಲವರಿಗೆ ನಮಗೆಲ್ಲಾ ಇರುವಂತಹುದೇ ಮಾನಸಿಕ ಊನಗಳು, ದೌರ್ಬಲ್ಯಗಳು ಇವೆಯೆಂಬುದನ್ನು ಕಂಡುಕೊಳ್ಳಲು ಸಾಧ್ಯವಾಯಿತು" ಎಂದು ಹೇಳಿದ್ದಾರೆ.

1918ರಲ್ಲಿ ಚಾಪ್ಲಿನ್ ಅಮೆರಿಕಕ್ಕೆ ಹೋಗಿ ಅಲ್ಲೇ ನೆಲೆಸಿ ಚಲನ ಚಿತ್ರಗಳನ್ನು ತಯಾರಿಸಲಾರಂಭಿಸಿದರು.

ಯಂತ್ರ ಯುಗದ ವ್ಯೂಹದೊಳಗೆ ಮನುಷ್ಯತ್ವವೂ ಮಾನವ ಸಂಬಂಧಗಳೂ ತಮ್ಮತನಗಳನ್ನು ಕಳೆದುಕೊಳ್ಳುತ್ತಾ ಮನುಷ್ಯ ಯಂತ್ರದೊಳಗೆ ಯಂತ್ರವಾಗುತ್ತಾ ಕ್ರಮೇಣ ಶಿಥಿಲವಾಗುವುದನ್ನು ಚಿತ್ರಿಸುವ ಚಾಪ್ಲಿನ್ನರ "ಮಾಡರ್ನ್ ಟೈಮ್ಸ್" ತಮಾಷೆಯೊಂದಿಗೇನೇ ಗಂಭೀರ ವಿಷಯವನ್ನು ಸಮರ್ಪಕವಾಗಿ ಅಭಿವ್ಯಕ್ತಗೊಳಿಸಿತು.

ಇದೇ ಸಮಯದಲ್ಲೇ ಚಲನಚಿತ್ರ ಕ್ಷೇತ್ರದಲ್ಲಿ ಒಂದು ದೊಡ್ಡ ಕ್ರಾಂತಿ ಸಂಭವಿಸಿತು. ಮಾತಿಲ್ಲದಿದ್ದ ಚಲನಚಿತ್ರಗಳು ಮಾತಾಡ ತೊಡಗಿದವು. ಆದರೆ ಚಾಪ್ಲಿನ್ ಇದನ್ನು ಪೂರ್ತಿಯಾಗಿ ಸ್ವೀಕರಿಸಲಿಲ್ಲ. ಕಲಾವಿದನ ಅಂತರ್ಗತ ಪ್ರತಿಭೆಯ ಮೂಲಕ ಹೊರ ಹೊಮ್ಮುವ ಭಾವನೆಗಳಿಗೆ ಮಾತುಗಳು ತಡೆಯೊಡ್ಡುತ್ತವೆಂಬುದು ಚಾಪ್ಲಿನ್ನರ ಆಗಿನ ಅಭಿಪ್ರಾಯವಾಗಿತ್ತು.

ತಮ್ಮ 'ಸಿಟಿ ಲೈಟ್ಸ್' ಎಂಬ ಚಿತ್ರದಲ್ಲಿ ಚಾಪ್ಲಿನ್ ಮಾತುಗಳನ್ನು ಬಳಸದೆ ಕೇವಲ ಮಾತ್ರ ಬಳಸಿ ಕೊಂಡರು. ಮಾತಾಡುವ ಚಿತ್ರಗಳು ಬರಲಾರಂಭಿಸಿದ ನಂತರ ಕೂಡ ಈ ಚಿತ್ರ ಅಪಾರ ಜನಪ್ರಿಯತೆ ಪಡೆದುಕೊಂಡಿತು. ಈ ಚಿತ್ರ ತಮಿಳಿನಲ್ಲಿ 'ಕಣ್ಣಮ್ಮ ಎನ್ ಕಾದಲಿ' ಎಂಬ ಹೆಸರಿನಲ್ಲಿ ರೀಮೇಕ್ ಆಯಿತು.

ಎರಡನೇ ಮಹಾಯುದ್ಧದ ಆರಂಭದ ಸಮಯ ಫ್ಯಾಸಿಸಂ ತನ್ನ ಕ್ರೂರ ಬಾಹುಗಳನ್ನು ಯುರೋಪಿನತ್ತ ಚಾಚತೊಡಗಿತ್ತು. ಆಗ ಚಾಪ್ಲಿನ್ 'ದಿ ಗ್ರೇಟ್ ಡಿಕ್ಟೇಟರ್' ಎಂಬ ಚಿತ್ರವನ್ನು ತಯಾರಿಸಿ ಹಿಟ್ಲರ್‌ನನ್ನು ಖಂಡಿಸಲು ಉದ್ದೇಶಿಸಿದ್ದರು. ಅದು 1936ರ ವೇಳೆ, ಅಮೆರಿಕ ನೇರವಾಗಿ ಯುದ್ಧದಲ್ಲಿ ಭಾಗವಹಿಸಿರಲಿಲ್ಲ. ಜರ್ಮನಿಯನ್ನು ಎದುರು ಹಾಕಿಕೊಳ್ಳಲು ಬಯಸದ ಅಮೆರಿಕ ಚಿತ್ರದ ತಯಾರಿಕೆಯನ್ನು ನಿಷೇಧಿಸಿತು.

ಆದರೆ ಪರ್ಲ್ ಹಾರ್ಬರ್‌ನಲ್ಲಿ ಅಮೆರಿಕದ ಹಡಗುಗಳ ಮೇಲೆ ಜಪಾನ್ ಬಾಂಬ್ ಹಾಕಿದ ನಂತರ ಅಮೆರಿಕ ಯುದ್ಧದಲ್ಲಿ ನೇರವಾಗಿ ಇಳಿಯಬೇಕಾಯಿತು. 'ಚಾಪ್ಲಿನ್ 'ದಿ ಗ್ರೇಟ್ ಡಿಕ್ಟೇಟರ್' ಚಿತ್ರ ತಯಾರಿಸಲು ಅಮೆರಿಕ ಅನುಮತಿ ನೀಡಿತು.

ಜಗತ್ತಿನ ಹತ್ತು ಅತ್ಯುತ್ತಮ ಚಿತ್ರಗಳಲ್ಲಿ 'ದಿ ಗ್ರೇಟ್ ಡಿಕ್ಟೇಟರ್' ಕೂಡ ಒಂದಾಗಿದೆ.

ಈ ಚಿತ್ರದ ಕೊನೆಯಲ್ಲಿ ಹಿಟ್ಲರ್‌ನ ಪಾತ್ರಧಾರಿ ಚಾಪ್ಲಿನ್ (ಚಿತ್ರದ ಕಥೆಯಲ್ಲಿ ನಿಜವಾದ ಹಿಟ್ಲರ್‌ನಂತೆಯೇ ಕಾಣುವ ನಾವಿಕನೊಬ್ಬ ಸಂದರ್ಭವಶಾತ ನಿಜವಾದ ಹಿಟ್ಲರನ ಸ್ಥಾನವನ್ನು ಆಕ್ರಮಿಸಿಕೊಳ್ಳುತ್ತಾನೆ. ನಾವಿಕ ಹಿಟ್ಲರ್ ಪಾತ್ರ ನಿರ್ವಹಿಸಿರುವುದು ಚಾಪ್ಲಿನ್) ಮಾಡುವ ದೀರ್ಘ ಭಾಷಣವೇ ಚಿತ್ರದ ಜೀವಾಳ. ಈ ಚಿತ್ರವನ್ನು ನೋಡಿದವರು ಯಾರೇ ಆಗಲಿ ಈ ಸನ್ನಿವೇಶವನ್ನು ಮಾತ್ರ ಜೀವಮಾನ ಪರ್ಯಂತ ಮರೆಯಲಾರರು. ಅದೊಂದು ಅದ್ಭುತ ಅನುಭವ. ಚಾಪ್ಲಿನ್ನರ ಪ್ರತಿಭೆಯ ಸಾರ ಸರ್ವಸ್ವವನ್ನೇ ಈ ಸನ್ನಿವೇಶದಲ್ಲಿ ಎರಕಹೊಯ್ಯಲಾಗಿದೆ.

ಚಾಪ್ಲಿನ್ ಸಹಜವಾಗಿಯೇ ಬಂಡವಾಳಶಾಹಿತ್ವವನ್ನು ವಿರೋಧಿಸಿದರು. 1947ರಲ್ಲಿ ಚಾಪ್ಲಿನ್ 'ಮಿಸ್ಟರ್ ವರ್ಡರ್ಸ್' ಎಂಬ ಚಿತ್ರವನ್ನು ತಯಾರಿಸಿದರು. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಒಬ್ಬ ವ್ಯಕ್ತಿ ಶ್ರೀಮಂತನಾಗಬೇಕಾದರೆ ಆತ ಕೊಲೆ, ಸುಲಿಗೆ, ಮೋಸ, ವಂಚನೆಗಳನ್ನು ಮಾಡಲೇಬೇಕಾಗುತ್ತದೆ ಎಂಬುದನ್ನು ಈ ಚಿತ್ರ ಪರಿಣಾಮಕಾರಿಯಾಗಿ ಎತ್ತಿ ಹೇಳಿತು.

ಇದರಿಂದಾಗಿ ಅಮೆರಿಕದಲ್ಲಿ ಚಾಪ್ಲಿನ್ ಒಬ್ಬ ಕಮ್ಯೂನಿಸ್ಟ್ ಎಂಬ ಕೂಗು ಎದ್ದಿತು.

ಕಮ್ಯೂನಿಸಂ ಅನ್ನು ಬೇರು ಸಹಿತ ಕಿತ್ತೆಸೆಯುತ್ತೇನೆ ಎಂದು ಗರ್ಜಿಸುತ್ತಿದ್ದ ಮೆಕಾರ್ಥಿ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಒಳಾಡಳಿತ ಸಚಿವನಾಗಿದ್ದ ಕಾಲವದು.

ಚಾಪ್ಲಿನ್ನನ ಚಿತ್ರಗಳನ್ನು ಬಹಿಷ್ಕರಿಸಬೇಕೆಂಬ ಪ್ರಚಾರ ಪ್ರಾರಂಭವಾಯಿತು. 'ಅಮೆರಿಕನ್ ಲೀಜಿಯನ್' ಎಂಬ ಗುಂಪು ಚಾಪ್ಲಿನ್ ವಿರೋಧಿ ಭಾವನೆಗಳನ್ನು ಹರಡತೊಡಗಿತು.

ಅಮೆರಿಕದ ಸಂಸತ್ ಮಂಡಳಿ ಚಾಪ್ಲಿನ್‌ಗೆ ಸಮನ್ಸ್ ಕಳಿಸಿತು. ಚಾಪ್ಲಿನ್ ತಮ್ಮ ಪ್ರತಿಕ್ರಿಯೆಯನ್ನು ಬರೆದು ಕಳಿಸಿದರು. ಆದರೆ ಸಂಸತ್ ಮಂಡಳಿ ಅದನ್ನು ಒಪ್ಪಿಕೊಳ್ಳಲು ಸಿದ್ಧವಿರಲಿಲ್ಲ.

ಈ ಮಧ್ಯೆ ಚಾಪ್ಲಿನ್ ತಮ್ಮ 'ಲೈಮ್‌ಲೈಟ್' ಚಿತ್ರವನ್ನು ಬಿಡುಗಡೆ ಮಾಡಲು ಅಮೆರಿಕದಿಂದ ಲಂಡನ್‌ಗೆ ತೆರಳಿದರು. ಚಾಪ್ಲಿನ್ ಅಮೆರಿಕದಲ್ಲಿದ್ದ ಸಮಯದಲ್ಲೂ ಬ್ರಿಟಿಷ್ ಪ್ರಜೆಯಾಗಿಯೇ ಉಳಿದಿದ್ದರಿಂದ ಚಾಪ್ಲಿನ್ ಮತ್ತೆ ಅಮೆರಿಕಕ್ಕೆ ಹಿಂತಿರುಗಲು ಅಮೆರಿಕನ್ ದೂತಾವಾಸ 'ವೀಸಾ' ನೀಡಲು ನಿರಾಕರಿಸಿತು.

ಚಾಪ್ಲಿನ್ ನಂತರ ಸ್ವಿಟ್ಜರ್‌ಲ್ಯಾಂ... ನಲ್ಲಿ ನೆಲೆಸಿದರು. ಅಮೆರಿಕದಲ್ಲಿ... ಚಾಪ್ಲಿನ್ನರ ಬ್ಯಾಂಕ್ ಲೆಕ್ಕವನ್ನು ಅಮೆರಿ... ಸರ್ಕಾರ ಮುಟ್ಟುಗೋಲು ಹಾ... ಕೊಂಡಿತು. ಇದನ್ನು ಮತ್ತೆ 1966ರಲ್ಲಿ... ಹಿಂತಿರುಗಿಸಿತು.

ಆಶ್ಚರ್ಯವೆಂದರೆ ಅದೇ ಅಮೆರಿ... ಸರ್ಕಾರ 1972ರಲ್ಲಿ ಚಾಪ್ಲಿನ್ನರಿಗೆ ಆಸ್ಕರ್... ಪ್ರಶಸ್ತಿ ನೀಡಿ ಅದನ್ನು ಸ್ವೀಕರಿಸಲು... ಅಮೆರಿಕಕ್ಕೆ ಬರಬೇಕೆಂದು ಆಮಂತ್ರಿ... ಸಿತು. ಆಮಂತ್ರಿಸಬೇಕಾದ ಅನಿವಾರ್ಯತೆಯೊ... ದಗಿತು.

ತನ್ನ 5 ನೇ ವಯಸ್ಸಿನಲ್ಲಿ ಲಂಡನ್... ನಗರದ ಬೀದಿಗಳಲ್ಲಿ ಭಿಕ್ಷೆ ಬೇಡಿ... ಬದುಕಿದ ಚಾರ್ಲಿಚಾಪ್ಲಿನ್ನನಿಗೆ 1975 ರಲ್ಲಿ... ಅಲ್ಲಿಯ ರಾಣಿ ಎಲಿಜಬೆತ್ 'ನೈಟ್' (KNIGHT) ಪದವಿ ನೀಡಿ 'ಸರ್ ಚಾರ್ಲ್ಸ್' ಎಂದು ಆತನನ್ನು ಕರೆದಳು. ಎಂಥ ವಿಚಿತ್ರ! ಬದುಕಿನ ಬಂಡಿ... ಯಾರನ್ನು ಎತ್ತ ಕೊಂಡೊಯ್ಯುವುದೋ... ಯಾರಿಗೆ ಗೊತ್ತು?

ಜಗತ್ತನ್ನೆಲ್ಲಾ ನಗಿಸಿ... ಚಿಂತಿಸುವಂತೆಯೂ ಮಾಡಿದ ಚಾಪ್ಲಿನ್ 1977ರ ಡಿಸೆಂಬರ್‌ನ ಕ್ರಿಸ್‌ಮಸ್ ರಾತ್ರಿಯಲ್ಲಿ ತೀರಿಕೊಂಡರು.

"ಚಲನ ಚಿತ್ರ ಜಗತ್ತು ನಮಗೆ... ನೀಡಿದ ಏಕೈಕ ಮೇಧಾವಿ" ಎಂಬುದಾಗಿ... ಬರ್ನಾರ್ಡ್ ಷಾ ಉದ್ಗರಿಸಿದರು.

ಚಿತ್ರರಂಗದ ಶೈಶಾವಸ್ಥೆಯಲ್ಲೇ... ಅದನ್ನೊಂದು ಸಾಮಾಜಿಕ ಪ್ರಜ್ಞೆಯನ್ನು... ಮೂಡಿಸುವ ಉಪಕರಣವನ್ನಾಗಿ ದುಡಿಸಿ... ಕೊಂಡು ಸೃಜನಶೀಲತೆಗೆ ಹಾದಿಯನ್ನು... ಹಾಕಿಕೊಟ್ಟ ಚಾಪ್ಲಿನ್ನನ ಹೆಸರು ಚಂದ್ರಾರ್ಕವಾಗಿ ಉಳಿಯುತ್ತದೆ.

(ಆಧಾರ)

ಅಂಬೇಡ್ಕರ್ ಜಯಂತಿ ಸಂದರ್ಭದಲ್ಲಿ

ಅಂಬೇಡ್ಕರ್‌ರವರು ಅಸ್ಪೃಶ್ಯರ ಪರವಾಗಿ ನಿಂತ ಅತ್ಯಂತ ಪ್ರಮುಖ ಹಾಗೂ ಅವಿಶ್ರಾಂತ ಹೋರಾಟಗಾರರು. ಉಚ್ಚ ಜಾತಿಯವರ ಗೋಸುಂಬೆತನವನ್ನು ಅವರು- ಬಯಲಿಗೆಳೆದರು. ಜಾತಿ ಪದ್ಧತಿ ಬಗ್ಗೆ ಕಾಂಗ್ರೆಸಿನ ನಿಲುವುಗಳನ್ನು ಗೇಲಿ ಮಾಡಿದರು. ಬ್ರಿಟಿಶ್ ಸಾಮ್ರಾಜ್ಯಶಾಹಿಗಳನ್ನು ಅವರು ಬಿಡಲಿಲ್ಲ. ಅಸ್ಪೃಶ್ಯರ ಪರಿಸ್ಥಿತಿ ಬಗ್ಗೆ ಬ್ರಿಟಿಶರ ಕಣ್ಣೀರು ಅದನ್ನು ನಿವಾರಿಸುವ ಉದ್ದೇಶದಿಂದ ಕೂಡಿದ್ದಲ್ಲ ಬದಲಾಗಿ ಭಾರತದ ರಾಜಕೀಯ ಪ್ರಗತಿಯನ್ನು ಕುಂಠಿತಗೊಳಿಸುವಲ್ಲಿ ಈ ಬಗೆಯ ಕಣ್ಣೀರು ಉಪಯೋಗವಾಗುತ್ತದೆ ಎಂಬ ದೃಷ್ಟಿಯಿಂದ ಮಾತ್ರ ಎಂದು ದಲಿತ ಯುವಕರನ್ನು ಎಚ್ಚರಿಸಿದರು. ರಾಜಕೀಯ ಶಕ್ತಿ ಕೈಯಲ್ಲಿ ಬರುವವರೆಗೆ ಅಸ್ಪೃಶ್ಯರ ಗೋಳಿಗೆ ಕೊನೆಯಿಲ್ಲ. ಬ್ರಿಟಿಶ್ ಸರ್ಕಾರ ಇರುವವರೆಗೆ ರಾಜಕೀಯ ಅಧಿಕಾರದಲ್ಲಿ ಪಾಲು ಪಡೆಯುವುದು ಸಾಧ್ಯವಿಲ್ಲ ಎಂದು ಎಚ್ಚರಿಸಿದರು.

ಕಾಂಗ್ರೆಸ್ಸಿನ ನಿಲುವುಗಳನ್ನು ಗೇಲಿ ಮಾಡುತ್ತಾ ಅವರು ಅಸ್ಪೃಶ್ಯರಿಗೆ ಭೂಮಿ ಕೊಡಿ, ಪ್ರತ್ಯೇಕ ವಸತಿ ಕೊಡಿ ಎಂದು ಒತ್ತಾಯಿಸಿದರು. ಇತರ ಜಾತಿಗಳ ಮೇಲೆ ಗುಲಾಮತನದ ಅವಲಂಬನೆಯಿಂದ ಪಾರಾಗಲು ಎಲ್ಲಾ ಅಸ್ಪೃಶ್ಯರಿಗೆ ಜಮೀನಿನ ವಿತರಣೆಯ ವಿಚಾರ ಅತ್ಯಂತ ಸರಿಯಾದ ವಿಚಾರ. ಆದರೆ ಕರ್ಷಕ ಕ್ರಾಂತಿ ಸಾಧಿಸದೆ ಇದೂ ಕೈಗೂಡುವಂತಿರಲಿಲ್ಲ. ಎಲ್ಲಾ ಭೂಹೀನರ ಐಕ್ಯ ಹೋರಾಟದಿಂದ ಮಾತ್ರವೇ ಇದು ಕೈಗೂಡವಂತಹದ್ದು.

ಹಿಂದೂ ಸಮಾಜದ ಅನ್ಯಾಯಗಳಿಂದ ಪಾರಾಗಲು ಮುಂದೆ ಅಂಬೇಡ್ಕರರು ಬೌದ್ಧ ಧರ್ಮ ಸ್ವೀಕರಿಸಿ ಎಂದು ತಮ್ಮ ಅನುಯಾಯಿಗಳಿಗೆ ಹೇಳಿದರು. ಆದರೆ ಅನ್ಯಾಯ ಪೂರ್ಣ ಭೂ ಸಂಬಂಧಗಳ ಮೇಲೆ ನಿಂತ ಗಂಭೀರ ಸಾಮಾಜಿಕ ವಾಸ್ತವತೆ ಬದಲಾಗಲಿಲ್ಲ. ಪ್ರೇಮ ಮತ್ತು ಸಮತೆಯ ಈ ಹುಡುಕಾಟ ಯಶಸ್ವಿಯಾಗಲಿಲ್ಲ ಎಂದು ಇತ್ತೀಚಿನ ಅತ್ಯಾಚಾರಗಳು ತೋರಿಸಿಕೊಟ್ಟಿವೆ.

ದುರಂತದ ವಿಷಯವೆಂದರೆ ಅತ್ಯಂತ ದಲಿತ ಕೋಮುಗಳಲ್ಲಿ ಮೂಡಿಬಂದ ಬುದ್ಧಿಜೀವಿ ವಿಭಾಗ ಕೂಡಾ ಸೈದ್ಧಾಂತಿಕವಾಗಿ ಸಮಾನತೆ, ಹೆಚ್ಚು ಉದ್ಯೋಗಾವಕಾಶ, ಮೀಸಲಾತಿ ಮುಂತಾದವುಗಳ ಬಾಯಿ ಘೋಷಣೆಯ ಚೌಕಟ್ಟಿನಾಚೆಗೆ ನೋಡುವಲ್ಲಿ ವಿಫಲಗೊಂಡಿತು. ಸದ್ಯದ ಸಾಮಾಜಿಕ-ಆರ್ಥಿಕ ವ್ಯವಸ್ಥೆಯನ್ನು ನಾಶಪಡಿಸುವ ವಿಚಾರ ಈ ವಿಭಾಗದ ಪ್ರಜ್ಞೆಯ ಭಾಗವಾಗಲಿಲ್ಲ.

ಭೂಸಂಬಂಧಗಳ ವಿರುದ್ಧ ಹೋರಾಟ, ಅಂದರೆ ಇತರರೊಂದಿಗೆ ಸೇರಿ ನಡೆಸುವ ಐಕ್ಯ ಹೋರಾಟ ಅವರ ದೃಷ್ಟಿಗೆ ಬರಲಿಲ್ಲ. ಈ ಬುದ್ಧಿಜೀವಿಗಳು ಒಂದಿಲ್ಲೊಂದು ಘಟ್ಟದಲ್ಲಿ ಬೂರ್ಜ್ವಾ ಪ್ರಜಾಪ್ರಭುತ್ವದ ಚೌಕಟ್ಟನಷ್ಟೇ ಸ್ವೀಕರಿಸಿ ಸದ್ಯದ ಆಸ್ತಿ ಸಂಬಂಧಗಳನ್ನು ಮುಟ್ಟದ ಪ್ರಜಾಪ್ರಭುತ್ವ ಹಕ್ಕುಗಳ ಸಾಮಾನ್ಯ ಘೋಷಣೆಯಿಂದಷ್ಟೇ ತೃಪ್ತರಾದರು.

ಕಾಂಗ್ರೆಸ್ ಮುಖಂಡರು ಮತ್ತು ಅವರ ಗೋಸುಂಬೆತನದ ವಿರುದ್ಧ ಅಂಬೇಡ್ಕರ್‌ರಷ್ಟು ಕಟುವಾಗಿ ಬೇರೆ ಯಾರೂ ಟೀಕೆ ಮಾಡಿರಲಿಕ್ಕಿಲ್ಲ. ಆದರೂ ಪ್ರಜಾಪ್ರಭುತ್ವವೆಂದರೆ ಇದಕ್ಕಿಂತ ಹೆಚ್ಚಿರಲು ಸಾಧ್ಯವೇ ಇಲ್ಲವೆಂದು ಕಾಂಗ್ರೆಸ್ಸಿಗರು ಈಗಲೂ ಹಾಡಿ ಹೊಗಳುವ ಭಾರತೀಯ ಸಂವಿಧಾನದ ಒಬ್ಬ ಪ್ರಮುಖ ಶಿಲ್ಪಿಯಾದರು ಅವರು. ಈ ಸಂವಿಧಾನದ ಆಶ್ರಯದಲ್ಲೇ ಈಗ ದಲಿತರ ಮನೆಗಳು ಭಸ್ಮವಾಗುತ್ತಿವೆ, ಲೂಟಿಯಾಗುತ್ತಿವೆ, ದಲಿತ ಮಹಿಳೆಯರ ಮಾನಾಪಹರಣವಾಗುತ್ತಿದೆ, ಕೊಲೆಯಾಗುತ್ತಿದೆ. ತಾನು ಮೋಸ ಹೋದೆ ಎಂದು ಅವರಿಗೆ ಅನ್ನಿಸಿದ್ದರೆ ಆಶ್ಚರ್ಯವೇನು?

-ಬಿ.ಟಿ.ರಣದಿವೆ

('ಜಾತಿ, ವರ್ಗ ಮತ್ತು ಆಸ್ತಿ ಸಂಬಂಧ' ಎಂಬ ಲೇಖನದಿಂದ)

ದೂರ ನಿಲ್ಲುವ ಪ್ರವೃತ್ತಿ ಕೊನೆಗೊಳ್ಳಬೇಕು

ಕಾಂಗ್ರೆಸ್ ಸರ್ಕಾರಗಳು ಸರ್ಕಾರೀ ಸೇವೆಗಳಲ್ಲಿ ಮೀಸಲಾತಿಯ ಆಮಿಷ ತೋರಿಸಿ ಹರಿಜನ, ಆದಿವಾಸಿ ಹಾಗೂ ಹಿಂದುಳಿದ ವರ್ಗಗಳ ಬೆಂಬಲ ಪಡೆಯಲು ಪ್ರಯತ್ನಿಸುತ್ತಾ ಬಂದಿವೆ. ಇದು ಭೂಸುಧಾರಣೆ ಮತ್ತು ಭೂಮಿಯ ಮರು ವಿತರಣೆಯ ಪ್ರಶ್ನೆಯನ್ನು ಬದಿಗೆ ತಳ್ಳುವ ಒಂದು ಉಪಾಯ ಕೂಡಾ. ಹಲವಾರು ವರ್ಷಗಳ ಮೀಸಲಾತಿ ಧೋರಣೆ ದಲಿತರಲ್ಲಿ ಕೇವಲ ಉದ್ಯೋಗಾವಕಾಶದಲ್ಲಿ ಮಾತ್ರ ಆಸಕ್ತಿಯಿರುವ ಒಂದು ಅತೀ ಸಣ್ಣ ವಿದ್ಯಾವಂತ ವಿಭಾಗವನ್ನು ಸೃಷ್ಟಿಸಿತಷ್ಟೇ. ಬಹುಪಾಲು ಜನಸಮೂಹದ ಗೋಳು ಹಾಗೇ ಮುಂದುವರೆಯಿತು. ಈಗ ವಿದ್ಯಾವಂತ ವಿಭಾಗಗಳ ಅಸಂತೃಪ್ತಿ ಮತ್ತು ಅವಿದ್ಯಾವಂತ ಜನಸಮೂಹಗಳ ಹೆಚ್ಚುತ್ತಿರುವ ಸಂಕಟಗಳಿಂದಾಗಿ ಸಮರಶೀಲ ಪ್ರತಿಭಟನೆಗಳು, ಕಾರ್ಯಾಚರಣೆಗಳು ಭುಗಿಲೇಳುತ್ತಿವೆ. ಸಾಮಾಜಿಕ ಭೇದಭಾವ, ಜಾತಿ ದಮನ, ಪೊಲೀಸ್ ದಮನ ಇತ್ಯಾದಿಗಳ ವಿರುದ್ಧ ಈ ಹೋರಾಟ ಸದ್ಯ ಅವರ ಜಾತಿ ಮುಖಂಡರ ನೇತೃತ್ವದಲ್ಲಿ ನಡೆಯುತ್ತಿವೆ. ಇವು ಕರ್ಷಕ ಜನಸಮೂಹಗಳ ಊಳಿಗಮಾನ್ಯ ವಿರೋಧಿ, ಭೂಮಾಲಕ-ವಿರೋಧಿ ಅಸಂತೃಪ್ತಿಯನ್ನು ಪ್ರತಿನಿಧಿಸುತ್ತವೆ. ಅಪರೂಪವೆಂಬಂತೆ ಈ ಚಳುವಳಿಗಳು ಭೂಹೀನರಿಗೆ ಭೂಮಿಯ ಪ್ರಶ್ನೆ, ಅತ್ಯಾಚಾರಗಳ ವಿರುದ್ಧ ಪ್ರತಿಭಟನೆಗಳಲ್ಲಿ ಕಿಸಾನ್ ಸಭಾದೊಂದಿಗೆ ಎಡ ಶಕ್ತಿಗಳೊಂದಿಗೆ ಸಹಕರಿಸುತ್ತಿವೆ. ಆದರೆ ಸುಮಾರಾಗಿ ಅವರ ಮುಖಂಡರು ಎಲ್ಲರನ್ನೂ ಒಳಗೊಳ್ಳುವ ಸಾಮಾನ್ಯ ಹೋರಾಟಗಳ ಬಗ್ಗೆ ಪಂಥವಾದಿ, ಕೆಲವೊಮ್ಮೆ ವೈಷಮ್ಯಪೂರ್ಣ ನಿಲುವನ್ನು ಕೂಡಾ ತಳೆಯುತ್ತಾರೆ. ದೂರ ಸರಿದು ನಿಲ್ಲುವ ಈ ಪರಿಸ್ಥಿತಿಯನ್ನು ಬದಲಿಸಬೇಕು. ಇಂತಹ ಸಂಘಟನೆಗಳ ತಿಳುವಳಿಕೆ, ಅವು ವಾಸ್ತವಿಕವಾಗಿ ವಹಿಸುವ ಪಾತ್ರದ ಬಗ್ಗೆ ಸೂಕ್ತ ನಿಲುವು ರೂಪಿಸಬೇಕು.

-ಸಿ.ಪಿ.ಐ(ಎಂ)ನ 13ನೇ ಮಹಾಧಿವೇಶನದ ರಾಜಕೀಯ ವರದಿಯಿಂದ

ಏಪ್ರಿಲ್ 15 ರೊಳಗೆ ಬಿನ್ನಿಮಿಲ್ ತೆರೆಯದೇ ಹೋದರೆ

ಬೆಂಗಳೂರು ಬಂದ್‌ಗೆ ಕರೆ

ಬೆಂಗಳೂರು ನಗರದಲ್ಲಿರುವ ಬಿನ್ನಿ ಮಿಲ್ ಕಾರ್ಖಾನೆ ಅಕ್ರಮವಾಗಿ ಮುಚ್ಚಿ ಸುಮಾರು 6 ತಿಂಗಳುಗಳು ಸಂದಿವೆ. 7ಸಾವಿರದ ಕಾರ್ಮಿಕ ಕುಟುಂಬಗಳು ಇಂದು ಬೀದಿ ಪಾಲಾಗಿವೆ.

ವಿವಿಧ ಹಂತದ ಹೋರಾಟ ನಡೆಸಿರುವ ಕಾರ್ಮಿಕರು ತಮ್ಮ ಹೋರಾಟವನ್ನು ತೀವ್ರಗೊಳಿಸಲು ನಿರ್ಧರಿಸಿದ್ದಾರೆ. ಏಪ್ರಿಲ್ 10ರಂದು ನಗರದ ಚಿಕ್ಕಲಾಲ್ ಬಾಗ್‌ನಿಂದ ಬೆಳಿಗ್ಗೆ 10ಘಂಟೆಗೆ ಬಿನ್ನಿ ಕಾರ್ಮಿಕರು ಕುಟುಂಬ ಸಮೇತವಾಗಿ ಬೀದಿಗಿಳಿದು ಮೆರವಣಿಗೆ ನಡೆಸಿದರು. ಕಾರ್ಮಿಕರ ಪತ್ನಿಯರು, ಶಾಲಾ ಕಾಲೇಜುಗಳಿಗೆ ಹೋಗುವ ಪುಟಾಣಿ ಮಕ್ಕಳು ತಮ್ಮ ಜೀವನದ ಪ್ರಶ್ನೆಯಾದ ತಂದೆಯ ಉದ್ಯೋಗಕ್ಕೆ ಕುತ್ತಾಗಿರುವ ಬಿನ್ನಿ ಆಡಳಿತದ ವರ್ಗ ಹಾಗೂ ರಾಜೀವ್ ಗಾಂಧಿ-ಬೊಮ್ಮಾಯಿ ಸರ್ಕಾರಗಳನ್ನು ಧಿಕ್ಕರಿಸಿ ಘೋಷಣೆಗಳು ಮೊಳಗಿದವು.

ರಾಜೀವ್ ಸರ್ಕಾರದ ಹೊಸ ಜವಳಿ ನೀತಿಯನ್ನು ಬಳಸಿಕೊಂಡ ಬಿನ್ನಿ ಆಡಳಿತ ವರ್ಗ ಕೆಲಸದ ಭಾರ ಹೆಚ್ಚಿಸುವ, 6ಸಾವಿರ ಕಾರ್ಮಿಕರಲ್ಲಿ 3ಸಾವಿರ ಕಡಿತಗೊಳಿಸುವಂತಹ ಷರತ್ತುಗಳನ್ನು ಹಾಕಿದೆ. 1987-88ನೇ ಸಾಲಿನಲ್ಲಿ ಕಾರ್ಮಿಕರಿಗೆ ಕಾನೂನು ರೀತ್ಯ ನೀಡಬೇಕಾದ ಬೋನಸ್ಸು ನೀಡದೇ ವಂಚಿಸಲಾಗಿದೆ. ಆದರೆ ಇದೇ ಬಿನ್ನಿ ಆಡಳಿತ ವರ್ಗ ಮದ್ರಾಸ್ ಮಿಲ್‌ಗಳಲ್ಲಿ ಅಲ್ಲಿನ ಕಾರ್ಮಿಕರಿಗೆ ಬೋನಸ್ಸು ಹಾಗೂ 15 0 ರೂ.ಗಳ ಉಡುಗೊರೆ ನೀಡಿದೆ.

ಕರ್ನಾಟಕದ ಉಚ್ಛನ್ಯಾಯಾಲಯದ ವಿಭಾಗೀಯ ಪೀಠ ಇಂಡಸ್ಟ್ರೀಯಲ್ ಡಿಸ್ಪೂಟ್ ಆಕ್ಟ್‌ನ ಸೆಕ್ಷನ್ 25 -0 ಪ್ರಕಾರ ಯಾವುದೇ ಕಾರ್ಖಾನೆ ಬೀಗಮುದ್ರೆ ಘೋಷಿಸಲು ಸರ್ಕಾರದ ಅನುಮತಿ ಪಡೆಯಬೇಕು ಆದರೆ ಸರ್ಕಾರದ ಕಾಯ್ದೆ ಕಾನೂನುಗಳನ್ನು ಗಾಳಿಗೆ ತೂರಿ ಕಾರ್ಮಿಕರನ್ನು ಬೀದಿಪಾಲು ಮಾಡಿರುವ ಬಿನ್ನಿ ಆಡಳಿತ ವರ್ಗದ ವಿರುದ್ಧ ಲೇಬರ್ ಕಮೀಷನರ್‌ರವರು ನೆಪಮಾತ್ರಕ್ಕೆ ಒಂದು ಷೋಕಾಸ್ ನೋಟೀಸ್ ನೀಡಿ ತೆಪ್ಪಗಿದ್ದಾರೆ. ಮಾಲೀಕರ ವಿರುದ್ಧ ಯಾವುದೇ ಉಗ್ರ ಕ್ರಮ ಕೈಗೊಳ್ಳದಿರುವುದು ಖಂಡನೀಯ. ಚಿಕ್ಕಲಾಲ್‌ಬಾಗಿನಿಂದ ಹೊರಟ ಮೆರವಣಿಗೆ ಕೆ.ಆರ್‌ವೃತ್ತದ ಮೂಲಕ ವಿಧಾನಸೌಧದ ಎದುರು ಸಾಮೂಹಿಕ ಧರಣಿ ನಡೆಸಿತು.

ಕಾರ್ಮಿಕರನ್ನುದ್ದೇಶಿಸಿ ಮಾತನಾಡಿದ ಕರ್ನಾಟಕ ಸರ್ಕಾರದ ಕಾರ್ಮಿಕ ಮಂತ್ರಿ ಶ್ರೀಮಾನ್ ಗೋವಿಂದೇಗೌಡರವರು ಬಿನ್ನಿ ಆಡಳಿತ ವರ್ಗ ಮಿಲ್ ತೆರೆಯಲು ತಡ ಮಾಡಿದರೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲು ಹಿಂಜರಿಯುವುದಿಲ್ಲವೆಂದು ಆಶ್ವಾಸನೆ ನೀಡಿದರು. ನಂತರ ಸಭೆಯನ್ನುದ್ದೇಶಿಸಿ ಮಾತನಾಡಿದ ಸಿ.ಐ.ಟಿ.ಯು. ರಾಜ್ಯ ಪ್ರಧಾನ ಕಾರ್ಯದರ್ಶಿ ಕಾ॥ ವಿ.ಜೆ.ಕೆ.ನಾಯರ್ ಹಾಗೂ ಬಿನ್ನಿ ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿ ಕಾ॥ ಕೆ.ಎಸ್.ಸುಬ್ರಮಣ್ಯ ಮತ್ತು ಉಪಾಧ್ಯಕ್ಷ ಕಾ॥ ಆರ್.ಶ್ರೀನಿವಾಸ್ ರವರು ಕಾರ್ಮಿಕ ಮಂತ್ರಿಗಳು ಹಾಗೂ ರಾಜ್ಯದ ಮುಖ್ಯಮಂತ್ರಿಗಳು ಆಶ್ವಾಸನೆ ನೀಡಿದಂತೆ ಏಪ್ರಿಲ್ 15 ರೊಳಗೆ ಮಿಲ್ ತೆರೆಸಲು ಕ್ರಮ ಕೈಗೊಂಡು ಕಾರ್ಮಿಕರಿಗೆ ಕೊಡಬೇಕಾದ ಬೋನಸ್ಸು ಹಾಗೂ ಮಿಲ್ ಮುಚ್ಚಿದಂದಿನಿಂದ ಬರಬೇಕಾದ ಸಂಬಳವನ್ನು ನೀಡಬೇಕೆಂದು ಒತ್ತಾಯಿಸಿದರು.

ಸರ್ಕಾರ ಹಾಗೂ ಆಡಳಿತ ವರ್ಗ ಈ ಕುರಿತು ನಿರ್ಲಕ್ಷ್ಯ ತೋರಿದೆ ಆದರೆ ವಿವಿಧ ರಾಜಕೀಯ ಪಕ್ಷಗಳು ಹಾಗೂ ಕಾರ್ಮಿಕ ಸಂಘಟನೆಗಳನ್ನೊಳಗೊಂಡು ಹೋರಾಟ ತೀವ್ರಗೊಳಿಸಿ ಬೆಂಗಳೂರು ಬಂದ್ ನಡೆಯುವುದೆಂದು ಅವರುಗಳು ಎಚ್ಚರಿಸಿದರು.

ಕಾ॥ ರಮೇಶ್ ಮೇಲೆ ಪೊಲೀಸ್ ಹಲ್ಲೆ

ಆಟೋ ಮುಷ್ಕರದ ಸಮಯದಲ್ಲಿ, ಶಾಂತಿಯುತ ಪ್ರದರ್ಶನ ಹಾಗೂ ಮೆರವಣಿಗೆ ನಡೆಸಲು ಹೊರಟಿದ್ದ ಆಟೋ ಮುಷ್ಕರಕಾರರ ಮೇಲೆ ಹಠಾತ್ತನೆ ಧಾಳಿ ಮಾಡಿ ಬಂಧನ ಸತ್ರ ನಡೆಸಿದ್ದ ನಗರ ಪೊಲೀಸರು ತಮ್ಮ ದಮನಕಾರಿ ನೀತಿಯನ್ನು ಮುಂದುವರಿಸಿದ್ದಾರೆ. ಈ ನೀತಿಯ ಭಾಗವಾಗಿ ನಗರದ ಹಲವೆಡೆ ಆಟೋ ಚಾಲಕ ಸಂಘದ ಪದಾಧಿಕಾರಿಗಳ ಮೇಲೆ ಕೈ ಮಾಡಿದ್ದಾರೆ.

ಪಕ್ಷದ ಬೆಂಗಳೂರು ಜಿಲ್ಲಾ ಸಮಿತಿ ಸದಸ್ಯ ಹಾಗೂ ಬೆಂಗಳೂರಿನ ಆಟೋ ರಿಕ್ಷಾ ಚಾಲಕರ ಸಂಘದ ಅಧ್ಯಕ್ಷ ಎ.ವಿ.ರಮೇಶ್‌ರವರ ಮೇಲೆ ಹೇಳಿದ ಸತ್ರ ಬಂಧನ ಸಮಯದಲ್ಲಿ ಚಾಲಕರನ್ನು ಹಿಡಿದದ್ದೇ ಅಲ್ಲದೆ ಆಟೋರಿಕ್ಷಾಗಳನ್ನು ಹಿಡಿದು ಹಾಕಿದ್ದನ್ನು ಆದರಲ್ಲಿಯೂ ಈ ಬಗ್ಗೆ ಪೊಲೀಸ್ ಮೇಲಧಿಕಾರಿಗಳ ನಿರ್ದೇಶನವೇನೂ ಇಲ್ಲದಿದ್ದರೂ ಎರಡು ಆಟೋಗಳನ್ನು ರಾಜಾಜಿನಗರ ಠಾಣೆಯವರು ಮಾತ್ರ ಹಿಡಿದಿದ್ದರ ಬಗ್ಗೆ ಮಾಹಿತಿ ಕೇಳಿದಾಗ, ಅಷ್ಟಕ್ಕೇ ಕ್ರುದ್ಧರಾದ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್‌ರವರು ಅಲ್ಲಿಯೇ ಬಂಧಿಸಿ ಹಿಗ್ಗಾಮುಗ್ಗಾ ಥಳಿಸಲು ಆಜ್ಞೆ ನೀಡಿದರು. ಅಲ್ಲದೆ ಸುಳ್ಳು ಆಪಾದನೆಗಳನ್ನು ಹೊರಿಸಿ ಕೇಸ್ ರಿಜಿಸ್ಟರ್ ಮಾಡಿದರು. ಇದು ಬೆಂಗಳೂರು ನಗರದಲ್ಲಿ ಪೊಲೀಸರು ತಳೆದ ಹೊಸ ದಮನಕಾರಿ ನೀತಿಯ ಮತ್ತೊಂದು ಮುಖವಾಗಿದೆ.

ಈ ಮಾಹಿತಿ ತಿಳಿದ ಕೂಡಲೇ ಆಟೋ ಚಾಲಕರು ಮಿಂಚಿನ ಮುಷ್ಕರ ನಡೆಸಿ, ಪಕ್ಷದ ರಾಜ್ಯ ಸಮಿತಿ ಸದಸ್ಯ ಕಾ॥ ಎಸ್.ಆರ್.ಆರಾಧ್ಯ, ಬೆಂಗಳೂರು ಜಿಲ್ಲಾ ಸಿ.ಐ.ಟಿ.ಯು. ಕಾರ್ಯದರ್ಶಿ ಗಳಲ್ಲೊಬ್ಬರಾದ ಇ.ಕೆ.ಎನ್.ರಾಜನ್‌ರವರ ನೇತೃತ್ವದಲ್ಲಿ ಮೆರವಣಿಗೆ ಹೊರಟು ಮಲ್ಲೇಶ್ವರದ ಎಸಿಪಿಯವರಲ್ಲಿ ದೂರು ಸಲ್ಲಿಸಿದರು ಹಾಗೂ ಕಮೀಷನರ್‌ರವರ ಕಛೇರಿ ಮುಂದೆ ಪ್ರದರ್ಶನ ಹಾಗೂ ಧರಣಿ ನಡೆಸಿದರು. ಹೊರಗೆ ಹೋಗಿದ್ದ ಪೊಲೀಸ್ ಉಪ ಕಮೀಷನರ್‌ರು ತಮ್ಮ ಕಾರ್ಯಕ್ರಮ ರದ್ದುಮಾಡಿ ಕಛೇರಿಗೆ ಹಿಂದಿರುಗಿ ರಿಕ್ಷಾ ಚಾಲಕರ ಮನವಿಯನ್ನು ಸ್ವೀಕರಿಸಿದರು ಹಾಗೂ ಸೂಕ್ತ ಕ್ರಮ ಜರುಗಿಸುವ ಆಶ್ವಾಸನೆ ನೀಡಿದರು. ಪೊಲೀಸರ ದಮನಕಾರಿ ನೀತಿಯನ್ನು ಆಟೋರಿಕ್ಷಾ ಚಾಲಕರ ಸಂಘ ಖಂಡಿಸುತ್ತಾ ತಮ್ಮ ಬದುಕಿನ ರಕ್ಷಣೆಗಾಗಿ ಪ್ರಜಾಸತ್ತಾತ್ಮಕ ರೀತಿಯಲ್ಲಿ ಹೋರಾಡುತ್ತಿರುವ ರಿಕ್ಷಾ ಚಾಲಕರ ಮೇಲೆ ಕೈ ಮಾಡಿದ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿ ಮುಂದಿನ ಕ್ರಮ ಜರುಗಿಸಲು ಕೋರಿದ್ದಾರೆ.



ಬೆಂಗಳೂರಿನಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ

ಸಮಾನ ಹಕ್ಕಿಗಾಗಿ ಸಂಘಟಿತ ಹೋರಾಟಕ್ಕೆ ಕರೆ

ಅಂತರ್ರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ ಬೆಂಗಳೂರಿನಲ್ಲಿ ಮಾರ್ಚ್ 5 , 6, 8ರಂದು ಮೂರು ದಿನಗಳ ಕಾರ್ಯಕ್ರಮವೊಂದನ್ನು ನಡೆಸಿತು. ರಾಷ್ಟ್ರೀಯ ಭಾವೈಕ್ಯತೆ ಕುರಿತು ಕವಿಗೋಷ್ಠಿ, ವಿಶ್ವಶಾಂತಿ ಕುರಿತು ಭಾಷಣ ಸ್ಪರ್ಧೆ, ಪ್ರಜಾಪ್ರಭುತ್ವ ಮತ್ತು ಮಹಿಳೆಯರ ಹಕ್ಕುಗಳು ಕುರಿತು ವಿಚಾರ ಸಂಕಿರಣಗಳು ನಡೆದವು. ಶಿಕ್ಷಣ ತಜ್ಞರು ಬುದ್ಧಿಜೀವಿಗಳು ಸಾಹಿತಿಗಳು ಹಾಗೂ ಮಹಿಳಾ ಸಂಘಟನೆಗಳ ರಾಜ್ಯ ನಾಯಕರು ಪಾಲ್ಗೊಂಡಿದ್ದರು.

ರಾಷ್ಟ್ರೀಯ ಭಾವೈಕ್ಯತೆ ಕುರಿತು ಮಾರ್ಚ್ 5 ರಂದು ಮೊದಲ ದಿನ ನಡೆದ ಸಮಾರಂಭದ ಅಧ್ಯಕ್ಷತೆಯನ್ನು ಖ್ಯಾತ ಬಂಡಾಯ ಸಾಹಿತಿ ಬರಗೂರು ರಾಮಚಂದ್ರಪ್ಪನವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಮಾತನಾಡಿದ ಉಪನ್ಯಾಸಕ ಜಿ.ಕೆ.ಗೋವಿಂದರಾವ್‌ರವರು ಇಂದು ಜಾತಿ- ಭಾಷೆ, ಧರ್ಮದ ಹೆಸರಿನಲ್ಲಿ ಭಾರತವನ್ನು ಛಿದ್ರಗೊಳಿಸುವ ಶಕ್ತಿಗಳ ವಿರುದ್ಧ ಹೋರಾಡಬೇಕೆಂದರು. ಬರಗೂರುರವರು ಮಾತನಾಡಿ ಜನರ ಹೋರಾಟಗಳನ್ನು ಹತ್ತಿಕ್ಕುವುದರ ಮೂಲಕ ಪ್ರತ್ಯೇಕವಾದಿಗಳನ್ನು ದೂರ ಮಾಡಿ ಏಕಪಂಥೀಯ ಶಕ್ತಿಗಳನ್ನು ಬಲಪಡಿಸಬೇಕೆಂದು ಕರೆ ನೀಡಿದರು. ಕವಿಗೋಷ್ಠಿಯಲ್ಲಿ, ಹೆಸರಾಂತ ಕವಿಗಳಾದ ರಂಜಾನ್‌ದರ್ಗಾ, ಗುಡಿಹಳ್ಳಿ ನಾಗರಾಜ್, ಆರ್.ಜಿ. ಹಳ್ಳಿನಾಗರಾಜ್, ಶ್ರೀಮತಿ ಸಂಧ್ಯಾರೆಡ್ಡಿ, ಮಮತಾ ಜಿ.ಸಾಗರ್, ಬಿ.ಟಿ.ಲಲಿತಾ ನಾಯಕ್, ಸುಬ್ಬರಾವ್, ಆರತಿ, ಹೆಚ್.ಎನ್.ವಿನೋದ್, ಮುಂತಾದವರು ಕವಿತೆ ಓದಿದರು.

ನಗರದ ವಿವಿಧ ಕಾಲೇಜುಗಳ ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದ ವಿಶ್ವ ಶಾಂತಿ ಕುರಿತಾದ ಭಾಷಣ ಸ್ಪರ್ಧೆಯಲ್ಲಿ ತೀರ್ಪುಗಾರರ ಪರವಾಗಿ ಮಾತನಾಡಿದ ಸಮುದಾಯ ರಾಜ್ಯ ಕಾರ್ಯದರ್ಶಿ ಜಿ.ಎಂ. ವೆಂಕಟೇಶ್‌ರವರು ಅಣ್ವಸ್ತ್ರಗಳ ಸ್ಫೋಟಯಿಂದಾಗಿ ಇಂದು ಮಾನವರು ಶಾಂತರಾಗಿ ಸಮಾಧಾನದಿಂದ ಬದುಕಲು ಸಾಧ್ಯವಿಲ್ಲ. ಸಾಮ್ರಾಜ್ಯಶಾಹಿಗಳ ಈ ಯುದ್ಧ ಭೀತಿಯ ವಿರುದ್ಧ ಹೋರಾಡುತ್ತಿರುವ ಸೋವಿಯತ್ ಪ್ರಯತ್ನಗಳಿಗೆ ಹೆಚ್ಚು ಜಯ ದೊರಕುತ್ತಿದೆ ಎಂದು ಹೇಳಿ ಈ ಚಳುವಳಿ ಮತ್ತಷ್ಟು ಬಲಗೊಳ್ಳಲು ವಿಶ್ವದ ಜನತೆ ದುಡಿಯಬೇಕಾಗಿದೆ ಎಂದು ಹೇಳಿದರು.

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್‌ನ ರಾಜ್ಯ ಅಧ್ಯಕ್ಷ ಕಾ॥ ಹೆಚ್.ಎನ್.ನಾಗಮೋಹನ್‌ದಾಸ್ ಅಧ್ಯಕ್ಷತೆ ವಹಿಸಿದ್ದರು. ಎ.ಪಿ.ಎಸ್.ಕಾಲೇಜಿನ ಶುಭ, ಈಸ್ಟ್‌ವೆಸ್ಟ್ ಕಾಲೇಜಿನ ಕುಮಾರಿ ಪ್ರೇಮಲತಾ ಮತ್ತು ಜಯಶ್ರೀಯವರು ಅನುಕ್ರಮವಾಗಿ ಮೊದಲನೆ, ಎರಡನೆ ಮತ್ತು ಮೂರನೇ ಬಹುಮಾನ ಗಳಿಸಿದರು.

ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ಧಾಳಿ ನಡೆದಾಗ ಮೊದಲ ಪ್ರಹಾರ ಬೀಳುವುದು ತುಳಿತಕ್ಕೊಳಗಾಗಿರುವ ಜನರ ಮೇಲೆ ಮತ್ತು ಮಹಿಳೆಯರ ಮೇಲೆ ಆದ್ದರಿಂದ ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಯಲ್ಲಿ, ಮಹಿಳೆಯರು ಹೆಚ್ಚು ಪಾಲ್ಗೊಂಡು ಚಳುವಳಿ ಮಾಡಬೇಕೆಂದು ಪತ್ರಕರ್ತೆ ಶ್ರೀಮತಿ ಆರ್.ಪೂರ್ಣಿಮಾರವರು ಕರೆ ನೀಡಿದರು. ಅವರು ಮಾರ್ಚ್ 8ರಂದು ನಡೆದ ಪ್ರಜಾಸತ್ತಾತ್ಮಕ ಮತ್ತು ಮಹಿಳೆಯರ ಹಕ್ಕುಗಳು ಕುರಿತಾದ ವಿಚಾರ ಸಂಕಿರಣದಲ್ಲಿ ತಮ್ಮ ಪ್ರಬಂಧ ಮಂಡಿಸಿ ಮಾತನಾಡುತ್ತಿದ್ದರು.

ಸ್ವಾತಂತ್ರ್ಯ ನಂತರದ 42 ವರ್ಷಗಳ ನಂತರವೂ ಮಹಿಳೆಗೆ ಸಂವಿಧಾನದತ್ತವಾದ ಹಕ್ಕುಗಳು ದೊರಕದೇ ಹೆಚ್ಚು ತುಳಿತಕ್ಕೊಳಗಾಗಿರುವ ಮಹಿಳೆ ಸಮಾನ ಹಕ್ಕುಗಳನ್ನು ಪಡೆಯಲು ಹೋರಾಟ ನಡೆಸಿದರೆ ಮಾತ್ರ ಸಾಧ್ಯವೆಂದು ವಕೀಲರಾದ ಹೆಚ್.ಎನ್.ನಾಗಮೋಹನ್‌ದಾಸ್‌ರವರು ಹೇಳಿದರು.

ಕುದುರೆ ಮೊತಿ ಪ್ರಕರಣ, ಹೊಸ ಹಳ್ಳಿ ಬೆತ್ತಲೆ ಮೆರವಣಿಗೆ, ಸವದತ್ತಿಯ ದೇವದಾಸಿ ಕೂಪಕ್ಕೆ ತಳ್ಳುವ ಕ್ರೂರ ಪ್ರಕರಣಗಳು ಇಂದು ಸಹ ಜರುಗುತ್ತಿದ್ದು ಈ ದುಷ್ಟ ಪದ್ಧತಿಗಳು ಕೊನೆಯಾಗಲು ಮಹಿಳೆ ಸಂಘಟಿತಳಾಗಿ ಹೋರಾಡಬೇಕೆಂದು ಮಹಿಳಾ ಸಂಘಟನೆಯ ರಾಜ್ಯ ಸಂಚಾಲಕಿ ಶ್ರೀಮತಿ ಹರಿಣಿಕಣ್ಣೇರಿಯವರು ಕರೆ ನೀಡಿದರು.

ಯಾವ ಒಂದು ವ್ಯವಸ್ಥೆಯಲ್ಲಿ ಮಹಿಳೆಯರ ಮೇಲಿನ ದಬ್ಬಾಳಿಕೆ ಹುನ್ನಾರಗಳು ಇರದೆ ಒಂದು ವ್ಯಕ್ತಿಯಾಗಿ ಬಾಳಲು ಸಾಧ್ಯವಿದೆಯೋ ಅಂಥ ಸಮಾಜ ಮಾತ್ರ ಸಂಪೂರ್ಣ ಸ್ವಾತಂತ್ರ್ಯವಿರುವ ಸಮಾಜವಾಗಲು ಸಾಧ್ಯ , ಎಂಬ ಕಾ॥ ಲೆನಿನ್‌ರವರ ಮಾತುಗಳನ್ನು ಅವರು ನೆನಪಿಸಿದರು.

-ವರದಿ- ವಿಮಲ

ಹೊಸ ಗ್ರಾಹಕರ ಬೆಲೆ ಸೂಚ್ಯಂಕದ ವಿರುದ್ಧ

ಏಪ್ರಿಲ್ 21ದೇಶ ವ್ಯಾಪಿ ಚಳುವಳಿಗೆ ಕರೆ

ಕೇಂದ್ರ ಸರ್ಕಾರ 1960ರ ಆಧಾರಿತ ಬೆಲೆ ಸೂಚ್ಯಂಕವನ್ನು ಕೈಬಿಟ್ಟು 1982ರ ಸೂಚ್ಯಂಕವನ್ನು ಪ್ರಕಟಿಸುವ ಮೂಲಕ ಕಾರ್ಮಿಕ ವರ್ಗಕ್ಕೆ ಬಗೆದಿರುವ ದ್ರೋಹವನ್ನು ಖಂಡಿಸಿ ಏಪ್ರಿಲ್ 21ರಂದು ದೇಶವ್ಯಾಪೀ ಮತಪ್ರದರ್ಶನ, ಮೆರವಣಿಗೆ, ಪ್ರತಿಭಟಿಸಬೇಕೆಂದು ಸಿ.ಐ.ಟಿ.ಯು. ಕೇಂದ್ರ ಸಮಿತಿ ಕರೆ ನೀಡಿದೆ.

ಕರ್ನಾಟಕ ರಾಜ್ಯ ಕಾರ್ಯದರ್ಶಿ ಮಂಡಳಿ ಸಭೆಯು ಈ ಕುರಿತು ಚರ್ಚಿಸಿ ಏಪ್ರಿಲ್ 21ರ ಈ ಕಾರ್ಯಕ್ರಮವನ್ನು ರಾಜ್ಯದಲ್ಲಿ ಯಶಸ್ವಿಗೊಳಿಸಬೇಕೆಂದು ಎಲ್ಲಾ ಘಟಕಗಳಿಗೆ ಕರೆ ನೀಡಿದೆ.

1982ರ ಆಧಾರಿತ ಗ್ರಾಹಕರ ಸೂಂಚ್ಯಂಕ ಪ್ರಕಟಿಸುವ ಮೂಲಕ ಕಾರ್ಮಿಕರಿಗೆ ಈ ಕೂಡಲೇ 30-40 ರೂ.ಗಳಷ್ಟು ವೇತನದಲ್ಲಿ ಕಡಿತ ಉಂಟಾಗುತ್ತದೆ. ಬೆಂಗಳೂರು ಆಧಾರಿತ ಸೂಚ್ಯಂಕ ಅನುಸರಿಸಿ ತುಟ್ಟಿಭತ್ಯೆ ಸಿಗುವವರಿಗೆ ಬಾದಕವಾಗುತ್ತದೆ. ಅಲ್ಲದೆ ಕೆ.ಜಿ.ಎಫ್. ಹಾಗೂ ಚಿಕ್ಕಮಗಳೂರು ಕಾರ್ಮಿಕರಿಗೆ ಇದ್ದ ಸೂಚ್ಯಂಕ ಕಳೆದುಕೊಳ್ಳುವ ಪರಿಸ್ಥಿತಿ ಬಂದೊದಗಿದೆ.

ಕೇಂದ್ರ ಸರ್ಕಾರದ ಈ ಕಾರ್ಮಿಕ ವಿರೋಧಿ ಕ್ರಮವನ್ನು ಹಿಂತೆಗೆದುಕೊಳ್ಳಲು ತೀವ್ರ ರೀತಿಯ ಚಳುವಳಿ ನಡೆಸಬೇಕೆಂದು ಕರೆ ನೀಡಿದೆ. ಕಾ॥ ಎಂ.ಕೆ.ಪಂಧೆಯವರು ಹೊಸ ಸೂಚ್ಯಂಕದ ಕುರಿತು ಬರೆದಿರುವ ಕಿರು ಹೊತ್ತಿಗೆಯನ್ನು ಕಾರ್ಮಿಕರ ಮಧ್ಯೆ ಕೊಂಡೊಯ್ಯಬೇಕೆಂದು ರಾಜ್ಯ ಪ್ರಧಾನ ಕಾರ್ಯದರ್ಶಿ ಕಾ॥ ವಿ.ಜೆ.ಕೆ.ನಾಯರ್‌ರವರು ಎಲ್ಲಾ ಘಟಕಗಳಿಗೆ ಮನವಿ ಮಾಡಿದ್ದಾರೆ. ಏಪ್ರಿಲ್ 21ರಂದು ರಾಜ್ಯದೆಲ್ಲೆಡೆ ಪ್ರತಿಭಟನಾ ಪ್ರದರ್ಶನ, ಮೆರವಣಿಗೆ ಚರ್ಚಾಗೋಷ್ಠಿ ಕರಪತ್ರ ವಿತರಣೆಯಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ಕರೆ ನೀಡಲಾಗಿದೆ.

ಪ್ರಜಾಸತ್ತಾತ್ಮಕ ವಿಕೇಂದ್ರೀಕರಣದ ಹೊಸ ಯುಗವನ್ನೇ ಆರಂಭಿಸುತ್ತಿದ್ದೇವೆ ಎಂದು ಪ್ರಧಾನಮಂತ್ರಿಗಳು ಈಗ ಎಲ್ಲಿ ಹೋದರೂ ಡಂಗುರ ಸಾರುತ್ತಿದ್ದಾರೆ. ಸಂವಿಧಾನ ತಿದ್ದುಪಡಿಯ ಮಾತು, ಸಂಸದೀಯ ಸಲಹಾ ಸಮಿತಿ, ಕ್ಯಾಬಿನೆಟ್ ಸಮಿತಿ, ಉಪಸಮಿತಿ, ಮ್ಯಾಜಿಸ್ಟ್ರೇಟರುಗಳೊಂದಿಗೆ, ಜಿಲ್ಲಾ ಅಧಿಕಾರಿಶಾಹಿಯೊಂದಿಗೆ ದರ್ಬಾರುಗಳು, ಕೇಂದ್ರದ ಅಧಿಕಾರಶಾಹಿಯೊಂದಿಗೆ ಸಮಾಲೋಚನೆ, ಇವನ್ನೆಲ್ಲಾ ಕ್ರೋಢೀಕರಿಸುವಂತೆ ತೋರಿಸಿಕೊಡಲು ಪಂಚಾಯತ್ ಸದಸ್ಯರೊಂದಿಗೆ ವಲಯವಾರು ಸಮ್ಮೇಳನಗಳು- ದೆಹಲಿಯಲ್ಲಿ ಉತ್ತರ ರಾಜ್ಯಗಳ ಸಮ್ಮೇಳನ ಜನವರಿಯಲ್ಲಿ ನಡೆಯಿತು. ಕಳೆದ ವಾರ ಕಲ್ಕತ್ತೆಯಲ್ಲಿ ಪೂರ್ವದ ರಾಜ್ಯಗಳ ಸಮ್ಮೇಳನ ನಡೆಯಿತು; ಏಪ್ರಿಲ್ 20ರಿಂದ ಬೆಂಗಳೂರಿನ ಬಳಿ ದಕ್ಷಿಣದ ರಾಜ್ಯಗಳ ಸಮ್ಮೇಳನ ನಡೆಯುತ್ತದೆ-

ಹೀಗೆ ತೀವ್ರ ಚಟುವಟಿಕೆಗಳು ಭರದಿಂದ ಸಾಗಿವೆ. ಮುಂಬರುವ ಲೋಕಸಭಾ ಚುನಾವಣೆಗಳಲ್ಲಿ ಇದೊಂದು ದೊಡ್ಡ ಪ್ರಚಾರ ವಸ್ತುವಾಗಲಿದೆಯೆಂಬುದು ಸ್ಪಷ್ಟ. ಏನಿದು ಪಂಚಾಯತು ರಾಜ್ಯ ವ್ಯವಸ್ಥೆಯ ಪುನಶ್ಚೇತನ? ಏಕೆ ಇದ್ದಕ್ಕಿದ್ದಂತೆ ಪ್ರಜಾಪ್ರಭುತ್ವವನ್ನು ಕೆಳಸ್ತರಗಳಿಗೆ ವಿಸ್ತರಿಸುವ ಹೊಸ ಉತ್ಸಾಹ? ಈ ಹೊಸ ಘೋಷಣೆಯ ನಿಜ ಸ್ವರೂಪವೇನು? ಇಲ್ಲಿರುವ ಲೇಖನಗಳು ಒಂದು ಪೂರ್ಣ ಚಿತ್ರ ನೀಡಲು ಪ್ರಯತ್ನಿಸಿವೆ.

ಪಾಳೇಗಾರಿ ದರ್ಬಾರಿನ ಧಮಾಕನು

ವಿಕೇಂದ್ರಿಕರಣದ ಹೆಸರಿನಲ್ಲಿ ಕಾಂಗ್ರೆಸ್(ಐ) ಕನಸು

-ಪ್ರಕಾಶ್‌ಕಾರಟ್

ಪಂಚಾಯತೀ ರಾಜ್ಯವನ್ನು ಪುನರ್ಚೇತನಗೊಳಿಸುವ ಅತ್ಯಂತ ಕೆಳಮಟ್ಟದಿಂದಲೇ ಪ್ರಜಾಪ್ರಭುತ್ವ ಕಟ್ಟುವ ಮಾತುಗಳಲ್ಲಿನ ಸತ್ಯಾಸತ್ಯತೆಯೆಷ್ಟು?

ಇದನ್ನು ಎರಡು ರೀತಿಯಲ್ಲಿ ಪರಿಶೀಲಿಸಬಹುದು. ಸರ್ಕಾರ ಪರಿಶೀಲಿಸುತ್ತಿರುವ ಪ್ರಸ್ತಾಪಗಳ ವಿಶ್ಲೇಷಣೆ ಮತ್ತು ಸರ್ಕಾರ ಈ ಮಾತುಗಳು, ಘೋಷಣೆಗಳ ಮೊದಲು ಹಾಗೂ ಈ ನಡುವೆಯೂ ನಡೆದುಕೊಂಡ ರೀತಿ

ರಾಜೀವ್ ಮಂತ್ರಿಮಂಡಲದ ಸಮಿತಿಯೆದುರು ಪಂಚಾಯತೀ ರಾಜ್ಯದ ಪುನರುಶ್ಚೇತನಕ್ಕಾಗಿ ಇರುವ ಪ್ರಸ್ತಾಪಗಳು ಹೀಗಿವೆ.

1) ಸಂವಿಧಾನದ ತಿದ್ದುಪಡಿ ಮೂಲಕ ಒಂದು ಜಿಲ್ಲೆಯ ಆಕಾರ ಹಾಗೂ ರಚನೆ, ಪಂಚಾಯತೀ ಸಂಸ್ಥೆಗಳಿಗೆ ಚುನಾವಣೆ ಹಾಗೂ ಅವುಗಳ ಅಧಿಕಾರ ಹಾಗೂ ಕಾರ್ಯನಿರ್ವಹಣೆಯನ್ನು ನಿರ್ದಿಷ್ಟಪಡಿಸುವುದು ಇದರಿಂದ ಕೇಂದ್ರ ಸರ್ಕಾರ ಈ ವಿಷಯಗಳಲ್ಲಿ ಮಧ್ಯ ಪ್ರವೇಶಿಸಲು ಸಾಧ್ಯವಾಗುತ್ತದೆ.

2) ಜಿಲ್ಲೆಯನ್ನು ಯೋಜನೆಯ ಮೂಲಭೂತ ಘಟಕವಾಗಿ ಮಾಡಿ ಆ ಪ್ರಕಾರ ಅಭಿವೃದ್ಧಿ ಹಣಕಾಸಿನ ಹಂಚಿಕೆ ಇದರಲ್ಲಿ ಜಿಲ್ಲಾ ಅಧಿಕಾರಿಗಳು ಪ್ರಮುಖ ನಿರ್ವಾಹಕರು.

3) ಜಿಲ್ಲಾ ಮ್ಯಾಜಿಸ್ಟ್ರೇಟರುಗಳಿಗೆ ಕೆಲವು ಅಧಿಕಾರಗಳನ್ನು ವಿಕೇಂದ್ರೀಕರಿಸಿ ಅವರ ಅಧಿಕಾರ ಹೆಚ್ಚಿಸುವುದು

4) ಪಂಚಾಯತ್‌ಗಳಲ್ಲಿ ಹಾಗೂ ಈ ಸಂಸ್ಥೆಗಳ ಹುದ್ದೆಗಳಲ್ಲಿ ಹರಿಜನ-ಗಿರಿಜನ, ಮಹಿಳೆಯರಿಗೆ ಮೀಸಲಾತಿ

5) ಪಕ್ಷರಹಿತ ಆಧಾರದ ಮೇಲೆ, ಪಂಚಾಯತುಗಳಿಗೆ ಚುನಾವಣೆ

6) ಪಂಚಾಯತುಗಳಿಗೆ ಮತ್ತು ಜಿಲ್ಲಾ ಸಂಸ್ಥೆಗಳಿಗೆ ಕೇಂದ್ರಿಯ ಚುನಾವಣಾ ಆಯೋಗದ ಉಸ್ತುವಾರಿಯಲ್ಲಿ ಚುನಾವಣೆ.

ಈ ಪ್ರಸ್ತಾಪಗಳಲ್ಲಿ ಸ್ಥೂಲವಾಗಿ ಕಂಡು ಬರುವ ಅಂಶವೆಂದರೆ ಜಿಲ್ಲೆಗಳು ಮೂಲಭೂತ ಘಟಕಗಳಾಗುತ್ತವೆ, ಗ್ರಾಮ ಪಂಚಾಯತುಗಳಲ್ಲ. ಅದೂ ಸಮಸ್ತ ಪ್ರಜಾಪ್ರಭುತ್ವ ಚಟುವಟಿಕೆಗಳಿಗಾಗಿ ಅಲ್ಲ, ಕೇವಲ ಯೋಜನಾ ಕೆಲಸಗಳಿಗಾಗಿ ಮಾತ್ರ. ಅಧಿಕಾರದ ವಿಕೇಂದ್ರಿಕರಣ ಕೇಂದ್ರದಿಂದ ರಾಜ್ಯಗಳಿಗೆ, ರಾಜ್ಯಗಳಿಂದ ಜಿಲ್ಲೆಗಳಿಗೆ, ಜಿಲ್ಲೆಗಳಿಂದ ಮಂಡಲಗಳಿಗೆ, ಅಲ್ಲಿಂದ ಗ್ರಾಮಗಳಿಗೆ ಅಲ್ಲ. ಬದಲಾಗಿ ರಾಜ್ಯಗಳಿಂದ ಜಿಲ್ಲಾ ಮ್ಯಾಜಿಸ್ಟ್ರೇಟರುಗಳಿಗೆ! ಯೋಜನಾ ವಿಕೇಂದ್ರೀಕರಣದಲ್ಲೂ ಪ್ರಮುಖ ನಿರ್ವಾಹಕರು ಜನತೆಯಿಂದ ಚುನಾಯಿತ ಪ್ರತಿನಿಧಿಗಳಲ್ಲ, ಜಿಲ್ಲಾ ಅಧಿಕಾರಶಾಹಿಗಳು. ಇದರೊಂದಿಗೆ ಪಕ್ಷರಹಿತ ಆಧಾರದ ಮೇಲೆ ಚುನಾವಣೆ ನಡೆಸುವ ಪ್ರಸ್ತಾಪ 'ಪ್ರಜಾಸತ್ತಾತ್ಮಕ ವಿಕೇಂದ್ರಿಕರಣ'ಕ್ಕೆ ವಿರುದ್ಧವಾದುದು ಮಾತ್ರವೇ ಅಲ್ಲ ಪ್ರಜಾಪ್ರಭುತ್ವ-ವಿರೋಧಿ ಕೂಡಾ. ಹಳ್ಳಿಗಳಲ್ಲಿನ ಅಸಮಾನ, ಶೋಷಣಾತ್ಮಕ ಆರ್ಥಿಕ ಸಂಬಂಧಗಳನ್ನು, ಸಾಮಾಜಿಕ ದಮನವನ್ನು ಕೆಲಮಾತ್ರವೂ ಬದಲಿಸಲು ಪ್ರಯತ್ನಿಸದೆ ಪ್ರಜಾಪ್ರಭುತ್ವದ ವೇಷ ತೊಡಿಸಿ ಅದನ್ನು ಸ್ಥಿರಗೊಳಿಸುವ ತಂತ್ರವಷ್ಟೆ. ಕೇಂದ್ರೀಯ ಚುನಾವಣಾ ಆಯೋಗದ ಉಸ್ತುವಾರಿಯಲ್ಲಿ ಚುನಾವಣೆ ನಡೆಸಬೇಕೆಂಬ ಪ್ರಸ್ತಾಪ ಕೂಡಾ ಈ ಹಿನ್ನೆಲೆಯಲ್ಲಿ ನೋಡಿದರೆ ನಗ್ನ ಸರ್ವಾಧಿಕಾರೀ ಕ್ರಮ. ಇನ್ನು ಹರಿಜನ, ಗಿರಿಜನ, ಮಹಿಳೆಯರಿಗೆ ಮೀಸಲಾತಿಯ ಪ್ರಶ್ನೆ. ಇದು ದಲಿತ ವಿಭಾಗಗಳ ಪ್ರಶ್ನೆಗಳಿಗೆ ಕಾಂಗ್ರೆಸ್(ಐ) ದೀರ್ಘ ಕಾಲದಿಂದ ಸೂಚಿಸಿಕೊಂಡು ಬಂದಿರುವ ಏಕೈಕ ರಾಮಬಾಣ. ಇದರ ಫಲವೇನು ಎಂಬುದು ಎಲ್ಲರಿಗೂ ಗೊತ್ತು. ನಿಜ ಆಚರಣೆಯಲ್ಲಿ ಇದು ಬರುವುದೇ ಇಲ್ಲ, ಬಂದರೂ ದಲಿತ ವಿಭಾಗಗಳನ್ನು ಒಡೆಯಲಿಕ್ಕಷ್ಟೆ. ಆಳುವ ವರ್ಗಗಳ ತಂತ್ರ ಇಲ್ಲಿಯೂ ಸ್ಪಷ್ಟ.

ಹೀಗೆ ಪ್ರಸ್ತಾಪಗಳ ಸ್ಥೂಲ ಪರಿಶೀಲನೆಯೇ ಪ್ರಧಾನಮಂತ್ರಿಗಳ ಘೋಷಣೆಗಳ ಪ್ರಾಮಾಣಿಕತೆಯ ಮುಂದೆ ಪ್ರಶ್ನೆ ಚಿಹ್ನೆಯಿಡುತ್ತವೆ. ಈ ಘೋಷಣೆಗಳ ನಡುವೆ ಅವರ ವರ್ತನೆಗಳಂತೂ ಇದ್ದ ಬದ್ಧ ಸಂಶಯಗಳನ್ನೂ ನಿವಾರಿಸುತ್ತವೆ.

ಇದು ಕೇವಲ ಚುನಾವಣಾ ತಂತ್ರ, ಎಂಬ ಟೀಕೆಯಿಂದ ಬಹಳ ಭಿನ್ನರಾದಂತೆ ತೋರಿಸಿಕೊಳ್ಳುತ್ತಾ ಪ್ರಧಾನಮಂತ್ರಿಗಳು ಹೇಳುವ ಮಾತು- 1987ರಿಂದಲೇ ಈ ಬಗ್ಗೆ ಗಂಭೀರ ಪ್ರಯತ್ನ, ಚರ್ಚೆ, ಮಾತುಕತೆ ನಡೆಸಿದ್ದೇವೆ. ಯಾರೊಡನೆ? ಅವರೇ ಹೇಳುತ್ತಾರೆ- "ಜಿಲ್ಲಾ ಮ್ಯಾಜಿಸ್ಟ್ರೇಟರುಗಳೊಂದಿಗೆ ಕಾರ್ಯದರ್ಶಿಗಳೊಂದಿಗೆ ಇಲಾಖಾ ಅಧಿಕಾರಿಗಳೊಂದಿಗೆ ಮತ್ತು ಪಕ್ಷದೊಳಗೆ" ಪಂಚಾಯತುಗಳು ಮತ್ತು ಅವುಗಳ ಕಾರ್ಯನಿರ್ವಹಣೆಗೆ ಸಂವಿಧಾನದ ಪ್ರಕಾರ ರಾಜ್ಯಗಳ ಜವಾಬ್ದಾರಿಯಲ್ಲಿರುವ ಮುಖ್ಯ ಪ್ರಶ್ನೆ. ಎಲ್ಲಾ ಅಧಿಕಾರಶಾಹಿಗಳೊಂದಿಗೆ, ಪಕ್ಷದೊಳಗೆ, ಸಮ್ಮೇಳನಗಳಲ್ಲಿ, ಸಮಿತಿ, ಉಪಸಮಿತಿಗಳಲ್ಲಿ, ಇಷ್ಟೊಂದು ಬಾರಿ ಚರ್ಚೆ ನಡೆಸಲು ಬಿಡುವು ದೊರೆತ ಪ್ರಧಾನಮಂತ್ರಿಗಳಿಗೆ ರಾಜ್ಯ ಸರ್ಕಾರಗಳೊಂದಿಗೇ ಚರ್ಚೆ ನಡೆಸಲು ಇದುವರೆಗೆ ಬಿಡುವೇ ದೊರೆತಿಲ್ಲವೆಂದರೆ ಅದರ ಅರ್ಥವೇನು?

> ಹೆಚ್ಚಿನ ಕಾಂಗ್ರೆಸ್ ಆಳ್ವಿಕೆಯ ರಾಜ್ಯಗಳಲ್ಲಿ ಪಂಚಾಯತುಗಳು ನಿಶ್ಚೇತನಗೊಂಡಿವೆ. ಅವು ಪುನಶ್ಚೇತನಗೊಂಡಿರುವುದು ಕಾಂಗ್ರೆಸ್ಸೇತರ ರಾಜ್ಯಗಳಲ್ಲಷ್ಟೆ. ಈ ಪಕ್ಷಗಳು ಅಧಿಕಾರಕ್ಕೆ ಬಂದ ಮೇಲಷ್ಟೆ.

ಇನ್ನೊಂದು ಗಮನಾರ್ಹ ಅಂಶವೆಂದರೆ ಪಂಚಾಯತು ರಾಜ್ಯ ವ್ಯವಸ್ಥೆಯ ದುಸ್ಥಿತಿಗೆ ಕಾರಣ ಸ್ವತಃ ಆಳುವ ಪಕ್ಷವೇ. ಈಗ ಹೆಚ್ಚಿನ ಕಾಂಗ್ರೆಸ್ ಆಳ್ವಿಕೆಯ ರಾಜ್ಯಗಳಲ್ಲಿ ಪಂಚಾಯತೀ ಸಂಸ್ಥೆಗಳು ನಿಶ್ಚೇತನಗೊಂಡಿವೆ. ಹಲವು ರಾಜ್ಯಗಳಲ್ಲಿ ಪಂಚಾಯತುಗಳಿಗೆ ಚುನಾವಣೆ ನಡೆದು ದಶಕವೇ ದಾಟಿದೆ. ತದ್ವಿರುದ್ಧವಾಗಿ ಪಂಚಾಯತೀ ಸಂಸ್ಥೆಗಳು ಪುನಶ್ಚೇತನಗೊಂಡಿರುವ ರಾಜ್ಯಗಳೆಂದರೆ ಕಾಂಗ್ರೆಸ್ಸೇತರ ರಾಜ್ಯಗಳೇ. ಕಾಂಗ್ರೆಸ್ಸೇತರ ಪಕ್ಷಗಳು ಅಧಿಕಾರಕ್ಕೆ ಬಂದ ಮೇಲಷ್ಟೇ ಇವು ಮತ್ತೆ ಚಟುವಟಿಕೆಗಳಿಂದ ಕೂಡಿವೆ. ರಾಜೀವ್‌ಗಾಂಧಿಯವರಿಗೆ ಅತ್ಯಂತ ಕೆಳಸ್ತರದಿಂದಲೂ ಪ್ರಜಾಪ್ರಭುತ್ವ ಬೆಳೆಸುವ ಬಗ್ಗೆ ನಿಜವಾಗಿಯೂ ಪ್ರಾಮಾಣಿಕ ಆಸಕ್ತಿಯಿದ್ದರೆ ಹೀಗೇಕೆ ಎಂದು ವಿಚಾರ ಮಾಡಬೇಕಿತ್ತು. ಕಾಂಗ್ರೆಸ್ಸೇತರ ರಾಜ್ಯಗಳ ಅನುಭವವೇನೆಂದು ವಿಚಾರವಿನಿಮಯ ಮಾಡಬಹುದಿತ್ತು. ಯುವ ಸಂವಿಧಾನ ತಿದ್ದುಪಡಿಯೂ ಇಲ್ಲದೆ ಅವು ಈ ಕೆಲಸ ಮಾಡುವುದು ಸಾಧ್ಯವಾಗಿದೆಯೋ ಎಂದು ಪರಿಶೀಲಿಸಬಹುದಾಗಿತ್ತು. ಆದರೆ ಅವರು ನಡೆಸಿದ ಹಲವಾರು ಚರ್ಚೆಗಳು, ದರ್ಬಾರುಗಳು, ನೇಮಿಸಿದ ಸಮಿತಿ, ಉಪಸಮಿತಿಗಳ ಅಜೆಂಡಾದಲ್ಲಿ ಇದೊಂದು ಅಂಶ ಎಂದೂ ಇರಲೇ ಇಲ್ಲ ಎಂಬುದು ಅವರ ನಿಜ ಉದ್ದೇಶಕ್ಕೆ ಹಿಡಿದಿರುವ ಕೈಗನ್ನಡಿ.

ಹೌದು, ಈ ಎಲ್ಲಾ ಕಸರತ್ತುಗಳ ಮುಖ್ಯ ಉದ್ದೇಶ ವಿಕೇಂದ್ರಿಕರಣದ ಹೆಸರಿನಲ್ಲಿ ಇನ್ನಷ್ಟು ಕೇಂದ್ರೀಕರಣ. ಮುಖ್ಯವಾಗಿ ರಾಜಯ ಸರ್ಕಾರಗಳನ್ನು ಬದಿಗೆ ತಳ್ಳಿ ಜಿಲ್ಲೆಗಳನ್ನು ದೆಹಲಿಯಿಂದಲೇ ಆಳುವ ಸನ್ನಾಹ. ನಮ್ಮ ದೇಶದಲ್ಲಿ ರೆವಿನ್ಯೂ ಮೂಲಗಳಲ್ಲಿ ಎರಡನೇ ಮೂರರಷ್ಟು ಕೇಂದ್ರ ಸರ್ಕಾರದ ಪಾಲಿಗೆ ಹೋಗುತ್ತದೆ. ಎಲ್ಲಾ ರಾಜ್ಯಗಳಿಗೂ ಸೇರಿ ಒಟ್ಟು ಒಂದನೇ ಮೂರು ಪಾಲು ಮಾತ್ರ ಪಡೆಯುತ್ತವೆ. ರಾಜ್ಯಗಳಿಗೇ ಸಾಲದ ಈ ಅಲ್ಪ ಆದಾಯ ಮೂಲಗಳನ್ನೇ ಜಿಲ್ಲಾ ಹಾಗೂ ಕೆಳಗಿನ ಸಂಸ್ಥೆಗಳಿಗೆ ವಿಕೇಂದ್ರಿಕರಿಸ ಲಾಗುವುದು. ಆಗ ಯಾವುದೇ ಜಿಲ್ಲಾ ಹಾಗೂ ಗ್ರಾಮಾಭಿವೃದ್ಧಿ ಕಾಮಗಾರಿಗೂ ಜಿಲ್ಲಾ ಮ್ಯಾಜಿಸ್ಟ್ರೇಟ್ ದೆಹಲಿಗೆ ಓಡಬೇಕು. ಈ ರೀತಿ ಜಿಲ್ಲಾ ಮ್ಯಾಜಿಸ್ಟ್ರೇಟ್, ಪಂಚಾಯತೀ ಸದಸ್ಯರೊಂದಿಗೆ "ನೇರ" ಸಂಪರ್ಕ ಸ್ಥಾಪಿಸುವ ಪ್ರಧಾನಮಂತ್ರಿಗೆ ತನ್ನ ಪಕ್ಷವಲ್ಲದ ರಾಜ್ಯ ಸರ್ಕಾರಕ್ಕೆ "ಬುದ್ಧಿಕಲಿಸಲು" ಒಳ್ಳೆಯ ಅವಕಾಶ.

ಆದರೆ ರಾಜೀವ್‌ಗಾಂಧಿ ಅಧಿಕಾರಗಳ ಕೇಂದ್ರೀಕರಣಕ್ಕೆ ಈ ದಾರಿ ಏಕೆ ಹಿಡಿಯಬೇಕು? ಸ್ವಲ್ಪ ವಿವರವಾಗಿ ಪರಿಶೀಲಿಸಿದಾಗ ಕಾರಣ ಸ್ಪಷ್ಟವಾಗುತ್ತದೆ.

ಮೊದಲನೆಯದಾಗಿ, ಹೆಚ್ಚೆಚ್ಚು ಸರ್ಕಾರಗಳು ಕಾಂಗ್ರೆಸ್(ಐ) ಕೈ ತಪ್ಪಿ ಹೋಗುತ್ತಿರುವಾಗ ತಮ್ಮ 'ಅನುಗ್ರಹ'ವನ್ನು ಹಂಚುವ ಸಾಧನ ಮೊಟಕಾಗುತ್ತಿದೆ. ಅಷ್ಟೇ ಅಲ್ಲ, ಗ್ರಾಮಾಂತರಗಳಲ್ಲಿ ಅವರ ಪರವಾಗಿ ಅಧಿಕಾರ ಚಲಾಯಿಸುವ ವರ್ಗಗಳೂ ತಮ್ಮ ಸ್ಥಾನ ಕಳೆದುಕೊಳ್ಳುತ್ತಿವೆ.

ಸ್ವಾತಂತ್ರ

ರಾಜೀವ್‌ಗಾಂಧಿ ಮತ್ತು ಅವರ ಬಾಲಗಳು ತಮ್ಮ ಹೊಸ ಪ್ರಯತ್ನವನ್ನು "ಪ್ರಜಾಸತ್ತಾತ್ಮಕ ವಿಕೇಂದ್ರೀಕರಣ" ಎನ್ನುತ್ತಾರೆ. ಇದನ್ನು ಜನ ನಂಬುವಂತೆ ಮಾಡಲು ಗಾಂಧೀಜಿಯ ಹೆಸರನ್ನು ಧಾರಳವಾಗಿ ಬಳಸಲಾಗುತ್ತಿದೆ.

"ಭಾರತೀಯ ಸ್ವಾತಂತ್ರ ಕೆಳಗಿನಿಂದ ಆರಂಭವಾಗಬೇಕು. ಪ್ರತಿಯೊಂದು ಗ್ರಾಮವೂ ಒಂದು ಸಂಪೂರ್ಣ ಅಧಿಕಾರವಿರುವ ಪಂಚಾಯತಾಗಬೇಕು" ಎಂದಿದ್ದರು ಗಾಂಧೀಜಿ. ಗ್ರಾಮ ಪಂಚಾಯತುಗಳು "ಸರಕಾರದ ಮೂಲ ಘಟಕವಾಗಬೇಕು" ಎಂದಿದ್ದರು. ಅನಿಬೆಸೆಂಟ್ ಸರ್ಕಾರದ ಅಧಿಕಾರಗಳನ್ನೂ ಈ ಸ್ಥಳೀಯ ಸಂಸ್ಥೆಗಳಿಗೆ ಹಂಚಿದಾಗಲೇ ನಿಜವಾದ ಸ್ವರಾಜ್ಯ ಎಂದರು ಚಿತ್ತರಂಜನ್ ದಾಸ್. ಭಾರತೀಯ ಸಂವಿಧಾನದ ಕರಡು ರೂಪಿಸಿದ್ದ "ಪರಿಣತರು" ಪಂಚಾಯತುಗಳ ಪ್ರಸ್ತಾಪವನ್ನೇ ಬಿಟ್ಟಿದ್ದರು. ಸಂತಾನರಂತಹ ಗಾಂಧೀವಾದಿಗಳ ಒತ್ತಾಯದಿಂದ ಸಂವಿಧಾನದಲ್ಲಿ 40ನೇ ವಿಭಾಗ ಸೇರಿಸಿ ನಿರ್ದೇಶಕ ಸೂತ್ರಗಳಲ್ಲೂ ಅದನ್ನು ಸೇರಿಸಲಾಯಿತು. 40ನೇ ವಿಭಾಗವೂ ಗ್ರಾಮ ಪಂಚಾಯತುಗಳು ಸ್ವಯಮಾಡಳಿತದ ಮೂಲ ಘಟಕಗಳು ಎಂದಿದೆ.

ಆದರೆ ರಾಜೀವ್‌ಗಾಂಧಿಯವರ ಪ್ರಸ್ತಾಪಗಳಲ್ಲಿ ಜಿಲ್ಲೆಯೇ ಮೂಲ ಘಟಕ. ಮತ್ತು ಸ್ವಯಮಾಡಳಿತ ಕೇವಲ "ಯೋಜನೆ"ಗೇ ಸೀಮಿತ. ಅದು ಕೂಡಾ ಒಬ್ಬ ಜಿಲ್ಲಾ ಮ್ಯಾಜಿಸ್ಟ್ರೇಟ್‌ನ ಉಸ್ತುವಾರಿಯಲ್ಲಿ. ಆದ್ದರಿಂದ ಗ್ರಾಮ ಪಂಚಾಯತುಗಳು ಎಂಬ ಪದದ ಬದಲು 'ಪಂಚಾಯತೀ ರಾಜ್ಯಸಂಸ್ಥೆಗಳು' ಎಂಬ ಪದವನ್ನು ಈಗ ಬಳಸಲಾಗುತ್ತಿದೆ.

ಸ್ವಾತಂತ್ರ ದೊರೆತ ಕೂಡಲೇ ಪಂಚಾಯತುಗಳು ರಚನೆಯಾದವು. ಆದರೆ ನಿಶ್ಚೇತನಗೊಂಡು ಕೇವಲ ಕಾಗದದ ಸಂಸ್ಥೆಗಳಾದವು. ಯಾಕೆಂದರೆ ಮೇಲೆ ಅಧಿಕಾರ ಚಲಾಯಿಸುವವರಿಗೆ ಸ್ವಯಮಾಡಳಿತದ ಈ ಸಾಧನಗಳು ಬೇಡ ಎನಿಸಿತು. ಅಧಿಕಾರಶಾಹಿಗೆ ಕೂಡಾ

ಪರ್ಯಾ

ಕೇಂದ್ರದಿಂದ ರಾಜ್ಯಗಳಿ
ವಿಕೇಂದ್ರೀಕರಣವೆಂಬುದು ಅಸಂಭವ.
ವಿಕೇಂದ್ರೀಕರಣದ ಗಂಭೀರ ಕ್ರಮಗ
ಹಂತದಿಂದ. ಕಾಂಗ್ರೆಸ್(ಐ)ಗೆ ಪ್ರಜಾಪ್ರ
ಮೂರನೇ ಹಂತದಲ್ಲಿ, ಅಂದರೆ ಜಿಲ್ಲೆಗ
ತರಲಿ.

- ಪಂಚಾಯತುಗಳಿಗೆ ಮತ್ತು ಜಿಲ್ಲಾ
ಪ್ರಾಥಮಿಕ ನಿಯಮವನ್ನಾದರೂ ಪಾಲಿಸಲಿ.
- ಜಿಲ್ಲಾ ಅಧಿಕಾರಿಶಾಹಿಯ ಅಧಿಕಾರ
ಜಿಲ್ಲಾಧಿಕಾರಿ ಮತ್ತು ಕೆಳಗಿನ ಅ
ಗ್ರಾಮಪಂಚಾಯತುಗಳ ಅಧೀನವಿರಬೇಕು.
- ಜಿಲ್ಲಾ ಪರಿಷತ್ತು ಜಿಲ್ಲಾ ಯೋಜನ
ಮಂಡಳಿ ಜೊತೆಗೂಡಿ ಕೆಲಸ ಮಾಡಬೇಕ
ನೀಡಬೇಕು. ಅವೇ ತಮ್ಮ ಪ್ರದೇಶಗಳಲ್ಲಿನ
- ಕಾಂಗ್ರೆಸ್(ಐ) ಸರ್ಕಾರಗಳು ಸಂ
ನಡೆಸುವಂತಾಗಲು, ಅವುಗಳ ಪ್ರಜಾಸ
ರೂಪಿಸಬೇಕು.

ಪಂಚಾಯತೀ ರಾಜ್ಯ
ಸೇರಿವೆಯೆಂಬುದನ್ನು ನೇರವಾಗಿ ಒಪ್ಪಿ
ಯಾವುದೇ ಕ್ರಮ ಕೈಗೊಳ್ಳಬಾರದು.

- ಎಲ್ಲಕ್ಕೂ ಮುಖ್ಯವಾಗಿ
ಸಂಪನ್ಮೂಲಗಳ ವಿಕೇಂದ್ರೀಕರಣ ನಡೆಸುವ
ರಾಜೀವ್‌ಗಾಂಧಿ ಇದನ್ನು ಮ

...ರಾಟಗಾರರು

ಇದನ್ನು ಬಯಸಿರಲಿಲ್ಲ

ಅದು ಬೇಕಿರಲಿಲ್ಲ. ಯಾಕೆಂದರೆ ನಿಜವಾದ ಅಧಿಕಾರ ಪಡೆದ ಈ ಸಂಸ್ಥೆಗಳು ಜನತೆಯ ಕೈಯಲ್ಲಿ ಅವರ ಸಂಕಟಗಳಿಗೆ ದನಿ ಕೊಡುವ ಸಾಧನಗಳಾಗಿ ಬಿಟ್ಟರೆ ತಮ್ಮ ಗತಿಯೇನು?

ನಮ್ಮ ಯೋಜನಾಕಾರರ ಮನೋಭಿಪ್ರಾಯವೂ ಇದೇ ಆಗಿತ್ತು. ಅವರ ಮಟ್ಟಿಗೆ ಗ್ರಾಮ ಪಂಚಾಯತುಗಳು ಮೇಲಿನ ಹಂತದ ಆಡಳಿತಕ್ಕೆ ಸಂಬಂಧಪಟ್ಟಿರುವ ಸಂಸ್ಥೆಗಳೇ ಹೊರತು ಪರಮಾಧಿಕಾರ ಹೊಂದಿರುವ ಘಟಕಗಳಾಗಿರಲಿಲ್ಲ. ಈ ದೃಷ್ಟಿಯಿಂದಲೇ ಮೇಲಿನ ಹಂತದಲ್ಲಿ ರೂಪಿಸಿದ ಸಮುದಾಯ ಯೋಜನೆಗಳನ್ನು ರಾಷ್ಟ್ರೀಯ ವಿಸ್ತರಣಾ ವಿಕೇಂದ್ರೀಕೃತ ವ್ಯವಸ್ಥೆ ಹೇಗೆ ದಕ್ಷತೆಯಿಂದ ಕೆಲಸ ಮಾಡಲು ಸಾಧ್ಯ ಎಂಬ ಬಗ್ಗೆ ಕ್ರಮ ಸೂಚಿಸುವುದಷ್ಟೇ"

ಈ ಸಂಸ್ಥೆಗಳನ್ನು ಚುನಾಯಿತ ಸಂಸ್ಥೆಗಳೆಂದು ಕಾಣದೆ ಕೇವಲ ಆಡಳಿತದ ಅತ್ಯಂತ ಕೆಳಸ್ತರ ಎಂದಷ್ಟೇ ಪರಿಗಣಿಸಿದ್ದು, ಅಧಿಕಾರಶಾಹಿ ಅದನ್ನು ಅಭಿವೃದ್ಧಿ ಕೆಲಸಗಳಿಂದ ಪ್ರತ್ಯೇಕಿಸಿದ್ದು, ರಾಜ್ಯ ಸರ್ಕಾರಗಳು ಒಂದಿಲ್ಲೊಂದು ಕಾರಣ ನೀಡಿ ಸಂಸ್ಥೆಗಳ ಚುನಾವಣೆಗಳನ್ನು ಮುಂದೂಡುತ್ತಾ ಬಂದದ್ದು ಹಾಗೂ ಈ ಸಂಸ್ಥೆಗಳ ಮೇಲೆ ಸಮಾಜದ ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಶಕ್ತಿಶಾಲಿಯಾದ ವಿಭಾಗಗಳ ಪ್ರಾಬಲ್ಯ- ಇವೆಲ್ಲಾ ಕಾರಣ

> ....ಆದರೆ ರಾಜೀವ್‌ಗಾಂಧಿಯವರ ಪ್ರಸ್ತಾಪಗಳಲ್ಲಿ ಜಿಲ್ಲೆಯೇ ಮೂಲ ಘಟಕ. ಮತ್ತು ಸ್ವಯಮಾಡಳಿತ ಕೇವಲ "ಯೋಜನೆ"ಗೇ ಸೀಮಿತ. ಅದು ಕೂಡಾ ಜಿಲ್ಲಾ ಮ್ಯಾಜಿಸ್ಟ್ರೇಟನ ಉಸ್ತುವಾರಿಯಲ್ಲಿ 'ಗ್ರಾಮ ಪಂಚಾಯತುಗಳು' ಎಂದು ಹೇಳಲೂ ಹಿಂಜರಿಕೆ. "ಪಂಚಾಯತೀ ರಾಜ್ಯ ಸಂಸ್ಥೆಗಳು" ಎಂಬ ಪದ ಬಳಕೆ.

ಯೋಜನೆಗಳನ್ನು ದಕ್ಷವಾಗಿ ನಿರ್ವಹಿಸುವುದು ಹೇಗೆ ಎಂದು ಅಧ್ಯಯನ ಮಾಡಲು 195 7ರಲ್ಲಿ ಬಲವಂತರಾಯ್ ಮೆಹ್ತಾ ಅಧ್ಯಯನ ತಂಡ ನೇಮಿಸಲಾಯಿತು. ಈ ತಂಡದ ಅಧ್ಯಯನದ ವ್ಯಾಪ್ತಿ ಚಿಕ್ಕದಾಗಿದ್ದರೂ "ಪ್ರಜಾಸತ್ತಾತ್ಮಕ ವಿಕೇಂದ್ರೀಕರಣ"ದ ಬಗ್ಗೆ ಅಭಿಪ್ರಾಯ ನೀಡಬೇಕಾಗಿ ಬಂತು. ಸ್ಥಳೀಯ ಪ್ರದೇಶಗಳಿಗೆ ಅಧಿಕಾರದ ಹಾಗೂ ಆಡಳಿತದ ವಿಕೇಂದ್ರೀಕರಣ ಅಗತ್ಯ. ಇಂತಹ ಅಧಿಕಾರ ಆಡಳಿತದ ಮೇಲಿನ ಹತೋಟಿ ಆ ಪ್ರದೇಶದ ಚುನಾಯಿತ ಪ್ರತಿನಿಧಿಗಳ ಕೈಯಲ್ಲಿರಬೇಕೆಂದು ಶಿಫಾರಸು ಮಾಡಿತು. ಆದರೂ ಪಂಚಾಯತುಗಳ ಅವನತಿ ಮುಂದುವರೆಯಿತು.

ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಜನತಾ ಸರ್ಕಾರ ನೇಮಿಸಿದ ಅಶೋಕ ಮೆಹ್ತಾ ಸಮಿತಿ 1978ರಲ್ಲಿ ವರದಿ ಸಲ್ಲಿಸಿತು. ಈ ಸಮಿತಿಗೆ ಒಪ್ಪಿಸಿದ ಕೆಲಸ ಕೂಡಾ "ಯೋಜನೆ ಹಾಗೂ ಅಭಿವೃದ್ಧಿಯ ಗಳಿಂದಾಗಿ ಪಂಚಾಯತು ಸಂಸ್ಥೆಗಳು ಅವನತಿಗೊಳ್ಳಲಾರಂಭಿಸಿದವು ಎಂದು ಈ ಸಮಿತಿ ಹೇಳಿತು.

ಅಂದರೆ ಆಳುವ ಪಕ್ಷದ ರಾಜಕೀಯ ಮುಖಂಡತ್ವ ಈ ಸ್ಥಳೀಯ ಸಂಸ್ಥೆಗಳು ಜನತೆಯ ಹೊಸ ಪ್ರಜ್ಞೆಯ ಅಂಗಗಳಾಗಿ ಬೆಳೆದು ತಮಗೆ ಸವಾಲಾಗುವ ಹೊಸ ಮುಖಂಡತ್ವವನ್ನು ಹೊರ ಹೊಮ್ಮಬಹುದೆಂಬ ಭಯದಿಂದ ಹೆಚ್ಚು ಹೆಚ್ಚಾಗಿ ಗ್ರಾಮೀಣ ಪ್ರಬಲ ಗುಂಪುಗಳನ್ನು ಹಾಗೂ ಅಧಿಕಾರಶಾಹಿಯನ್ನೇ ಅವಲಂಭಿಸಲಾರಂಭಿಸಿತು. ಪಾಶಾಹತುಶಾಹೀ ಕಾಲದ ಆರಾಮದ ದಿನಗಳನ್ನು ಮರೆಯದ ಅಧಿಕಾಶಾಹಿಗೂ ಇದೇ ಬೇಕಾಗಿತ್ತು. ಫಲವಾಗಿ ಹೆಚ್ಚಿನ ರಾಜ್ಯಗಳಲ್ಲಿ ಗ್ರಾಮ ಪಂಚಾಯತುಗಳು ಕುಂಠಿತಗೊಂಡವು. ವರ್ಷಾನುಗಟ್ಟಲೆ ಚುನಾವಣೆಗಳೇ ನಡೆಯಲಿಲ್ಲ. ನಡೆದರೂ ಅದು ಎರಡು ಪ್ರಬಲ ಗುಂಪುಗಳ ಹಿಂಸಾತ್ಮಕ ಕಿತ್ತಾಟದ ರಂಗವಾಯಿತಷ್ಟೇ.

ಅಶೋಕಮೆಹ್ತಾ ಸಮಿತಿಯ ಶಿಫಾರಸುಗಳಿಗೆ ಪ್ರತಿಕ್ರಿಯೆ ದೊರೆತದ್ದು ಕಾಂಗ್ರೆಸ್ಸೇತರ ರಾಜ್ಯ ಸರ್ಕಾರಗಳಿಂದ ಮಾತ್ರವೇ. ಕಾಂಗ್ರೆಸ್ ರಾಜ್ಯ ಸರ್ಕಾರಗಳು ಹಳೆಯ ಜಾಡಿನಲ್ಲೇ ಮುಂದುವರಿದವು.

ಪಶ್ಚಿಮಬಂಗಾಳದಲ್ಲಿ ಎಡರಂಗ ಅಧಿಕಾರಕ್ಕೆ ಬಂದ ಮೇಲೆ ಪ್ರತೀ ಐದು ವರ್ಷಕ್ಕೊಮ್ಮೆಯಂತೆ ಮೂರು ಬಾರಿ ಚುನಾವಣೆಗಳು ನಡೆದಿವೆ.

ಕೇರಳದಲ್ಲಿ ಎಲ್.ಡಿ.ಎಫ್. ಅಧಿಕಾರಕ್ಕೆ ಬಂದ ಮೇಲೆ 1979ರಲ್ಲಿ ಪಂಚಾಯತ್ ಚುನಾವಣೆ ನಡೆಯಿತು. 1984ರಲ್ಲಿ ಕರುಣಾಕರನ್ ಸರ್ಕಾರ ಚುನಾವಣೆ ನಡೆಸಲಿಲ್ಲ. ಎಲ್.ಡಿ.ಎಫ್. ಸರ್ಕಾರ ಮತ್ತೊಮ್ಮೆ ಅಧಿಕಾರಕ್ಕೆ ಬಂದ ಮೇಲೆ 1987ರಷ್ಟೇ ಮತ್ತೆ ಚುನಾವಣೆ ನಡೆಯಿತು.

ಆಂಧ್ರಪ್ರದೇಶದಲ್ಲಿ, ಎರಡು ಹಂತದ ಮಂಡಲ್ ಮತ್ತು ಜಿಲ್ಲಾ ಪರಿಷತ್ತುಗಳ ವ್ಯವಸ್ಥೆ ಜಾರಿಗೆ ಬಂತು. ಈ ಎರಡೂ ಹಂತಗಳಲ್ಲಿ, ಅಧ್ಯಕ್ಷರು ನೇರವಾಗಿ ಚುನಾಯಿತರಾಗುತ್ತಾರೆ. ಮೀಸಲಾತಿ ಇದೆ.

• ಪುಟ 6 ಕ್ಕೆ

...ವೇನು?

...ಭೂತ ವಿಕೇಂದ್ರೀಕರಣವಿಲ್ಲದೆ ನೈಜ ... ಮತ್ತು ಗ್ರಾಮಗಳಿಗೆ ಅಧಿಕಾರಗಳ ...ರ್ಥವಾಗಿರಬೇಕಾಗಿರುವುದು ರಾಜ್ಯಗಳ ಬಗ್ಗೆ ನಿಜವಾಗಿಯೂ ಆಸಕ್ತಿಯಿದ್ದರೆ ... ಕೆಳಗೆ ಈ ಅಂಶಗಳನ್ನು ಆಚರಣೆಗೆ

...ಗೆ ನಿಯಮಿತ ಚುನಾವಣೆಗೆ ನಡೆಸುವ

... ಯೋಜನೆ ಬಿಟ್ಟು ಕೊಡಲಿ. ಬದಲಾಗಿ ... ಜಿಲ್ಲಾ ಪರಿಷತ್ತುಗಳ ಹಾಗೂ

... ರಚಿಸಬೇಕು. ಇದು ರಾಜ್ಯ ಯೋಜನಾ ...ಯತ ಸಂಸ್ಥೆಗಳ ಮೇಲೆ ಹೆಚ್ಚಿನ ಒತ್ತು ...ಉಸ್ತುವಾರಿ ನಡೆಸಬೇಕು.

...ಯಮಿಸಿ, ಪಕ್ಷ ಆಧಾರಿತ ಚುನಾವಣೆ ...ಲ್ಲರೂ [illegible] [illegible]

... ರಾಜ್ಯ ಸರ್ಕಾರಗಳ ವ್ಯಾಪ್ತಿಗೆ ... ಅಧಿಕಾರಗಳನ್ನು [illegible]

... ಹೆಚ್ಚು ಅಧಿಕಾರಗಳ ಹಾಗೂ ... ಸರ್ಕಾರಗಳೊಂದಿಗೆ ಚರ್ಚಿಸಬೇಕು.

ಪಶ್ಚಿಮ ಬಂಗಾಳ ತೋರಿದ ದಾರಿ

-ಬಿನೊಯ್ ಕೃಷ್ಣ ಚೌಧುರಿ

ಪಶ್ಚಿಮ ಬಂಗಾಳದ ಎಡರಂಗ ಸರ್ಕಾರ ಪಂಚಾಯತ್ ಕಾಯ್ದೆಗೆ ಸ್ವಲ್ಪ ಮಾರ್ಪಾಡುಗಳನ್ನು ಮಾಡಿ ಅದರ ರಚನೆಯ ಒಂದು ವರ್ಷದೊಳಗೆ ಪಂಚಾಯತ್ ವಿಧಾನವನ್ನು ಪುನಃ ಜಾರಿಗೆ ತಂದಿತು. ಪಶ್ಚಿಮಬಂಗಾಳದ ಪಂಚಾಯತ್‌ದಲ್ಲಿ ಮೂರು ವಿಧಾನಗಳಿವೆ. ಕೆಳಹಂತದಲ್ಲಿರುವ ಗ್ರಾಮ ಪಂಚಾಯತ್‌ದಲ್ಲಿ 10ರಿಂದ 20 ಗ್ರಾಮಗಳಿರುತ್ತದೆ. ಅಲ್ಲಿ ಸರಾಸರಿ 15 ರಿಂದ 20ಸಾವಿರ ಜನಸಂಖ್ಯೆಯಿರುತ್ತದೆ. ಒಂದು ವೇಳೆ ಒಂದರಿಂದ ಎರಡು ಸಾವಿರ ಜನಸಂಖ್ಯೆಯುಳ್ಳ ಕೆಳಹಂತದ ಘಟಕ ಅತಿ ಚಿಕ್ಕದಾಗಿದ್ದರೆ ಅದು ಹೆಚ್ಚು ಕಾಲ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುವುದಿಲ್ಲ. ಆದರೆ ಗ್ರಾಮ ಪಂಚಾಯತಿಯ ಜನಸಂಖ್ಯೆಗೆ ಅನುಗುಣವಾಗಿ ನಾನಾ ಕ್ಷೇತ್ರಗಳಲ್ಲಿ ವಿಂಗಡಣೆಯು ಆದರಿಂದಾಗಿ ಗ್ರಾಮ ಪಂಚಾಯತಿಯಲ್ಲಿ ಗ್ರಾಮ ಸಮರ್ಪಕ ರೀತಿಯಲ್ಲಿ ತನ್ನ ಪ್ರಾತಿನಿಧ್ಯ ಹೊಂದಲು ಸಾಧ್ಯವಾಗುತ್ತದೆ. ಇನ್ನೊಂದು ವಿಧಾನ ಪಂಚಾಯತ್ ಸಮಿತಿ (ತಾಲ್ಲೂಕಿನೊಂದಿಗೆ ಸಂಬಂಧ ಹೊಂದಿದ) ಇಲ್ಲಿ ಸರಾಸರಿ ಸುಮಾರು ಒಂದು ಲಕ್ಷ ಜನಸಂಖ್ಯೆ ಇರುತ್ತದೆ. ಮೂರನೆಯ ವಿಧಾನವೇ ಪ್ರತಿ ಜಿಲ್ಲೆಯಲ್ಲಿರುವ ಜಿಲ್ಲಾ ಪರಿಷತ್ ವ್ಯವಸ್ಥೆ. ಈ ಎಲ್ಲಾ ಮೂರು ವ್ಯವಸ್ಥೆಗಳಲ್ಲಿ ಪ್ರತಿನಿಧಿಗಳು ವಯಸ್ಕ ಮತದಾನದ ಮೂಲಕ ಏಕಕಾಲಕ್ಕೆ ಚುನಾಯಿತರಾಗುತ್ತಾರೆ. ಅನೇಕ ರಾಜ್ಯಗಳಲ್ಲಿ ಕೆಳಹಂತದ ವಿಧಾನ ಮಾತ್ರ ನೇರ ಚುನಾವಣೆ ಮೂಲಕ ಆಯ್ಕೆಯಾಗುತ್ತವೆ. ಇದರಿಂದ ನಿಜವಾದ ಉದ್ದೇಶ ಸಾಧಿಸಲಾಗದು. ಸಂಸತ್ ಸದಸ್ಯರು ಮತ್ತು ಶಾಸಕರು ನೇರವಾಗಿ ಚುನಾಯಿತರಾಗುವುದಾದರೆ, ಜನತೆಯ ದೈನಂದಿನ ಅಗತ್ಯತೆಗಳನ್ನು ನಿರ್ವಹಿಸುವ ಸಂಸ್ಥೆಯೊಂದನ್ನು ವಯಸ್ಕ ಮತದಾನದ ಮೂಲಕ ನೇರವಾಗಿ ಚುನಾಯಿಸದಿರಲು ಯಾವ ಕಾರಣವೂ ಇಲ್ಲ.

ಪಶ್ಚಿಮಬಂಗಾಳದಲ್ಲಿ ಈಗಾಗಲೇ ಮೂರು ಚುನಾವಣೆಗಳು ನಡೆದಿವೆ. ಮೊದಲ ಚುನಾವಣೆ 1978ರ ಜೂನ್ ತಿಂಗಳಲ್ಲಿ, ದ್ವಿತೀಯ ಚುನಾವಣೆ ಮೇ 1983ರಲ್ಲಿ, ಹಾಗೂ ಇತ್ತೀಚೆಗೆ ಫೆಬ್ರವರಿ 1988ರಲ್ಲಿ ನಡೆದಿವೆ. ಈ ಮಧ್ಯೆ ಪಂಚಾಯತ್ ಕಾಯ್ದೆಗೆ ಮತ್ತಷ್ಟು ತಿದ್ದುಪಡಿ ತಂದು ಅದನ್ನು ಜನತೆ ಹೆಚ್ಚು ಅರ್ಥಮಾಡಿಕೊಳ್ಳುವ ಹಾಗೆ ಮಾಡಲಾಗಿದೆ. ಈಗ ಗ್ರಾಮ ಪಂಚಾಯತಿಯು ಪ್ರತಿ ಆರು ತಿಂಗಳೊಳಗೆ ಮತದಾರರ ಸಾಮಾನ್ಯ ಸಭೆ ಕರೆಯಬೇಕೆಂಬ ಶಾಸನ ಬದ್ಧ ಒತ್ತು ಕೊಡಲಾಗಿದೆ. ಸಭೆಯಲ್ಲಿ ಪಂಚಾಯತಿಗೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ಪರಿಶೀಲನೆಗೆ ಹಾಗೂ ಅನುಮೋದನೆಗೆ ಮಂಡಿಸಬೇಕಾಗುತ್ತದೆ. ಇದಲ್ಲದೆ ಪಂಚಾಯತಿಯು ಸ್ವೀಕರಿಸಿದ ಎಲ್ಲಾ ಹಣಕಾಸು ಮತ್ತು ಸಾಮಗ್ರಿಗಳ ವಿವರ ಮತ್ತು ಫಲಾನುಭವಿಗಳ ಯಾದಿಗಳನ್ನು ಸಾರ್ವಜನಿಕ ಸೂಚನೆ ಹಲಗೆಯ ಮೇಲೆ ಅಂಟಿಸಿ 15 ದಿನಗಳ ವರೆಗೆ ಸಾರ್ವಜನಿಕ ಅವಗಾಹನೆಗಾಗಿ ಇಡಬೇಕಾಗುತ್ತದೆ. ಗ್ರಾಮ ಪಂಚಾಯತಿಯ ನಿಧಿಯನ್ನು ಪ್ರಧಾನ ಮತ್ತು ಉಪ-ಪ್ರಧಾನರು (ಸಾಮಾನ್ಯವಾಗಿ ಈತ ಭಿನ್ನ ರಾಜಕೀಯ ಪಕ್ಷಕ್ಕೆ ಸೇರಿದವನಾಗಿರುತ್ತಾನೆ) ಹಾಗೂ ಸಮಿತಿಯು ಆಯ್ಕೆ ಮಾಡಿದ ಇನ್ನೊಬ್ಬ ಸದಸ್ಯನ ಹೆಸರಿನಲ್ಲಿ ಬ್ಯಾಂಕಿನಲ್ಲಿ ಇಡಬೇಕಾಗುತ್ತದೆ. ಕನಿಷ್ಠ ಪಕ್ಷ ಇಬ್ಬರ ಸಹಿಯಿಲ್ಲದೆ ನಿಧಿಯನ್ನು ಬ್ಯಾಂಕಿನಿಂದ ತೆಗೆಯುವಂತಿಲ್ಲ. ಈ ಮುಂಚೆ ನಿಧಿಯನ್ನು ಗ್ರಾಮ ಪಂಚಾಯತಿಯ ಪ್ರಧಾನನ ಹೆಸರಿನಲ್ಲಿ ಇಡಲಾಗುತ್ತಿತ್ತು. ಗ್ರಾಮ ಪಂಚಾಯತಿಯ ಪ್ರಧಾನರ ಸ್ವೇಚ್ಛಾನುಸಾರ ಕಾರ್ಯ ನಿರ್ವಹಿಸುವಂತಿಲ್ಲ. ಸಾಕಷ್ಟು ತಪಾಸಣೆಗಳನ್ನು ನಡೆಸಲು ಕಾಯ್ದೆ ಮತ್ತು ಕಾನೂನುಗಳಲ್ಲಿ ಅವಕಾಶವಿದೆ. ಪಶ್ಚಿಮ ಬಂಗಾಳದ ಪಂಚಾಯತ್‌ಗಳ ಕಾರ್ಯಾಚರಣೆಯಲ್ಲಿ ಕೆಳಹಂತದ ಮೇಲೆ ಹೆಚ್ಚಿನ ಒತ್ತು ಕೊಡಲಾಗಿದೆ. ಗ್ರಾಮ ಪಂಚಾಯತಿ ಸಮಿತಿಗಳು ಒಂದಕ್ಕಿಂತ ಹೆಚ್ಚಿನ ಗ್ರಾಮ ಪಂಚಾಯತಿ ವ್ಯಾಪ್ತಿಯ ಕಾರ್ಯ ಯೋಜನೆಗಳನ್ನು ನಿರ್ವಹಿಸುತ್ತವೆ. ಒಂದಕ್ಕಿಂತ ಹೆಚ್ಚು ಪಂಚಾಯತಿ ಸಮಿತಿಗಳನ್ನು ಒಳಗೊಂಡ ಯೋಜನೆಗಳಿದ್ದರೆ ಮತ್ತು ಅದು ಜಿಲ್ಲಾ ಪ್ರಾಮುಖ್ಯತೆ ಪಡೆದಿದ್ದರೆ, ಅಂತಹ ಯೋಜನೆಗಳನ್ನು ಜಿಲ್ಲಾ ಪರಿಷತ್‌ಗಳೇ ನಿರ್ವಹಿಸುತ್ತವೆ. ಸುಸಜ್ಜಿತ ಸ್ಥಳೀಯ ಸರ್ಕಾರದ ಮಾದರಿಯಲ್ಲಿ ಮೂರು ವಿಧಾನಗಳ ಈ ಪಂಚಾಯತ್ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ಕಲ್ಪನೆ ಸಫಲವಾಗಬೇಕಾದರೆ, ನಾವು ಪಂಚಾಯತಿಗಳಿಗೆ ಹೆಚ್ಚೆಚ್ಚು ಅಧಿಕಾರ ನೀಡಬೇಕಾಗುತ್ತದೆ. ನಿಜಸಂಗತಿ ಎಂದರೆ ಈ ವ್ಯವಸ್ಥೆಗೆ ಎಲ್ಲಾ ಅಭಿವೃದ್ಧಿ ಯೋಜನೆಗಳನ್ನೂ ಅವರವರ ಪ್ರದೇಶಗಳಲ್ಲಿ ಅನುಷ್ಠಾನದಲ್ಲಿ ತರಲು ವಹಿಸಿಕೊಡಲಾಗುತ್ತದೆ. ಸೃಷ್ಟಿಸಲಾಗಿದೆ. ಇದರಿಂದ ಕೃಷಿ ಕಾರ್ಮಿಕನ ದಿನಗೂಲಿ ಪ್ರಮಾಣದಲ್ಲಿ ಹೆಚ್ಚಳ ಉಂಟಾಯಿತು. ಸರಾಸರಿ ದಿನಗೂಲಿಯು ಕಳೆದ 10 ವರ್ಷಗಳಲ್ಲಿ 6 ರೂ.ಗಳಿಂದ 15 ರೂ.ಗಳಿಗೇರಿತು. ಹಲವು ಸಾವಿರ ಕಿ.ಮೀ.ಗಳಷ್ಟು ಗ್ರಾಮೀಣ ರಸ್ತೆಗಳನ್ನು ನಿರ್ಮಿಸಲಾಗಿದೆ. ನೀರಾವರಿ ಸಂಪನ್ಮೂಲಗಳನ್ನು ವಿಸ್ತರಿಸಲಾಗಿದೆ. ಆಹಾರೋತ್ಪಾದನೆಯು 1976ರ 75 ಲಕ್ಷ ಟನ್‌ಗಳಿಂದ 1987-88ರಲ್ಲಿ 103 ಲಕ್ಷಗಳಿಗೆ ಹೆಚ್ಚಿತು. ಆಲೂಗಡ್ಡೆ ಉತ್ಪಾದನೆಯು 10ರಿಂದ 32 ಲಕ್ಷ ಟನ್‌ಗಳಿಗೆ ಹೆಚ್ಚಿದರೆ ಸೆಣಬಿನ ಉತ್ಪಾದನೆಯು 30ರಿಂದ 45 ಲಕ್ಷ ಬೇಲುಗಳಿಗೇರಿತು. ಅದೇ ರೀತಿ ಕೈಮಗ್ಗ ಬಟ್ಟೆಯ ಉತ್ಪಾದನೆ ಸಹ ಹೆಚ್ಚಾಗಿದೆ.

> ಕೆಳಹಂತದ ಘೋಷಣೆ ಈಗ ನಿರರ್ಥಕ ಘೋಷಣೆಯೇನಲ್ಲ. ಗ್ರಾಮೀಣ ದುರ್ಬಲ ವರ್ಗಗಳಲ್ಲಿ ಈಗ ಒಂದು ನೂತನ ಜಾಗೃತಿಯನ್ನು ಗಮನಿಸಬಹುದು. ಅವರನ್ನು ಕೆಣಕುವ ಧೈರ್ಯ ಈಗ ಭೂಮಾಲಿಕ ವರ್ಗಕ್ಕಿಲ್ಲ.

ಕಲ್ಕತ್ತಾ ವಿಶ್ವವಿದ್ಯಾಲಯದ ಕೆಲವು ಪ್ರಾಧ್ಯಾಪಕರು ಕೈಗೊಂಡ ಸಮೀಕ್ಷೆಯ ಪ್ರಕಾರ, ಈ ಮೂರು ಹಂತದ ಪಂಚಾಯತಿ ವ್ಯವಸ್ಥೆಯ ಅನ್ವಯ ಮೊದಲ ಚುನಾವಣೆಯಲ್ಲಿ 5 6 ಸಾವಿರ ಸದಸ್ಯರು ಚುನಾಯಿತರಾಗಿದ್ದು ಅವರಲ್ಲಿ ಶೇಕಡಾ 85 ರಷ್ಟು ಸದಸ್ಯರಿಗೆ ಜಮೀನು ಇಲ್ಲ ಅಥವಾ ಐದು ಎಕರೆಗಳಷ್ಟು ಮಾತ್ರ ಜಮೀನು ಇದೆಯೆಂಬ ಅಂಶ ಗೊತ್ತಾಗಿದೆ. ಪಶ್ಚಿಮಬಂಗಾಲ, ಕೇರಳ ಮತ್ತು ತ್ರಿಪುರಾಗಳನ್ನು ಬಿಟ್ಟರೆ ಉಳಿದ ರಾಜ್ಯಗಳಲ್ಲಿನ ಚಿತ್ರಣ ಇನ್ನೂ ವ್ಯತಿರಿಕ್ತವಾಗಿದೆ. ಅಲ್ಲಿ ಗ್ರಾಮದ ಪಟ್ಟಭದ್ರ ಹಿತಾಸಕ್ತಿಗಳು ಇನ್ನೂ ಗಟಿಯಾಗಿ ತಳವೂರಿದ್ದಾರೆ.

ಆಮ್‌ಸ್ಟರ್‌ಡ್ಯಾಮ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಜಿ.ಕೆ.ಲೈಟೆನ್ ಅವರು ಈಚೆಗೆ ಬಿರ್‌ಭೂಮ್ ಜಿಲ್ಲೆಯ ಮೊಹಮ್ಮದ್ ಬಝಾರ್ ತಾಲ್ಲೂಕಿನಲ್ಲಿ ನಡೆಸಿದ ಸಮೀಕ್ಷೆಯೊಂದರಿಂದ ಬೆಳಕಿಗೆ ಬಂದ ಅಂಶವೆಂದರೆ 390 ಚುನಾಯಿತ ಯೋಜನಾ ಕಾರ್ಯದಲ್ಲಿ ಸಹ ಅವರನ್ನು ತೊಡಗಿಸಲಾಗುತ್ತಿದೆ. 7ನೇ ಯೋಜನೆಯ ಮೊದಲ ವರ್ಷದಿಂದ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಯೋಜನಾ ಸಮನ್ವಯ ಸಮಿಗಳನ್ನು ರಚಿಸಲಾಗಿದೆ. ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಯೋಜನಾ ಸಮಿತಿಗಳ ಮೂಲಕ ಯೋಜನೆ ಸಿದ್ಧವಾದ ತರುವಾಯ, ರಾಜ್ಯ ಯೋಜನೆಯನ್ನು ಅಂತಿಮಗೊಳಿಸಲಾಗುತ್ತದೆ. ಕೆಳಹಂತದ ಯೋಜನೆ ಈಗ ನಿರರ್ಥಕ ಘೋಷಣೆಯೇನಲ್ಲ. ಸಂಪೂರ್ಣ ಕಾರ್ಯತಂತ್ರವುಳ್ಳ ಒಂದು ಹಂತಕ್ಕೆ ನಾವು ತಲುಪಿದ್ದೇವೆ ಎಂದು ನಾನೇನೂ ಖಚಿತವಾಗಿ ಹೇಳುವುದಿಲ್ಲ. ಆದರೆ, ನನಗೆ ಅರ್ಥವಾಗುತ್ತಿದೆ, ಇದೆಷ್ಟು ತೊಂದರೆದಾಯಕ ಕಾರ್ಯವೆಂದು. ಪಂಚಾಯತ್ ವ್ಯವಸ್ಥೆಯ ಕಾರ್ಯನಿರ್ವಹಣೆಯನ್ನು ಸುಧಾರಿಸುವಲ್ಲಿ ನಾವು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇವೆ ಎಂದು ನಾನು ಹೇಳಬಲ್ಲೆ. ಕಳೆದ 11ವರ್ಷಗಳಲ್ಲಿ ನಿರ್ಮಿಸಲಾದ ಶಾಶ್ವತ ಆಸ್ತಿ-ಪಾಸ್ತಿಗಳು ಹೆಚ್ಚು ಪರಿಣಾಮ ಬೀರಬಲ್ಲವು.

ಪಂಚಾಯತ್ ವ್ಯವಸ್ಥೆಯಿಂದ ನಿರ್ವಹಿಸಲ್ಪಡುವ ವಿವಿಧ ಯೋಜನೆಗಳಲ್ಲಿ ಸಾಧ್ಯವಾದಷ್ಟು ಗುತ್ತಿಗೆದಾರರನ್ನು ತೆಗೆದು ಹಾಕಲು ನಾವು ಪ್ರಯತ್ನಿಸುತ್ತಿದ್ದೇವೆ. ಇಲಾಖಾ ಇಂಜಿನೀಯರುಗಳ ಅವಶ್ಯಕ ತಾಂತ್ರಿಕ ನೆರವಿನೊಂದಿಗೆ ಯೋಜನೆಗಳನ್ನು ಕಾರ್ಯಗತಗೊಳಿಸಲು ಪ್ರತ್ಯಕ್ಷ ಫಲಾನುಭವಿಗಳನ್ನು ಯೋಜನೆಯಲ್ಲಿ ತೊಡಗಿಸಲಾಗುತ್ತಿದೆ. ಈ ಒಂದು ಮಾರ್ಗ ಅನುಸರಿಸುವುದರಿಂದ, ಕೆಲಸದ ಗುಣಮಟ್ಟ ಸುಧಾರಿಸಿದೆಯಲ್ಲದೆ, ವೆಚ್ಚ ಸಹ ಪ್ರತಿಶತ 5 0ರಷ್ಟು ಕಡಿತಗೊಂಡಿದೆ. ಕಳೆದ 10 ವರ್ಷಗಳಲ್ಲಿ 30 ಕೋಟಿಗೂ ಹೆಚ್ಚು ದುಡಿಮೆಯ ದಿನಗಳನ್ನು ಸದಸ್ಯರಲ್ಲಿ ಕೃಷಿ ಕಾರ್ಮಿಕರ ಸಂಖ್ಯೆ 37, ಹಿಸ್ಸೆದಾರರು 21, ಚಿಕ್ಕ ಹಿಡುವಳಿದಾರರು

> ......ಪಶ್ಚಿಮಬಂಗಾಳ ಈಗಾಗಲೇ ಸ್ಥಳೀಯ ಸಂಸ್ಥೆಗಳನ್ನು ಅಭಿವೃದ್ಧಿ ಯೋಜನೆಗಳ ಮತ್ತು ಅನುಷ್ಠಾನದ ಪರಿಣಾಮಕಾರಿ ಸಾಧನಗಳಾಗಿ ಮಾಡುವುದರಲ್ಲಿ ಸಾಕಷ್ಟು [illegible] ಪ್ರತಿಯೊಂದು ಜಿಲ್ಲೆಯಲ್ಲಿ, ಬ್ಲಾಕಿನಲ್ಲಿ ಯೋಜನಾ [illegible] ರಚನೆ ಮತ್ತು ರಾಜ್ಯಮಟ್ಟದ ಯೋಜನಾ ವ್ಯವಸ್ಥೆಯೊಂದಿಗೆ [illegible] [illegible] ಜಿಲ್ಲಾ ಮತ್ತು ಬ್ಲಾಕ್ ಮಟ್ಟಗಳಲ್ಲಿ [illegible] ಪಂಚಾಯತ್ ಸಮಿತಿ ಅಧ್ಯಕ್ಷರುಗಳೇ ಯೋಜನಾ ಸಮಿತಿಗಳ ಅಧ್ಯಕ್ಷರಾಗಿರುತ್ತಾರೆ. [illegible] ಇದರಿಂದ ಎಲ್ಲಾ ಗ್ರಾಮೀಣ ಅಭಿವೃದ್ಧಿ ಯೋಜನೆಗಳ [illegible] ಪ್ರಭಾವ ದೊರೆತಿದೆ." ಇತರ ರಾಜ್ಯಗಳಿಗೆ ಹೋಲಿಸಿದರೆ ಪಶ್ಚಿಮ ಬಂಗಾಳದ [illegible] ಕಾಣುವುದು ಗ್ರಾಮೀಣ ಜನಸಮುದಾಯಗಳನ್ನು [illegible] ರಾಜಕೀಯ ಪ್ರಯತ್ನಗಳಲ್ಲಿ
>
> -ಕೇಂದ್ರದ ಕೃಷಿ ಮಂತ್ರಾಲಯ ಆಗಸ್ಟ್ 1987ರಲ್ಲಿ ತಯಾರಿಸಿದ ಒಂದು ಪ್ರಬಂಧದಲ್ಲಿ.

ರಾಯಚೂರು ಜಿಲ್ಲಾ ಡಿ.ವೈ.ಎಫ್.ಐ. 2ನೇ ಸಮ್ಮೇಳನ

ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ...ದ್ಧ ದೇಶದ ಸ್ವಾತಂತ್ರ್ಯಕ್ಕಾಗಿ ತ್ಯಾಗ ...ದಾನ ಗೈದು ಹೋರಾಡಿದ ಯುವ ...ತೆಯ ಆಶೋತ್ತರಗಳನ್ನು ಈಡೇರಿ...ವ ಭರವಸೆ ನೀಡಿ ಅಧಿಕಾರಕ್ಕೇರಿದ ...ದಿನ ಪ್ರಧಾನಿ ನೆಹರು 15 ...ರ್ಷದಲ್ಲಿ ನಿರುದ್ಯೋಗ ಹೋಗಲಾಡಿಸಿ...ಷ್ಟು ಹೆಚ್ಚು ಕೈಗಾರಿಕೆ ಸ್ಥಾಪಿಸು...ವೆಂದು ಘೋಷಿಸಿದ್ದರು. ಆದರೆ 42 ...ರ್ಷ ಕಳೆದರೂ ನಿರುದ್ಯೋಗ ಕಡಿಮೆ...ಯಾಗುವ ಬದಲು ಬೃಹತ್ ಪ್ರಮಾಣ...ದಲ್ಲಿ ಬೆಳೆದಿದೆ ಎಂದು ಗುಲ್ಬರ್ಗಾದ ...ಇಂಜಿನಿಯರಿಂಗ್ ಕಾಲೇಜ್ ಉಪನ್ಯಾಸಕ ಶ್ರೀ ಆರ್.ಕೆ.ಹುದುಗಿಯವರು ಹೇಳಿ...ದರು. ಅವರು ಡಿ.ವೈ.ಎಫ್.ಐ.ನ ರಾಯ...ಚೂರು ಜಿಲ್ಲಾ ದ್ವಿತೀಯ ಸಮ್ಮೇಳನ...ವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಅವೈಜ್ಞಾನಿಕ ಶಿಕ್ಷಣದ ಫಲವಾಗಿ ಇಂದಿನ ವಿದ್ಯಾರ್ಥಿ-ಯುವಜನತೆ ಸಮಾಜದ ಕುರಿತು ಚಿಂತನೆ ಮಾಡದಂತೆ ಜಾತೀಯ-ಮತೀಯ ಮೂಲಭೂತವಾದಿಗಳಂತಹ ಶಕ್ತಿಗಳೊಂದಿಗೆ ಸೇರಿ ಪ್ರಗತಿ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿದ್ದಾರೆ. ಇಂತಹ ಯುವಜನತೆಯನ್ನು ಡಿ.ವೈ.ಎಫ್.ಐ. ಸಂಘಟಿಸಿ ಅವರನ್ನು ಬಾಧಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಡಬೇಕೆಂದು ಅವರು ಕರೆ ನೀಡಿದರು.

ರಾಜ್ಯ ಅಧ್ಯಕ್ಷ ಕಾ॥ ನಾಗಮೋಹನ್ ದಾಸ್‌ರವರು ಅಧ್ಯಕ್ಷತೆ ವಹಿಸಿ ಮಾತನಾಡಿ ಪ.ಬಂಗಾಳ, ಕೇರಳ, ಆಂಧ್ರ ರಾಜ್ಯಗಳ ಅನುಭವಗಳನ್ನು ಹಾಗೂ ಅಖಿಲ ಭಾರತ ಮಟ್ಟದಲ್ಲಿ ಸಂಘಟನೆ ಬೆಳವಣಿಗೆ ಕುರಿತು ವಿವರಿಸಿದರು. ಮುಖ್ಯ ಅತಿಥಿಗಳಾಗಿ ಮಾತನಾಡಿದ ಜಿಲ್ಲಾ ಪರಿಷತ್ ಅಧ್ಯಕ್ಷ ಶ್ರೀ ಸುರೇಶ್‌ರೆಡ್ಡಿಯವರು ಸಮ್ಮೇಳನಕ್ಕೆ ಶುಭ ಕೋರಿದರು. ಪ್ರತಿನಿಧಿ ಅಧಿವೇಶನದಲ್ಲಿ ಕಾರ್ಯದರ್ಶಿ ಕಾ॥ ಗಂಗಾಧರ ಕುಷ್ಟಗಿಯವರು ಮಂಡಿಸಿದ ವರದಿಯ ಮೇಲೆ 25 ಸಂಗಾತಿಗಳು ಚರ್ಚೆಯಲ್ಲಿ ಪಾಲ್ಗೊಂಡರು.

ನೂತನ ಜಿಲ್ಲಾ ಸಮಿತಿಗೆ ಕಾ॥ ಗಂಗಾಧರ ಕುಷ್ಟಗಿ (ಅಧ್ಯಕ್ಷ) ಕಾ॥ ಶರಬಣ್ಣ ನಾಗಲಾಪುರ, ಮಹಮ್ಮದ್‌ಘನಿ (ಉಪಾಧ್ಯಕ್ಷರು) ಕಾ॥ ವೆಂಕಟೇಶ ಹಿರಾ (ಕಾರ್ಯದರ್ಶಿ) ಕಾ॥ ಸಿದ್ದಪ್ಪ, ಗುರುಸ್ವಾಮಿ, (ಸಹಕಾರ್ಯದರ್ಶಿಗಳು) ಶಿವಕುಮಾರಿ (ಖಜಾಂಚಿ)ಯವರನ್ನೊಳಗೊಂಡ 21 ಜನರ ಸಮಿತಿ ಆಯ್ಕೆ ಮಾಡಲಾಯಿತು.

ನಾಗರೀಕ ಸೌಲಭ್ಯ ಒತ್ತಾಯಿಸಿ ಅನಿರ್ದಿಷ್ಟ ಉಪವಾಸ

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ತೋರಣಗಲು ಘಟಕ ಗ್ರಾಮದ ನಾಗರೀಕ ಸೌಲತ್ತುಗಳನ್ನು ಒತ್ತಾಯಿಸಿ ಹಲವು ಹಂತದ ಚಳುವಳಿ ನಡೆಸಿದೆ.

ಜೂನ್ 6 1988ರಂದು ಮಂಡಲ ಪಂಚಾಯ್ತಿ ಮುಂದೆ ಧರಣಿ ಸತ್ಯಾಗ್ರಹ, ಅಕ್ಟೋಬರ್ 18ರಂದು ರಸ್ತೆ ತಡೆ ಚಳುವಳಿಯ ನಂತರ ಏಪ್ರಿಲ್ 12, 1989ರಿಂದ ಮಂಡಲ ಪಂಚಾಯ್ತಿ ಕಛೇರಿ ಮುಂದೆ ಅನಿರ್ದಿಷ್ಟ ಕಾಲದ ಉಪವಾಸ ಸತ್ಯಾಗ್ರಹ ನಡೆಸಲು ನಿರ್ಧರಿಸಿ ಅದಕ್ಕಾಗಿ ಜನತೆಯನ್ನು ಸಿದ್ಧಗೊಳಿಸುತ್ತಿದೆ. ಜನತೆಯ ಆಶೋತ್ತರಗಳನ್ನು ಕಡೆಗಣಿಸಿ ನಿರ್ಲಕ್ಷ್ಯ ತೋರುತ್ತಿರುವ ಮಂಡಲ ಪಂಚಾಯ್ತಿಯ ಧೋರಣೆಯ ವಿರುದ್ಧ ನಡೆಯುವ ಈ ನಿರ್ಣಯಕ ಹೋರಾಟದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ತೋರಣಗಲ್ಲಿನ ಜನತೆ ಪಾಲ್ಗೊಂಡು ಸವಲತ್ತುಗಳನ್ನು ಪಡೆಯಲು ಮುಂದಾಗಬೇಕೆಂದು ಕರೆ ನೀಡಿದೆ.

ಬೇಡಿಕೆಗಳು:

1) ಜನತಾ ಕಾಲೋನಿ ನಿವೇಶನ ರಹಿತ ಬಡಜನರ ಗುಡಿಸಲುಗಳಿಗೆ ಹಕ್ಕುಪತ್ರ ನೀಡಬೇಕು.

2) ಸರ್ಕಾರಿ ಆಸ್ಪತ್ರೆಗೆ ಕಟ್ಟಡ ನಿರ್ಮಿಸಿ ಖಾಯಂ ವೈದ್ಯರನ್ನು ಹಾಗೂ ಮಹಿಳಾ ವೈದ್ಯರನ್ನು ನೇಮಿಸಬೇಕು ಮತ್ತು ಪಶು ಚಿಕಿತ್ಸಾಲಯ ಪ್ರಾರಂಭಿಸಬೇಕು.

3) ಬಸ್ ನಿಲ್ದಾಣವನ್ನು ಕೂಡಲೇ ಸ್ಥಾಪಿಸಬೇಕು.

4) ಕುಡಿಯುವ ನೀರು ಬೀದಿ ದೀಪ, ಚರಂಡಿ ವ್ಯವಸ್ಥೆಯಾಗಬೇಕು.

5) ಅಂಗನವಾಡಿ ಕಟ್ಟಡ ದುರಸ್ಥಿ ಮಾಡಬೇಕು.

6) ಹಸಿರು ಕಾರ್ಡುಗಳನ್ನು ಹೆಚ್ಚಿಸಿ ಅಗತ್ಯ ಪ್ರಮಾಣದಲ್ಲಿ ಧಾನ್ಯ ಒದಗಿಸಬೇಕು.

7) ಜನತಾ ಮನೆ ಹಾಗೂ ಭಾಗ್ಯ ಜ್ಯೋತಿ ಹಣ ವಸೂಲಿ ನಿಲ್ಲಿಸಬೇಕು ಎಂದಿನಂತೆ ವಿದ್ಯುತ್ ಪೂರೈಕೆ ಮುಂದುವರೆಯಬೇಕು.

ದೆಹಲಿ ದರ್ಬಾರಿನ ಫರ್ಮಾನು

▶ ಪುಟ 4ರಿಂದ

ಉದಾಹರಣೆಗೆ, ಪಶ್ಚಿಮ ಬಂಗಾಳದಲ್ಲಿ ಜಿಲ್ಲಾಪರಿಷತ್ತುಗಳು ಮತ್ತು ಪಂಚಾಯತುಗಳಿಗೆ ನಿಯಮಿತವಾಗಿ ಚುನಾವಣೆಗಳು ನಡೆದು ಆ ಹಂತಗಳಲ್ಲಿ ವರ್ಗ ಸಂಯೋಜನೆಯ ಸ್ವರೂಪ ಬದಲಾಗಿದೆ. ಅದು ಬಡ ವರ್ಗಗಳತ್ತವಾಲಿದೆ. ಅಲ್ಲಿನ ಪಂಚಾಯತುಗಳಲ್ಲೀಗ ಭೂಮಾಲಕ-ಸಿರಿವಂತ ರೈತ ಹಾಗೂ ಅಧಿಕಾರಶಾಹಿಯ ಕೂಟದ ಪ್ರಾಬಲ್ಯವಿಲ್ಲ. ಕರ್ನಾಟಕ, ಆಂಧ್ರಪ್ರದೇಶಗಳಲ್ಲೂ ಗ್ರಾಮೀಣ ಪ್ರದೇಶಗಳಲ್ಲಿನ ಶಕ್ತಿ ಸಂಯೋಜನೆ ಕಾಂಗ್ರೆಸ್(ಐ) ಪರವಾಗಿ ಉಳಿದಿಲ್ಲ. ಇಂತಹ ಸನ್ನಿವೇಶದಲ್ಲಿ ರಾಜ್ಯ ಸರ್ಕಾರವನ್ನು ಬದಿಗೊತ್ತಿ ನೇರವಾಗಿ ಜಿಲ್ಲಾ ಹಾಗೂ ಪಂಚಾಯತು ಆಡಳಿತದ ಮೇಲೆ ದೆಹಲಿಯ ಹಿಡಿತ ಪಡೆಯುವ ಉಪಾಯ ಹೂಡುವುದು ಕಾಂಗ್ರೆಸ್(ಐ)ಗೆ ಅನಿವಾರ್ಯವಾದಂತಾಗಿದೆ.

ಇನ್ನು ಕಾಂಗ್ರೆಸ್(ಐ) ಆಳ್ವಿಕೆಯ ರಾಜ್ಯಗಳಲ್ಲಿ ಕಾಂಗ್ರೆಸ್ ಸಂಘಟನೆ ಎಷ್ಟೊಂದು ಶಿಥಿಲ ಹಾಗೂ ಭ್ರಷ್ಟಗೊಂಡಿದೆಯೆಂದರೆ ಅದರ ಮೂಲಕ ಕೇಂದ್ರ ಸರ್ಕಾರದ "ಅನುಗ್ರಹ" ತಲುಪುವ ಭರವಸೆ ಕೂಡಾ ರಾಜೀವ್‌ಗಾಂಧಿ ಹಾಗೂ ಅವರ ಸುತ್ತಲಿರುವ ಕೂಟಕ್ಕಿಲ್ಲ. ಆದ್ದರಿಂದ ಅಲ್ಲಿ, ತಾವು ಹೇಳಿದಂತೆ ಕೇಳುವ ಅಧಿಕಾರ ಶಾಹಿ ಅಗತ್ಯ.

ಮೂರನೆಯದಾಗಿ ಚುನಾವಣೆಗಳು ಸಮೀಪಿಸುತ್ತಿರುವಾಗ ಕಾಂಗ್ರೆಸ್(ಐ) ಆರ್ಥಿಕ "ಅನುಗ್ರಹ"ಗಳೊಂದಿಗೆ ಗ್ರಾಮೀಣ ಸಮೂಹಗಳು, ಗ್ರಾಮೀಣ "ಅಧಿಕಾರದ ದಲ್ಲಾಳಿ"ಗಳನ್ನು ತಮ್ಮತ್ತ ಸೆಳೆಯಲು ಅವರಿಗೆ ಹೆಚ್ಚು ಹಣಕಾಸು ದೊರೆಯುವ ಸಂಭವದ ಬಗ್ಗೆ ಭರವಸೆ ನೀಡಬೇಕಾಗುತ್ತದೆ. ಇದರೊಂದಿಗೆ ಮೀಸಲಾತಿಯ ಆಮಿಷ.

ಪಂಜಾಬ್ ಮತ್ತಿತರ ಹಲವು ವಿಷಯಗಳಲ್ಲಿ ಮಾಡಿ ಕೈಸುಟ್ಟುಕೊಂಡಂತೆ ಇಲ್ಲಿಯೂ ಸಂಕುಚಿತ ದೃಷ್ಟಿಯ ಈ ಕ್ರಮ ದೇಶದ ಒಕ್ಕೂಟ ರಚನೆಯ ಭಾಷಾವಾರು ಪ್ರಾಂತ್ಯಗಳು ಮೂಡಿಬಂದ ಚಾರಿತ್ರಿಕ ಪ್ರಕ್ರಿಯೆಯನ್ನೇ ನಿರಾಕರಿಸುತ್ತಿದ್ದರೂ ಅದರ ಪರಿವೆಯೇ, ಅದರಿಂದ ಪ್ರತ್ಯೇಕತಾವಾದಿ ಶಕ್ತಿಗಳಿಗೆ ಸಿಗಬಹುದಾದ ಇನ್ನಷ್ಟು ಕುಮ್ಮಕ್ಕಿನ ಬಗ್ಗೆ ಗಮನವೇ ಕಾಂಗ್ರೆಸ್(ಐ)ಗೆ ಇದ್ದಂತಿಲ್ಲ.

ಪ್ರತಿಯೊಂದು ಗ್ರಾಮಕ್ಕೂ, ಜಿಲ್ಲೆಗೂ ತನ್ನ ಫರ್ಮಾನ್ ವಿಸ್ತರಿಸುವ ದೆಹಲಿ ದರ್ಬಾರಿನ ಕನಸು ರಾಜೀವ್‌ಗಾಂಧಿ ಹಾಗೂ ಅವರ ಸಲಹೆಗಾರರ ಒಂದು ಹಳಸಲು ಕನಸು. ದೇಶ ಮತ್ತು ಅದರ ಐಕ್ಯತೆಗಾಗಿ ಅದನ್ನು ನೇರವಾಗಿ ತಿರಸ್ಕರಿಸಬೇಕಾಗಿದೆ.

ಕಾರ್ಮಿಕನ ಬಿಡುಗಡೆ 5 ಸಹಸ್ರ ಸಂಭಾವನೆ

ವಿರಾಜಪೇಟೆಯ ತಿತಿಮತ್ತಿ ಸಮೀಪದ ಕಾಫಿ ಎಸ್ಟೇಟ್ ಕಾರ್ಮಿಕ ಚಂದ್ರಸ್ವಾಮಿ ಹಾಗೂ ಇತರ ಮೂವರನ್ನು ಅರಣ್ಯ ಇಲಾಖೆಯ ಎ.ಸಿ.ಎಫ್.ಐ. ಸಿಬ್ಬಂದಿಗಳು ಬಂಧಿಸಿ ಪೋಲೀಸ್ ಕಸ್ಟಡಿಯಲ್ಲಿಟ್ಟು ಚಿತ್ರಹಿಂಸೆ ನೀಡಿರುವುದನ್ನು ಡಿ.ವೈ.ಎಫ್.ಐ. ವಿರಾಜಪೇಟೆ ಘಟಕ ತೀವ್ರವಾಗಿ ಖಂಡಿಸಿದೆ.

ಫೆಬ್ರವರಿ 17ರಂದು ಬಂಧಿಸಿದ ಇವರಲ್ಲಿ ಮೂರವನ್ನು ಬಿಡುಗಡೆ ಮಾಡಿ ಚಂದ್ರಸ್ವಾಮಿಯನ್ನು ಎಲ್ಲಿಡಲಾಗಿದೆ ಎಂಬ ಸುಳಿವನ್ನು ನೀಡದೆ ನ್ಯಾಯಾಲಯಕ್ಕೆ ಹಾಜರುಪಡಿಸದೇ ಅಧಿಕಾರಿಗಳು ಚಂದ್ರಸ್ವಾಮಿಯನ್ನು ಬಿಡುಗಡೆಗೊಳಿಸಲು 5 ಸಾವಿರ ರೂ. ಸಂಭಾವನೆಯನ್ನು ನೀಡಬೇಕೆಂದು ಒತ್ತಾಯಿಸಿದ್ದಾರೆ.

ತೋಟ ಮಾಲೀಕ ಮಂಡಲ ಸದಸ್ಯ ಕೃಷ್ಣಕುಮಾರ್ ಹಾಗೂ ಸ್ಥಳೀಯ ನಾಗರೀಕರು ಈ ಬಗ್ಗೆ ದೂರೊಂದನ್ನು ಪೋಲೀಸ್ ಠಾಣೆಗಳಲ್ಲಿ ನೀಡಿದ್ದರು. ಯಾವ ಪ್ರಯೋಜನವಿಲ್ಲದಂತಾಗಿದೆ. ಈ ಬಂಧನ ಚಿತ್ರಹಿಂಸೆಯ ಕುರಿತು ಸ್ಥಳೀಯ ಕೊಡಗು ಕೇಸರಿ ಪತ್ರಿಕೆ ವರದಿಯೊಂದನ್ನು ಮಾಡಿದೆ.

ಚಂದ್ರಸ್ವಾಮಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸದಿದ್ದರೆ ಡಿ.ವೈ.ಎಫ್.ಐ. ಬಿಡುಗಡೆಗೆ ಒತ್ತಾಯಿಸಿ ಹೋರಾಟ ನಡೆಸುತ್ತದೆ ಎಂದು ಕಾರ್ಯದರ್ಶಿ ಕಾ॥ ಸ್ಟಾಲೀವಾಜ್‌ರವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಬೆಲೆಯೇರಿಕೆ ವಿರುದ್ಧ ಕಾರ್ಮಿಕರ ಮೆರವಣಿಗೆ

ಜನಸಾಮಾನ್ಯರ ದಿನ ಬಳಕೆಯ ವಸ್ತುಗಳ ಬೆಲೆಗಳನ್ನು ಏರಿಸಿರುವ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜನ ವಿರೋಧಿ ನೀತಿ ಖಂಡಿಸಿ ಸಿ.ಐ.ಟಿ.ಯು. ರಾಜ್ಯ ಸಮಿತಿ ಕರೆಯಂತೆ ಮಾರ್ಚ್ 21ರಂದು ಚಿತ್ರದುರ್ಗ ಜಿಲ್ಲೆಯ ಕೈಗಾರಿಕಾ ನಗರವಾದ ಹರಿಹರದಲ್ಲಿ ಕಾರ್ಮಿಕರು ಮೆರವಣಿಗೆ ನಡೆಸಿ ತಹಶೀಲ್ದಾರ್‌ರವರಿಗೆ ಮನವಿ ಅರ್ಪಿಸಿದರು.

ಕೇಂದ್ರ ಸರ್ಕಾರ ಸರಕು ಸಾಗಣಿಕೆದಾರರನ್ನು ಶೇ. 11ರಷ್ಟು ಹೆಚ್ಚಿಸಿ ಆಹಾರ ಪದಾರ್ಥಗಳನ್ನೊಳಗೊಂಡ ಎಲ್ಲಾ ವಸ್ತುಗಳ ಬೆಲೆ ಏರಿಸಿ 7337 ಕೋಟಿ ರೂ. ಕೊರತೆ ಬಜೆಟ್ ತೋರಿಸಿರುವುದನ್ನು ಮನವಿಯಲ್ಲಿ ಖಂಡಿಸಲಾಗಿದೆ. ಹಳ್ಳಿ ಮತ್ತು ಪಟ್ಟಣಗಳಲ್ಲಿ ಪಡಿತರ ವ್ಯವಸ್ಥೆ ಹೆಚ್ಚಿಸಿ ಜೀವನಾವಶ್ಯಕ ವಸ್ತುಗಳನ್ನು ಅಗತ್ಯ ಪ್ರಮಾಣದಲ್ಲಿ ಪೂರೈಸಬೇಕೆಂದು ಹಾಗೂ ಹರಿಹರ ಪುರಸಭೆ ಏರಿಸಿರುವ ಮನೆ ಕಂದಾಯ, ನೀರು ಕಂದಾಯ ಇಳಿಸಬೇಕೆಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ನಂತರ ಸಭೆಯನ್ನುದ್ದೇಶಿಸಿ ಕಾರ್ಮಿಕ ಮುಖಂಡರಾದ ಕಾ॥ ನಿತ್ಯಾನಂದಸ್ವಾಮಿ, ಆರ್.ಬಿ.ಅಂಗಡಿ, ಎಂ. ಎಸ್.ಆನಂದರಾವ್ ಮತ್ತು ಧ್ರುವ ಕುಮಾರ್ ಇನಾಂದರ್ ಮಾತನಾಡಿದರು.

ಮುಚ್ಚಿರುವ ಕಾರ್ಖಾನೆ ತೆರೆಯಲು ಒತ್ತಾಯಿಸಿ ರ‍್ಯಾಲಿ

ರಾಜ್ಯದಲ್ಲಿ ಮುಚ್ಚಿರುವ ಕಾರ್ಖಾನೆಗಳನ್ನು ತೆರೆಯುವಂತೆ ಕನಿಷ್ಠ ಕೂಲಿ ಜಾರಿ ಹಾಗೂ ಬೆಲೆ ಏರಿಕೆ ತಡೆಗಟ್ಟಬೇಕೆಂಬ ಮುಂತಾದ ಬೇಡಿಕೆಗಳನ್ನು ಒತ್ತಾಯಿಸಿ ಮಾರ್ಚ್ 25 ರಿಂದ 31ರವರೆಗೂ ವಾರಾಚರಣೆ ನಡೆಸಲು ಸಿ.ಐ.ಟಿ.ಯು. ಹುಬ್ಬಳ್ಳಿ ರಾಜ್ಯ ಸಮ್ಮೇಳನ ಕರೆ ನೀಡಿತು. ಅದರಂತೆ ಹಾಸನ ಜಿಲ್ಲೆಯ ಸಕಲೇಶಪುರ ದಲ್ಲಿ ಮಾರ್ಚ್ 30ರಂದು ವಿವಿಧ ತೋಟಗಳ ಸುಮಾರು 25 0 ಕಾರ್ಮಿಕರು ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಉಪ-ವಿಭಾಗಾಧಿಕಾರಿ ಗಳ ಕಛೇರಿ ಎದುರು ಮತಪ್ರದರ್ಶನ ನಡೆಸಿದರು.

ಹಾಸನ

ಮಾರ್ಚ್ 31ರಂದು ವಿವಿಧ ಕಾಫಿ ಕ್ಯೂರಿಂಗ್, ಸಾಯಿಲ್ ನಾರಿನ ಕಾರ್ಖಾನೆ, ವೆಬ್ಸ್ ಮೊದಲಾದ ಕಾರ್ಖಾನೆಗಳ ಸುಮಾರು 5 00ಕ್ಕೂ ಹೆಚ್ಚು ಕಾರ್ಮಿಕರು ಅರ್ಧದಿನ ಕೆಲಸ ಬಹಿಷ್ಕರಿಸಿ ಹಾಸನದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಜಿಲ್ಲಾಧಿಕಾರಿ ಕಛೇರಿ ಎದುರು ನಡೆದ ಮತಪ್ರದರ್ಶನದ ನಂತರ ಮುಖ್ಯಮಂತ್ರಿ ಎಸ್.ಆರ್. ಬೊಮ್ಮಾಯಿಯವರಿಗೆ ಜಿಲ್ಲಾಧಿಕಾರಿಗಳ ಮೂಲಕ ಮನವಿ ಅರ್ಪಿಸಿ ಮುಚ್ಚಿರುವ ಕಾರ್ಖಾನೆಗಳನ್ನು ತೆರೆಯಲು ಮಧ್ಯ ಪ್ರವೇಶಿಸಬೇಕೆಂದು ಹಾಗೂ ಕನಿಷ್ಠ ಕೂಲಿ ಜಾರಿಗೊಳಿಸಬೇಕೆಂದು ಒತ್ತಾಯಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಹೊರಟ ಪ್ಲಾಂಟರ್ಸ್ ಕಾಫಿ ಕ್ಯೂರಿಂಗ್ ಕಾರ್ಮಿಕರನ್ನು ಗೇಟ್‌ನಲ್ಲಿ ತಡೆದ - ಆಡಳಿತ ವರ್ಗದ ನೀತಿಯನ್ನು ಪ್ರತಿಭಟಿಸಿ ಕಾರ್ಖಾನೆ ಗೇಟ್ ಮುಂದೆಯೇ ಧರಣಿ ಕೂತರು.

ಸಕಲೇಶಪುರ ಹಾಗೂ ಹಾಸನದ ಕಾರ್ಯಕ್ರಮದಲ್ಲಿ ಸಿ.ಐ.ಟಿ.ಯು. ರಾಜ್ಯ ಕಾರ್ಯದರ್ಶಿ ಕಾ॥ ವಿ.ಸುಕುಮಾರ್‌ರವರು ನೇತೃತ್ವ ವಹಿಸಿದ್ದರು.

ತೋರಿದ ದಾರಿ

▶ ಪುಟ 5 ರಿಂದ

(ಮೂರು ಎಕರೆಗಳವರೆಗೆ) 84, ಮೂರು ಗುಂಪುಗಳಲ್ಲಿ ಸಂಮಿಶ್ರ ವರ್ಗಗಳು 173. ಅದರ ಪೈಕಿ 31 ದುರ್ಬಲ ವರ್ಗಕ್ಕೆ ಸೇರಿದವರು. ಮಧ್ಯಮ ಮತ್ತು ದೊಡ್ಡ ಹಿಡುವಳಿದಾರರ ಸಂಖ್ಯೆ 114. ಇದರ ಪೈಕಿ ಶೇ. 80ರಷ್ಟು ಮಧ್ಯಮ ವರ್ಗದವರು. ಆದುದರಿಂದ ಯೋಜನೆಯ ಪರಸ್ಪರ ಸಂಬಂಧ ಸ್ಪಷ್ಟವಾಗಿ ಕಾಣುತ್ತಿದೆ.

ಈ ತಾಲ್ಲೂಕಿನ ವೈಶಿಷ್ಟ್ಯ ಪೂರ್ಣ ಸಂಗತಿಯೆಂದರೆ ಪರಿಶಿಷ್ಟ ಜನಾಂಗ (ಶೇ. 20), ಪರಿಶಿಷ್ಟ ಜಾತಿ (ಶೇ. 27) ಮತ್ತು ಮುಸ್ಲಿಮರು (ಶೇ. 22) ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಸುಮಾರು ಶೇ. 90ರಷ್ಟು ಜನ ಕೃಷಿಯನ್ನೇ ಅವಲಂಬಿಸಿ ಜೀವನೋಪಾಯ ನಡೆಸುತ್ತಿದ್ದಾರೆ. ದುರ್ಬಲ ವರ್ಗಗಳಲ್ಲಿ ಒಂದು ನೂತನ ಜಾಗೃತಿಯನ್ನು ಗಮನಿಸಬಹುದು. ಅವರನ್ನು ಕೆಣಕುವ ಧೈರ್ಯ ಭೂಮಾಲೀಕ ವರ್ಗದಲ್ಲಿ ಇಲ್ಲ. ಅವರು ಸಂಪೂರ್ಣ ಆತ್ಮವಿಶ್ವಾಸವುಳ್ಳವರಾಗಿದ್ದಾರೆ.

ಇದನ್ನು ಬಯಸಿರಲಿಲ್ಲ...

▶ ಪುಟ 5 ರಿಂದ

ಕೆಲವು ತೆರಿಗೆಗಳನ್ನು ಹಾಕುವ ಅಧಿಕಾರ ಕೊಡಲಾಗಿದೆ.

ಕರ್ನಾಟಕದಲ್ಲಿ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಈ ಸಂಸ್ಥೆಗಳಿಗೆ ವರ್ಗಾಯಿಸಲಾಗಿದೆ.

ಈ ಎಲ್ಲಾ ರಾಜ್ಯಗಳಲ್ಲಿ ಕಾಂಗ್ರೆಸ್ಸೇತರ ಸರ್ಕಾರಗಳು ಸಂವಿಧಾನದ ತಿದ್ದುಪಡಿಯ ಅಗತ್ಯವಿಲ್ಲದೇನೇ ತಮ್ಮ ಪಂಚಾಯತು ಸಂಸ್ಥೆಗಳಲ್ಲಿ ಸುಧಾರಣೆ ತಂದಿವೆ. ಅಂದರೆ ರಾಜಕೀಯ ಇಚ್ಛೆ ಮುಖ್ಯ ಎಂಬುದು ಇಲ್ಲಿ ಸಿದ್ಧವಾಗುತ್ತದೆ.

ಆದ್ದರಿಂದ ಕೇಂದ್ರ-ರಾಜ್ಯ ಸಂಬಂಧಗಳ ಮೂರು ಪರಿಶೀಲನೆಯಾಗಬೇಕು. ರಾಜ್ಯಗಳಿಗೆ ಹೆಚ್ಚಿನ ಅಧಿಕಾರಗಳನ್ನು ನೀಡಬೇಕು ಎಂದು ಒತ್ತಾಯ ಬಲಗೊಳ್ಳುತ್ತಿರುವಾಗಲೇ ಪಂಚಾಯತು ರಾಜ್ಯ ಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರ ನೀಡಲು ಸಂವಿಧಾನ 40ನೇ ವಿಭಾಗಕ್ಕೆ ತಿದ್ದುಪಡಿ ಅಗತ್ಯ ಎಂದು ಒತ್ತಿ ಹೇಳಲಾಗುತ್ತಿದೆ. ಇದನ್ನು ಪ್ರಜಾಪ್ರಭುತ್ವ ಶಕ್ತಿಗಳು ಗುರುತಿಸಬೇಕು.

ಸಂವಿಧಾನದ ಈ ತಿದ್ದುಪಡಿ ರಾಜ್ಯಗಳ ಅಧಿಕಾರವನ್ನೂ ಇನ್ನಷ್ಟು ಮೊಟಕುಗೊಳಿಸಲಿಕ್ಕಾಗಿ ಎಂಬ ಸಂಶಯವನ್ನು ನಿವಾರಿಸಬೇಕಾದರೆ ಕೇಂದ್ರದ ಆಳುವ ಪಕ್ಷ ಇಡೀ ಪ್ರಶ್ನೆಯನ್ನೇ ಒಟ್ಟಾಗಿ ರಾಷ್ಟ್ರೀಯ ಚರ್ಚೆಗೆ ತೆರೆಯಬೇಕು. ಏಕಪಕ್ಷೀಯವಾಗಿ ಆತುರಾತುರವಾಗಿ ಮುನ್ನುಗ್ಗಬಾರದು.

ಪರಮಾಣು ನಿಶ್ಶಸ್ತ್ರೀಕರಣದತ್ತ ಸೋವಿಯೆತ್ ಒಕ್ಕೂಟದ ಮತ್ತೊಂದು ಪ್ರಸ್ತಾಪ

ಶಸ್ತ್ರ ತಯಾರಿಕೆಯಲ್ಲಿ ಬಳಸಲಾಗುವ ಯುರೇನಿಯಂನ ಉತ್ಪಾದನೆಯನ್ನು ನಿಲ್ಲಿಸಲು ಸೋವಿಯತ್ ಒಕ್ಕೂಟ ನಿರ್ಧರಿಸಿದೆಯೆಂದು ಸೋವಿಯತ್ ಅಧ್ಯಕ್ಷ ಗೊರ್ಬಚೆವ್ ತಮ್ಮ ಬ್ರಿಟನ್ ಭೇಟಿಯ ಸಮಯದಲ್ಲಿ ಲಂಡನ್ನಿನಲ್ಲಿ ತಿಳಿಸಿದ್ದಾರೆ. ಈಗಾಗಲೇ 1987ರಲ್ಲಿ ಇಂತಹ ಯುರೇನಿಯಂ ತಯಾರಿಸುವ ಕೈಗಾರಿಕಾ ರಿಯಾಕ್ಟರನ್ನು ಮುಚ್ಚಲಾಗಿತ್ತು. ಈ ವರ್ಷ ಇಂತಹ ಇನ್ನೆರಡು ರಿಯಾಕ್ಟರುಗಳನ್ನು ಮುಚ್ಚಲಾಗುವುದು. ಇವುಗಳ ಸ್ಥಾನದಲ್ಲಿ ಹೊಸ ರಿಯಾಕ್ಟರುಗಳನ್ನು ಆರಂಭಿಸುವುದಿಲ್ಲ ಎಂದು ಗೊರ್ಬಚೆವ್ ತಿಳಿಸಿದರು. ಪರಮಾಣು ನಿಶ್ಶಸ್ತ್ರೀಕರಣದತ್ತ ಇದು ಇನ್ನೊಂದು ಮಹತ್ವಪೂರ್ಣ ಸೋವಿಯತ್ ಪ್ರಸ್ತಾಪ ಎಂದು ಹೇಳಲಾಗಿದೆ.

ಅಂತರಾಷ್ಟ್ರೀಯ ರಾಜಕಾರಣವನ್ನು ನಿಶ್ಶಸ್ತ್ರೀಕರಿಸಲು ರಾಸಾಯನಿಕ ಶಸ್ತ್ರಾಸ್ತ್ರಗಳ ನಿರ್ನಾಮವೂ ಒಂದು ಅತ್ಯಗತ್ಯ ಅಂಶ ಎಂದ ಸಿ.ಪಿ.ಎಸ್.ಯು. ಪ್ರಧಾನ ಕಾರ್ಯದರ್ಶಿಗಳು ಸೋವಿಯೆತ್ ಒಕ್ಕೂಟ ಈಗಾಗಲೇ ರಾಸಾಯನಿಕ ಶಸ್ತ್ರಾಸ್ತ್ರಗಳನ್ನು ನಾಶಪಡಿಸುವ ಸೌಲಭ್ಯವನ್ನು ನಿರ್ಮಿಸಿದ್ದು ಅದನ್ನು ವೀಕ್ಷಿಸಲು ಬ್ರಿಟಿಷ್ ಪ್ರತಿನಿಧಿಗಳನ್ನು ಆಹ್ವಾನಿಸಲಾಗುವುದು ಎಂದರು.

ತಮ್ಮ ಪರಮಾಣು ಶಸ್ತ್ರಾಗಾರವನ್ನು ಆಧುನೀಕರಿಸುವ ನಾಟೋ ಯೋಜನೆಗಳ ವಿರುದ್ಧ ತೀವ್ರ ಎಚ್ಚರಿಕೆ ನೀಡಿದ ಗೊರ್ಬಚೆವ್ ಇದು ಐ.ಎನ್.ಎಫ್. ಸಂಧಿಯ ಸಾಧನೆಗಳನ್ನು ಅಪಮೌಲ್ಯಗೊಳಿಸುವುದು ಎಂದರು. ಪರಮಾಣು ಶಸ್ತ್ರಾಸ್ತ್ರಗಳನ್ನು ಪೇರಿಸಿಯೇ ಯುದ್ಧ ತಡೆಯಲು ಸಾಧ್ಯವೆಂಬ ಸಿದ್ಧಾಂತವನ್ನು ಕೈಬಿಡಬೇಕಾದ ಸಮಯ ಬಂದಿದೆ ಎಂದು ಗೊರ್ಬಚೆವ್ ಇಂತಹ ಸಿದ್ಧಾಂತದ ಪ್ರಬಲ ಪಕ್ಷಪಾತಿ ಬ್ರಿಟಿಷ್ ಪ್ರಧಾನಿ ಥ್ಯಾಚರ್ ಪಕ್ಕದಲ್ಲೇ ಕುಳಿತಿದ್ದಾಗ ದೃಢ ದನಿಯಲ್ಲಿ ಘೋಷಿಸಿದರು.

ಗೊರ್ಬಚೆವ್‌ರ ಜತೆಗೆ ಸೋವಿಯತ್ ವಿದೇಶಾಂಗ ಮಂತ್ರಿ ಹಾಗೂ ಸಿ.ಪಿ.ಎಸ್.ಯು. ಪಾಲಿಟ್‌ಬ್ಯೂರೋ ಸದಸ್ಯ ಶೆವರ್ನಾಡ್ಸೆಯವರೂ ಬ್ರಿಟನ್ನಿಗೆ ಭೇಟಿಯಿತ್ತಿದ್ದರು. ಬ್ರಿಟಿಶ್ ವಿದೇಶಾಂಗ ವಿಭಾಗ ದೊಂದಿಗೆ ಚರ್ಚೆ ನಡೆಸಿದ ಅವರು ಪಾಕಿಸ್ತಾನಕ್ಕೆ ಬ್ರಿಟಿಷ್ ನೆರವು ಅಫ್‌ಘಾನ್ ಅಂತರ್ಯುದ್ಧವನ್ನು ಮತ್ತಷ್ಟು ದೀರ್ಘಗೊಳಿಸಿದೆ ಎಂದು ಬಲವಾಗಿ ಟೀಕಿಸಿದರು. ಅಫ್‌ಘಾನ್ ಅಧ್ಯಕ್ಷ ನಜೀಬುಲ್ಲಾ ಅಧಿಕಾರದಿಂದ ಕೆಳಗಿಳಿಯಬೇಕೆಂಬ ಬ್ರಿಟಿಶ್ ವಿದೇಶಾಂಗ ಕಾರ್ಯದರ್ಶಿಗಳ ಹೇಳಿಕೆಯ ಬಗ್ಗೆಯೂ ತೀವ್ರ ಪ್ರತಿಭಟನೆ ವ್ಯಕ್ತಪಡಿಸಲಾಯಿತು. ಅಫ್‌ಘಾನಿಸ್ತಾನದೊಳಗೆ ಶಕ್ತಿ ಸಾಮರ್ಥ್ಯ ಮತ್ತು ಪ್ರತಿಷ್ಠೆ ಹೊಂದಿರುವ ಜನರಿದ್ದಾರೆಂಬುದನ್ನು ನಿರ್ಲಕ್ಷಿಸುವುದು ಜಾಣತನವಲ್ಲ ಎಂದು ಶೆವರ್ನಾಡ್ಸೆ ಬ್ರಿಟಿಶ್ ವಿದೇಶಾಂಗ ಕಾರ್ಯದರ್ಶಿಗಳಿಗೆ ಹೇಳಿದರೆಂದು ವರದಿಯಾಗಿದೆ.

ಸೋವಿಯೆತ್ ಜನತಾಪ್ರತಿನಿಧಿಗಳ ಚುನಾವಣೆ

ಸೋವಿಯತ್ ಸಮಾಜವಾದಿ ಗಣತಂತ್ರಗಳ ಒಕ್ಕೂಟದ ಜನತಾ ಪ್ರತಿನಿಧಿಗಳ ಕಾಂಗ್ರೆಸ್ ಸೋವಿಯತ್ ಒಕ್ಕೂಟದ ಪ್ರಭುತ್ವಾಧಿಕಾರದ ಅತ್ಯುಚ್ಚ ವೇದಿಕೆ. ಮಾರ್ಚ್ 26ರಂದು ಈ ಕಾಂಗ್ರೆಸ್‌ಗೆ ಪ್ರತಿನಿಧಿಗಳ ಚುನಾವಣೆ ನಡೆಯಿತು. ಈ ಚುನಾವಣೆಗಳಲ್ಲಿ 15 00 ಪ್ರತಿನಿಧಿಗಳನ್ನು ಸೋವಿಯತ್ ಜನತೆ ಆರಿಸಬೇಕಾಗಿತ್ತು ಉಳಿದ 75 0 ಪ್ರತಿನಿಧಿಗಳು ದೇಶದ ಪ್ರಮುಖ ಸಾರ್ವಜನಿಕ ಸಂಘಟನೆಗಳಿಂದ ಈಗಾಗಲೇ ಆಯ್ಕೆಗೊಂಡಿದ್ದಾರೆ. ಸಂಘಟನೆಗಳ ಮಹಾಧಿವೇಶನಗಳು, ಸಮ್ಮೇಳನಗಳು, ಪ್ಲೀನಮ್‌ಗಳಲ್ಲಿ ಅವರನ್ನು ಆರಿಸಲಾಯಿತು.

ಮಾರ್ಚ್ 26ರ ಚುನಾವಣೆಯಲ್ಲಿ 15 00 ಸ್ಥಾನಗಳಿಗೆ 2895 ಅಭ್ಯರ್ಥಿಗಳು ಸ್ಪರ್ಧಿಸಿದ್ದರು. 95 3 ಸ್ಥಾನಗಳಲ್ಲಿ ಒಂದು ಸ್ಥಾನಕ್ಕೆ ಎರಡು ಅಭ್ಯರ್ಥಿಗಳಿದ್ದರು. 163 ಸ್ಥಾನಗಳಲ್ಲಿ 3ರಿಂದ 12 ಅಭ್ಯರ್ಥಿಗಳಿದ್ದರು. 384 ಸ್ಥಾನಗಳಲ್ಲಿ ಕೇವಲ ಒಬ್ಬರೇ ಅಭ್ಯರ್ಥಿಯಿದ್ದರು. ಯಾವುದೇ ಅಭ್ಯರ್ಥಿ 5 0%ಕ್ಕಿಂತ ಹೆಚ್ಚು ಮತ ಪಡೆಯದಿದ್ದರೆ ಅಂತಹ ಕ್ಷೇತ್ರಗಳಲ್ಲಿ ಮರು ಚುನಾವಣೆ ನಡೆಯುತ್ತದೆ.

ಅಂತರಿಕ್ಷ ತಂತ್ರಜ್ಞಾನದಲ್ಲಿ ಚೀಣಾದ ದೊಡ್ಡ ಮುನ್ನಡೆ

ಅಂತರಿಕ್ಷ ತಂತ್ರಜ್ಞಾನದಂತಹ ಮುಂದುವರಿದ ವೈಜ್ಞಾನಿಕ ಕ್ಷೇತ್ರದಲ್ಲಿ ಚೀಣಾ ಗಣತಂತ್ರ ಉಪಗ್ರಹಗಳ ವ್ಯಾಪಕ ಬಳಕೆಯ ಹೊಸ ಘಟ್ಟ ತಲುಪಿದೆಯೆಂದು ವರದಿಯಾಗಿದೆ. 195 0ರ ದಶಕದಲ್ಲಿ ವಿವಿಧ ಮಾದರಿಗಳ "ಲಾಂಗ್ ಮಾರ್ಚ್" ರಾಕೆಟ್‌ಗಳ ನಿರ್ಮಾಣದೊಂದಿಗೆ ಈ ಕ್ಷೇತ್ರವನ್ನು ಪ್ರವೇಶಿಸಿದ ಚೀಣಾ 1970 ಏಪ್ರಿಲ್‌ನಲ್ಲಿ ಮೊದಲ ಉಪಗ್ರಹವನ್ನು ಯಶಸ್ವಿಯಾಗಿ ಹಾರಿಸಿತು. ಈ 19 ವರ್ಷಗಳಲ್ಲಿ 25 ಉಪಗ್ರಹಗಳನ್ನು ತಯಾರಿಸುವ ಸಾಮರ್ಥ್ಯವನ್ನು ಅದು ಹೊಂದಿದೆ.

ದೂರಗ್ರಹಣ, ದೂರ ಸಂಪರ್ಕ, ಪ್ರಸಾರ, ಹವಾಮಾನವಿಜ್ಞಾನ ಹಾಗೂ ವಿವಿಧ ಆರ್ಥಿಕ ಮತ್ತು ವೈಜ್ಞಾನಿಕ ಸಂಶೋಧನಾ ಕ್ಷೇತ್ರಗಳಿಗೆ ಬೇಕಾದ ಅಂಕಿಅಂಶ ಸಂಗ್ರಹದಲ್ಲಿ ಉಪಗ್ರಹಗಳ ಬಳಕೆಯಾಗುತ್ತಿದೆ. ರಾಷ್ಟ್ರೀಯ ಆರ್ಥಿಕ ಬೆಳವಣಿಗೆಯ ಮೇಲೆ ನೇರ ಪರಿಣಾಮ ಬೀರುವ ಉಪಗ್ರಹಗಳನ್ನು ಹಾರಿಸುವ ಯೋಜನೆಯನ್ನೀಗ ಚೀಣಾ ಹಾಕಿಕೊಂಡಿದೆ.

ಕಳೆದ ವರ್ಷದ ಅಂತ್ಯದ ವೇಳೆಗೆ ಹೈನಾನ್ ದ್ವೀಪದಲ್ಲಿ ಅಂತರಿಕ್ಷ ಸಂಶೋಧನೆಗಾಗಿ ಒಂದು ಉಡ್ಡಾಣ ಕೇಂದ್ರವನ್ನು ನಿರ್ಮಿಸಲಾಗಿದ್ದು ಇದಲ್ಲದೆ ಇನ್ನೂ 3 ಉಡ್ಡಾಣ ಕೇಂದ್ರಗಳು ಚೀಣಾದಲ್ಲಿವೆ. ಅಂತರಿಕ್ಷ ಶಟಲ್, ಖಾಯಂ ಅಂತರಿಕ್ಷ ನಿಲ್ದಾಣ ಮತ್ತು ಇತರ ಅತ್ಯಾಧುನಿಕ ವ್ಯವಸ್ಥೆಗಳನ್ನು ನಿರ್ಮಿಸುವ ಯೋಜನೆ ಹಾಕಿಕೊಳ್ಳಲಾಗಿದೆ.

ಪೂರ್ವ ಜರ್ಮನಿಯಲ್ಲಿ ಮಹಿಳೆಯರು

ಸಮಾಜವಾದಿ ಜರ್ಮನಿಯಲ್ಲಿ ಮಹಿಳೆಯರಲ್ಲಿ 90% ದುಡಿಯುವ ಮಹಿಳೆಯರು. ಮಹಿಳೆಯರ ಸ್ಥಾನ ಅಡಿಗೆ ಕೋಣೆಯಲ್ಲಿ ಎಂದು ಈಗ ಯಾರೂ ಹೇಳುವುದಿಲ್ಲ. ಅವರೇಕೆ ದುಡಿಯುತ್ತಾರೆ? ತಮ್ಮ ವ್ಯಕ್ತಿತ್ವ ಬೆಳೆಸಿಕೊಳ್ಳಲು ಅವಕಾಶ ಸ್ವಾತಂತ್ರ, ಹೆಚ್ಚಿನ ಜೀವನ ಮಟ್ಟ ಅಥವಾ ದುಡಿಯುವ ಜಾಗದಲ್ಲಿ ತಮ್ಮ ಸಾಮರ್ಥ್ಯಕ್ಕೆ ಮಾನ್ಯತೆ- ಜರ್ಮನಿಯ ಮಹಿಳೆಯರು ಕೊಡುವ ಕಾರಣಗಳಿವು. ಮಹಿಳೆಯರಿಗೆ ತಿಂಗಳಿಗೊಂದು ಹೆಚ್ಚಿನ ರಜೆ ನೀಡಲಾಗುವುದು- ಮನೆಗೆಲಸಗಳಿಗಾಗಿ. ಆದರೂ ಅವರಿಗೆ ಮನೆಗೆಲಸಕ್ಕೆ ಹೆಚ್ಚು ಸಮಯ ಸಿಗುವುದಿಲ್ಲವಾದ್ದರಿಂದ ಸಾರ್ವಜನಿಕ ಸೇವಾ ವಲಯದ ಚಟುವಟಿಕೆಗಳನ್ನು ಬಹಳಷ್ಟು ವಿಸ್ತರಿಸಲಾಗಿದೆ. ಇನ್ನಷ್ಟು ವಿಸ್ತರಿಸಿ ಅಡುಗೆ, ಬಟ್ಟೆ ಒಗೆಯುವುದು ಮುಂತಾದ ಮನೆಗೆಲಸಗಳ ಭಾರವನ್ನು ಕಡಿಮೆ ಮಾಡಲು ಪ್ರಯತ್ನಿಸಲಾಗುತ್ತಿದೆ. ಇವುಗಳಲ್ಲಿ ಅಡುಗೆಗೆ ಬೇಕಾಗುವ ಸಮಯ ಬಹಳ ಕಡಿಮೆ. ಏಕೆಂದರೆ ಮಧ್ಯಾಹ್ನದ ಊಟ ಪೋಷಕರಿಗೆ ತಮ್ಮ ದುಡಿಯುವ ಜಾಗಗಳಲ್ಲಿನ ಕ್ಯಾಂಟೀನ್‌ಗಳಿದ್ದರೆ ಮಕ್ಕಳಿಗೆ ಅವರವರ ಶಾಲೆಗಳಲ್ಲಿ ಇದರ ವ್ಯವಸ್ಥೆ ಮಾಡಲಾಗಿದೆ.

ಮೇನೇಜ್‌ಮೆಂಟ್ ಹುದ್ದೆಗಳಲ್ಲಿ ಕೂಡಾ 40%ದಷ್ಟು ಮಹಿಳೆಯರಿದ್ದಾರೆ. ಗಂಡಸರ ಕ್ಷೇತ್ರವೆನಿಸಿಕೊಂಡ ಗಣಿತಶಾಸ್ತ್ರ, ಇಂಜಿನಿಯರಿಂಗ್ ಮುಂತಾದ ಕ್ಷೇತ್ರಗಳಲ್ಲೂ ಮಹಿಳಾ ಸ್ನಾತಕರ ಪ್ರಮಾಣ 5 0%ವಿದೆ. ಆದರೆ ಉನ್ನತ ಮ್ಯಾನೇಜ್‌ಮೆಂಟ್ ಹುದ್ದೆಗಳಲ್ಲಿ, ಪ್ರಾಧ್ಯಾಪಕ ಹುದ್ದೆಗಳಲ್ಲಿ ಮಹಿಳೆಯರ ಸಂಖ್ಯೆ ಈ ಪ್ರಮಾಣದಲ್ಲಿಲ್ಲ. ಈ ಬಗ್ಗೆ ಈಗ ಹೆಚ್ಚಿನ ಗಮನ ನೀಡಲಾಗುತ್ತಿದೆ.

ಕೇರಳದ ಎಲ್.ಡಿ.ಎಫ್. ಸರ್ಕಾರ ಕೇಂದ್ರದ ಪಕ್ಷಪಾತ ನೀತಿ ಎದುರಿಸಿಯೂ ಗಮನಾರ್ಹ ಮುನ್ನಡೆ

ಕೇರಳದ ಎಲ್.ಡಿ.ಎಫ್. ಸರ್ಕಾರ ಇತ್ತೀಚೆಗೆ ತನ್ನ ಆಳ್ವಿಕೆಯ ಎರಡನೇ ವಾರ್ಷಿಕೋತ್ಸವ ಆಚರಿಸಿತು. ಕೇಂದ್ರದ ತೀವ್ರ ಪಕ್ಷಪಾತ ನೀತಿಯ ವಿರುದ್ಧ ಹೋರಾಟದ ಹಿನ್ನೆಲೆಯಲ್ಲಿ ಈ ಎರಡು ವರ್ಷಗಳ ಸಾಧನೆ ಗಮನಾರ್ಹ.

ದೇಶದ ಜನಸಂಖ್ಯೆಯ 3.7% ಈ ರಾಜ್ಯದಲ್ಲಿದೆ. ಕೈಗಾರಿಕೆಯಲ್ಲಿ ಬೇರೆ ರಾಜ್ಯಗಳಿಗಿಂತ ಹಿಂದುಳಿದಿದೆ. ಆದರೂ ಈ ವರ್ಷ ಕೇಂದ್ರದ ಸಾರ್ವಜನಿಕ ವಲಯದ ಬಂಡವಾಳ ವಿನಿಯೋಗದಲ್ಲಿ ಕೇರಳದ ಪಾಲು ಕೇವಲ 1.39% ಕಳೆದ ವರ್ಷ ಇದು 1.6%ವಿತ್ತು. 1974ರಲ್ಲಿ 3.28ವಿತ್ತು. ತೀವ್ರ ವಿದ್ಯುತ್ ಕೊರತೆ ಎದುರಿಸುತ್ತಿರುವ ಈ ರಾಜ್ಯದಲ್ಲಿ ಅದನ್ನು ನಿವಾರಿಸಲು ರಾಜ್ಯ ಸರ್ಕಾರ ಮಂಡಿಸಿದ ಯಾವ ಯೋಜನೆಗೂ ಕೇಂದ್ರದ ಅಂಗೀಕಾರ ದೊರೆತಿಲ್ಲ. ಕಾಯಂಕುಳಂನಲ್ಲಿ ಸ್ಥಾಪಿಸುವುದಾಗಿ ಈ ಹಿಂದೆ ಹೇಳಿದ್ದ ತಾಪ ವಿದ್ಯುತ್ ಕೇಂದ್ರದ ಬಗ್ಗೆ ಪ್ರಸ್ತಾಪವೇ ಇಲ್ಲ. ಇದೇ ರೀತಿ ರೈಲ್ವೇ ವಿಭಾಗದಲ್ಲಷ್ಟೇ ಅಲ್ಲ, ರಾಜ್ಯದ ಪ್ರಮುಖ ಬೆಳೆಗಳಾದ ತೆಂಗು ಮತ್ತು ರಬ್ಬರ್‌ಗಳ ವಿಷಯದಲ್ಲೂ ಗುತ್ತೇದಾರಿ ವ್ಯಾಪಾರಸ್ಥರ ಪರ ವಹಿಸಿರುವ ಕೇಂದ್ರ ಸರ್ಕಾರ ಈ ಬೆಳೆಗಳ ಹಿತಾಸಕ್ತಿಗಳ ಮೇಲೆ ಕೊಡಲಿಯೇಟು ಹಾಕಿದೆ. ಪಕ್ಷಪಾತದ ಧೋರಣೆ ಸ್ಪಷ್ಟವಾಗಿ ಕಂಡು ಬಂದಿರುವುದು ರೇಶನ್ ಅಕ್ಕಿ ಕೋಟಾ ಕಡಿತದಲ್ಲಿ. ಭತ್ತದ ಉತ್ಪಾದನೆ ಉತ್ತಮವಿದ್ದರೂ ರಾಜ್ಯದ 1.45 ಲಕ್ಷ ಟನ್ ಕೋಟಾದಲ್ಲಿ 1 ಲಕ್ಷ ಟನ್ ಮಾತ್ರ ಪೂರೈಸಲಾಗುತ್ತಿದೆ. ಇವೆಲ್ಲಕ್ಕೂ ಮುಕುಟವಿಟ್ಟಂತೆ ಕಾಂಗ್ರೆಸ್(ಐ)ನ ಏಜೆಂಟರಾಗಿ ವರ್ತಿಸುವ ರಾಜ್ಯಪಾಲೆಯ ಕಿರುಕುಳಗಳು.

ಈ ಎಲ್ಲಾ ಪಕ್ಷಪಾತ ನೀತಿಗಳ ವಿರುದ್ಧ ಹೋರಾಟ ಜತೆಗೇ ಎಲ್.ಡಿ.ಎಫ್. ಸರ್ಕಾರ ಜನತೆಯ ನಿರೀಕ್ಷೆಯ ಮಟ್ಟಕ್ಕೆ ಬರಲು ಸತತ ಪ್ರಯತ್ನ ನಡೆಸಿದೆ.

ಮುಖ್ಯವಾಗಿ ಜಾತ್ಯಾತೀತತೆಯ ಬಗ್ಗೆ ದೃಢ ನಿಲುವು ತಳೆದಿರುವುದು. ಹಿಂದಿನ ಕಾಂಗ್ರೆಸ್(ಐ) ಸರ್ಕಾರದ ಭ್ರಷ್ಟ ಕಾರ್ಯನಿರ್ವಹಣೆಗೆ ತದ್ವಿರುದ್ಧವಾಗಿ ಮಂತ್ರಿ ಮಂಡಲದ ಮಟ್ಟದಲ್ಲಿ ಭ್ರಷ್ಟಾಚಾರವಿಲ್ಲದೆ ಆಳ್ವಿಕೆ ನಡೆಸಲು ಸಾಧ್ಯ ಎಂದು ತೋರಿಸಿಕೊಟ್ಟಿರುವುದು- ಎಲ್.ಡಿ.ಎಫ್.ನ ವಿರೋಧಿಗಳೂ ನಿರಾಕರಿಸಲಾಗದ ಅಂಶ.

ಕಾಂಗ್ರೆಸ್(ಐ) ಆಳ್ವಿಕೆಯಲ್ಲಿ ಮುಚ್ಚಲ್ಪಟ್ಟಿದ್ದ ಹಲವಾರು ಕಾರ್ಖಾನೆಗಳನ್ನು ತೆರೆಸುವ ಮೂಲಕ ಎರಡು ಲಕ್ಷಕ್ಕೂ ಹೆಚ್ಚು ಕಾರ್ಮಿಕರು ಮತ್ತೆ ಕೆಲಸ ಪಡೆಯುವಂತಾಗಿದೆ. ಅಕ್ಕಿ ಕೋಟಾ ಕಡಿತವಿದ್ದಾಗ್ಯೂ ನಾಗರಿಕ ವಿತರಣೆ ಇಲಾಖೆ ದಕ್ಷತೆಯಿಂದ ಕೆಲಸ ಮಾಡು ವಂತಾಗಿದೆ. ಶಿಕ್ಷಣ ರಂಗದಲ್ಲಿನ ಅರಾಜಕತೆ ಹಾಗೂ ಭ್ರಷ್ಟಾಚಾರ ನಿಲ್ಲಿಸಲಾಗಿದೆ. ಸಾರಿಗೆ ಇಲಾಖೆಯ ನಷ್ಟ ಕಡಿಮೆಯಾಗಿ ದಕ್ಷತೆಯಿಂದ ಕಾರ್ಯ ನಿರ್ವಹಿಸಲಾರಂಭಿಸಿದೆ.

ಸರ್ವತೋಮುಖ ವಿಘಟನೆ, ಅವನತಿಯತ್ತ ಸಾಗಿರುವ ಕಾಂಗ್ರೆಸ್(ಐ)ನ ಆಳ್ವಿಕೆಗೆ ಒಂದು ಸಮರ್ಥ ಪರ್ಯಾಯದ ಉದಾಹರಣೆಯನ್ನು ದೇಶದ ಪ್ರಗತಿಪರ ಶಕ್ತಿಗಳ ಮುಂದಿಡಲು ಕೇರಳದ ಎಲ್.ಡಿ.ಎಫ್. ಸರ್ಕಾರ ಕಳೆದ ಎರಡು ವರ್ಷಗಳಲ್ಲಿ ರಾಜ್ಯದ ಆಡಳಿತದ ಎಲ್ಲಾ ವಿಭಾಗಗಳಲ್ಲೂ ನಿರಂತರ ಪ್ರಯತ್ನ ನಡೆಸಿದೆ.

ಪಶ್ಚಿಮಬಂಗಾಳ- ಕಾಂಗ್ರೆ ಬಹಿಷ್ಕಾರದ ನಾಟಕ

ಪಶ್ಚಿಮ ಬಂಗಾಳ ಅಸೆಂಬ್ಲಿಯಲ್ಲಿ ರಾಜ್ಯಪಾಲರ ಮೇಲೆ ಕಾಂಗ್ರೆ ಹಲ್ಲೆಯ ನಂತರ ಆ ಪಕ್ಷದ ಆಂತರಿಕ ಕಿತ್ತಾಟಗಳಲ್ಲಿ ಹಾಸ್ಯಾಸ್ಪದ ಪರಿಸ್ಥಿತಿ ಉಂಟಾಯಿತು. ಪಕ್ಷದ ಒಂದು ವಿಭಾಗ ಭದ್ರತೆಯಿಲ್ಲವೆಂಬ ನೆಪವೊಡ್ಡಿ ವಿಧಾನಸಭೆಯನ್ನು ಬಹಿಷ್ಕರಿಸಲು ನಿರ್ಧರಿಸಿದರು. ಆದರೆ ಹೆಚ್ಚು ಪ್ರಭಾವವಿರುವ ಪ್ರಿಯರಂಜನ್ ದಾಸ್‌ಮುನ್ಷಿ ಗುಂಪು ಇದನ್ನು ಬೆಂಬಲಿಸಲಿಲ್ಲ. ಈ ಗುಂಪಿನೊಳಗಿನ ಉಪ ಗುಂಪಿನ ಸುಬ್ರತೋ ಮುಖರ್ಜಿ ದೆಹಲಿಯಲ್ಲಿ ಕಾಂಗ್ರೆ ಧರಣಿ ವಿಫಲಗೊಂಡಿತೆಂದು ಹೇಳಿಕೆ ನೀಡಿದರು!

ಈ ನಡುವೆ, ಇದೇ ಗುಂಪಿನ ಇನ್ನೊಬ್ಬ ಮುಖಂಡ ಸೌಗತರಾಯ್ ಮತ್ತು ಸುಬ್ರತೋ ಮುಖರ್ಜಿ ನಡುವೆ ಹಣಾಹಣಿ ಆರಂಭವಾಯಿತು. ಒಬ್ಬರು ಇನ್ನೊಬ್ಬರನ್ನು "ಜ್ಯೋತಿಬಸುರವರ ಏಜೆಂಟ್" ಎಂದು ಆಪಾದಿಸುತ್ತಾ ವಿಧಾನಸಭೆಯಲ್ಲಿ ಪರಸ್ಪರ ವಿರುದ್ಧ ಹಕ್ಕುಚ್ಯುತಿ ಪ್ರಸ್ತಾಪ ಮಂಡಿಸಿದರು!

ಈ ಎಲ್ಲಾ ಕಿತ್ತಾಟಗಳ ನಡುವೆ ಮುಖವುಳಿಸಿಕೊಳ್ಳುವ ಪ್ರಯತ್ನವಾಗಿ ಮಾರ್ಚ್ 27ರಂದು ಕಾಂಗ್ರೆ ವಿಧಾನಸಭಾ ಪಕ್ಷದ ಸಭೆ ನಡೆದು ಬಹಿಷ್ಕಾರ ವಾಪಸು ಪಡೆಯಲು ನಿರ್ಧರಿಸಲಾಯಿತು. ಆದರೆ ಇದರಿಂದಲೂ ಕಾಂಗ್ರೆ ಗುಂಪು ಕಿತ್ತಾಟ, ಗುಂಪಿನೊಳಗೂ ಉಪ ಗುಂಪು ಕಿತ್ತಾಟ ನಿಲ್ಲುವ ಸಂಭವ ಕಾಣುತ್ತಿಲ್ಲ.

ವಿಧಾನಸಭೆಯ ಸಭಾಧ್ಯಕ್ಷರು ರಾಜ್ಯಪಾಲರ ಭಾಷಣದ ಸಂದರ್ಭದಲ್ಲಿ ಕಾಂಗ್ರೆ ಸದಸ್ಯರ ವರ್ತನೆಯ ಬಗ್ಗೆ ವಿವರಣೆ ನೀಡಬೇಕೆಂದು ಕೇಳಿದ್ದಾರೆ.

ತ್ರಿಪುರಾ- ಕಾಲೇಜು ಶಿಕ್ಷಕರ ಮೇಲೆ ಹಲ್ಲೆ

ಮೂರು ದಿನಗಳ ಸಮ್ಮೇಳನಕ್ಕಾಗಿ ಅಗರ್ತಲಾದಲ್ಲಿ ಸಭೆ ಸೇರಿದ್ದ ತ್ರಿಪುರಾ ಕಾಲೇಜು ಶಿಕ್ಷಕರ ಸಂಘದ ಮುಖಂಡರ ಕೊಲೆಗೆ ವಿಫಲ ಪ್ರಯತ್ನ ನಡೆಸಲಾಯಿತು. ಮಾರ್ಚ್ 25 ರಂದು ಎನ್.ಎಸ್.ಯು.ಐ.ನ ಮುಖಂಡ ನಾಡುದತ್ತನ ನೇತೃತ್ವದಲ್ಲಿ ಸಮಾಜಘಾತುಕ ಶಕ್ತಿಗಳು ಮಾರುತಿ ಜೀಪುಗಳಲ್ಲಿ ಸ್ಕೂಟರ್‌ಗಳಲ್ಲಿ ಬಂದು ಸಂಜೆ 6 ಗಂಟೆಗೆ ಮೊದಲ ದಿನದ ಅಧಿವೇಶನ ಮುಗಿಸಿ ಹೊರ ಬರುತ್ತಿದ್ದ ಮುಖಂಡರ ಮೇಲೆ ನಡೆಸಿದ ಹಲ್ಲೆಗಳಲ್ಲಿ ಹಲವಾರು ಶಿಕ್ಷಕ ಪ್ರತಿನಿಧಿಗಳು ಗಾಯಗೊಂಡಿದ್ದಾರೆ. ಪ್ರಮುಖ ಮುಖಂಡರ ಮೇಲೆ ಬಾಂಬುಗಳನ್ನು ಎಸೆಯಲಾಯಿತು. ಈ ಹಲ್ಲೆಯನ್ನು ನಿರೀಕ್ಷಿಸಿದ್ದ ಸಂಘ ಪೋಲೀಸ್ ರಕ್ಷಣೆ ಕೇಳಿದ್ದರೂ ಅದನ್ನು ಕೊಟ್ಟಿರಲಿಲ್ಲ.

ವಿಧಾನಸಭೆಗೆ ಲಗ್ಗೆ-ಮ.ಪ್ರ. ಸಿ.ಐ.ಟಿ.ಯು. ನಿರ್ಣಯ

ಮಧ್ಯಪ್ರದೇಶದ 5 ಸರ್ಕಾರೀ ಇಲಾಖೆಗಳ ಮತ್ತು ಇತರ ಹಲವು ನಿಗಮಗಳ ಸಾವಿರಾರು ಕಾರ್ಮಿಕರು ಏಪ್ರಿಲ್ 24ರಿಂದ ಮೂರು ದಿನ ವಿಧಾನಸಭೆಯ ಘೇರಾವ್ ನಡೆಸಲು ನಿರ್ಧರಿಸಿದ್ದಾರೆ. ಮಾರ್ಚ್ 19ರಂದು ಇಂದೂರಿನಲ್ಲಿ ನಡೆದ ರಾಜ್ಯ ಮಟ್ಟದ ಸಮಾವೇಶದಲ್ಲಿ ಇದನ್ನು ನಿರ್ಧರಿಸಲಾಯಿತು. ಇದಕ್ಕೆ ಪೂರ್ವಭಾವಿಯಾಗಿ ರಾಜ್ಯಾದ್ಯಂತ ಧರಣಿ, ಪ್ರದರ್ಶನ, ಪ್ರತಿಭಟನೆಗಳು [illegible] ಏಪ್ರಿಲ್ 10ರಿಂದ 15 ರವರೆಗೆ [illegible] ನಡೆಸಲು ಕರೆ ನೀಡಲಾಯಿತು. ಎಲ್ಲಾ ಕಾರ್ಮಿಕರನ್ನು ಖಾಯಂಗೊಳಿಸುವುದು, ಅಪ್ಪರವರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ, ಕಾಂಟ್ರಾಕ್ಟ್ ಪದ್ಧತಿ ರದ್ದು, ಎಲ್ಲಾ ಕಾಂಟ್ರಾಕ್ಟ್ ನೌಕರರಿಗೆ ಕೆಲಸ ಮತ್ತು ಮಹಿಳಾ ಕಾರ್ಮಿಕರ ಸೌಲಭ್ಯಗಳನ್ನು ಕುರಿತಾದ ಒಟ್ಟು 15 ಬೇಡಿಕೆಗಳ ಸುತ್ತ ಈ ಹೋರಾಟ ನಡೆಯುತ್ತಿದೆ.

ಕಳೆದ ಹತ್ತು ವರ್ಷಗಳಿಂದ ಸಾರ್ವಜನಿಕ ಆರೋಗ್ಯ ಕಾಮಗಾರಿ, ನೀರಾವರಿ, ಕೃಷಿ ಮತ್ತು ಅರಣ್ಯ ಇಲಾಖೆಗಳಲ್ಲಿ, ಸುಮಾರು ಎರಡು ಲಕ್ಷಕ್ಕೂ ಹೆಚ್ಚು ಕಾರ್ಮಿಕರು ಯಾವ ಸೌಲಭ್ಯವೂ ಇಲ್ಲದೆ ಜೀತದಾಳುಗಳಂತೆ ದುಡಿಯಬೇಕಾದ ಪರಿಸ್ಥಿತಿಯ ವಿರುದ್ಧ ಸಿ.ಐ.ಟಿ.ಯು. ನೇತೃತ್ವದಲ್ಲಿ ಹೋರಾಟ ನಡೆಯುತ್ತಾ ಬಂದಿದೆ. ಇದರ ಫಲವಾಗಿ ಜನವರಿ 1985 ರಲ್ಲಿ ಅರ್ಜುನ್‌ಸಿಂಗ್ ಸರ್ಕಾರ ಈ ಎಲ್ಲಾ ಕಾರ್ಮಿಕರನ್ನು ಖಾಯಂಗೊಳಿಸುವ ಆಶ್ವಾಸನೆ ನೀಡಿತು. ಖಾಯಂ ನೌಕರರಿಗೆ ಕೊಡುವ ವೇತನವನ್ನೇ ಕೊಡಬೇಕೆಂದು ಸುಪ್ರೀಂಕೋರ್ಟ್ ಕೂಡಾ ನಿರ್ದೇಶ ನೀಡಿತ್ತು. ಆದರೂ ಪರಿಸ್ಥಿತಿಯಲ್ಲಿ ಏನೂ ಬದಲಾವಣೆಯಾಗಿಲ್ಲವಾದ್ದರಿಂದಲೇ ಈ ತೀವ್ರ ಹೋರಾಟದ ಯೋಜನೆ ರೂಪಿಸಲಾಗಿದೆ.

ಕಾಮ್ರೇಡ್ ಪಾರಿತೋಷ್ ಚಟರ್ಜಿ

ಪಶ್ಚಿಮ ಬಂಗಾಳ ಸಿ.ಪಿ.ಐ.(ಎಂ) ರಾಜ್ಯ ಸಮಿತಿ ಸದಸ್ಯ ಹಾಗೂ ಪಶ್ಚಿಮ ಬಂಗಾಳ ಕೃಷಿಕ ಸಭಾದ ಅಧ್ಯಕ್ಷ ಕಾ|| ಪಾರಿತೋಷ್ ಚಟರ್ಜಿ ಅಸ್ವಸ್ಥತೆಯಿಂದ ಮಾರ್ಚ್ 22ರಂದು ನಿಧನರಾದರು. ಅವರಿಗೆ 77 ವರ್ಷ ವಯಸ್ಸಾಗಿತ್ತು.

ವಿದ್ಯಾರ್ಥಿ ಜೀವನದಲ್ಲೇ ಕ್ರಾಂತಿಕಾರಿ ಚಟುವಟಿಕೆಗಳಿಗೆ [illegible] ಮೂಲಕ ಧುಮುಕಿದ ಕಾ|| ಚಟರ್ಜಿ 1930ರಲ್ಲಿ ಕಮ್ಯೂನಿಸ್ಟ್ ಪಕ್ಷ ಸೇರಿದರು. [illegible] ಕಮ್ಯೂನಿಸ್ಟ್ ಆಂದೋಲನದಲ್ಲಿ ಹಾಗೂ ಕಿಸಾನ್ ಆಂದೋಲನದಲ್ಲಿ [illegible] ವಹಿಸಿದರು.

[illegible] ಕಾ|| [illegible] ಕಾ|| ಪಾರಿತೋಷ್ ಚಟರ್ಜಿಯವರ [illegible] ತೀವ್ರ [illegible]

KRNW/BGS-312 MAG(2) PRB DECR 319-78/79

ವಿದೇಶೀ ಕೈವಾಡದ ಸುಳಿವು.....

(ಪುಟ 1ರಿಂದ)

ಬರುತ್ತಿರುವುದು- ಹೀಗೆ ಹತ್ತು ಹಲವು ಯೋಜನೆಗಳಿಂದ ಸಾಮ್ರಾಜ್ಯಶಾಹಿಗಳು ಒಡ್ಡಿಕೊಂಡು ಬಂದ ಬೆದರಿಕೆ ಬಗ್ಗೆ ಎಚ್ಚರ ನೀಡಿದ್ದೆವು.

ಇವೆಲ್ಲಾ ಬರೀ ಉತ್ಪ್ರೇಕ್ಷೆಯೆಂದು "ರಾಷ್ಟ್ರವಾದಿ" ಪತ್ರಿಕಾರಂಗ ಮತ್ತು ವಿರೋಧ ಪಕ್ಷಗಳ ಕೆಲವು ಮಿತ್ರರು ತಮಾಷೆ ಮಾಡಿದ್ದರು. ಈಗ ಅವರೇ ಕೆಲವರು ಅವೇ ಅಪಾದನೆಗಳನ್ನು ಸರ್ಕಾರಕ್ಕೆ ಮುಜುಗರವುಂಟು ಮಾಡಲು ಬಳಸುತ್ತಿದ್ದಾರೆ. ಅತ್ತ ಬೋಫೋರ್ಸ್, ಬಚ್ಚನ್, ವ್ಯವಹಾರ ಮುಂತಾದವುಗಳಲ್ಲಿ "ವಿದೇಶೀ ಕೈವಾಡ"ದ ಹೆಸರು ಬಳಸಿ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡಿ ವಿಶ್ವಾಸಾರ್ಹತೆ ಕಳೆಕೊಂಡ ಕಾಂಗ್ರೆಸ್(ಐ) ಕೂಡಾ ಈಗ ಠಕ್ಕರ್ ಆಯೋಗವೇ ಇಂದಿರಾಗಾಂಧಿ ಹತ್ಯೆಯಲ್ಲಿ ವಿದೇಶೀ ಏಜೆನ್ಸಿಗಳ ಕೈವಾಡ ಇರಬಹುದೆಂದು ಸಂಶಯಪಡುತ್ತಿರುವಾಗ ಮೌನ ತಳೆದಿದೆ.

ಯಾವ ಆಧಾರದ ಮೇಲೆ ನ್ಯಾಯಮೂರ್ತಿ ಠಕ್ಕರ್ ಈ ತೀರ್ಮಾನಕ್ಕೆ ಬರುವಂತಾಯಿತು? ಅಂತಿಮ ವರದಿಯನ್ನೇ ನೋಡೋಣ.

- "ಖಾಲಿಸ್ತಾನ್ ಗಣತಂತ್ರ" ಎಂಬ ಶಿರೋನಾಮೆ ಹಾಗೂ ಲಂಡನ್ ವಿಳಾಸ ಅಚ್ಚಾದ ಖಾಲಿ ಪ್ರತಿಗಳು ಒಬ್ಬ ಸಿಖ್ ಇಲ್ಲದ, ನಾನು ವ್ಯಾಪಾರಿ ಎಂದು ಹೇಳಿಕೊಳ್ಳುವ ವ್ಯಕ್ತಿಯ ಬಳಿಯಿತ್ತು. ಆತನಿಗೆ ಶ್ರೀಯುತ ಧವನ್‌ರ ಜೊತೆ ಸಂಪರ್ಕವಿರುವ ಸಂಭವವಿದೆ. ಇದು ಆತನ ಬಳಿ ಏಕೆ ಇದೆ ಎಂಬುದು ಗಂಭೀರ ವಿಚಾರ. ಇದನ್ನು ಸಂಬಂಧಪಟ್ಟ ಏಜೆನ್ಸಿಗಳೇ ಹಗುರವಾಗಿ ಕಂಡಿವೆ ಎಂದಿರುವ ವರದಿ ತಮ್ಮ ಆಯೋಗ "ಇದಕ್ಕಿಂತ ಹೆಚ್ಚು ಅಥವಾ ಇದಕ್ಕಿಂತ ಕಮ್ಮಿಯೇನೂ ಮಾಡಲು ಸಾಧ್ಯವಿಲ್ಲ" ಎಂದಿದೆ.

- ನವಂಬರ್ 5, 1984ರ ಬ್ರಿಟಿಶ್ ಪತ್ರಿಕೆಯೊಂದರಲ್ಲಿ ಬಿ.ಬಿ.ಸಿ.ಯ ದೆಹಲಿ ಕಚೇರಿಯ ಮುಖ್ಯಸ್ಥ ಮಾರ್ಕ್ ಟುಲಿ ಬರೆದ ಒಂದು ಲೇಖನದಲ್ಲಿ ಇಂದಿರಾ ಗಾಂಧಿಯ ಮೇಲೆ ಹಲ್ಲೆ ಮಾಡಿದವರಲ್ಲಿ ಒಬ್ಬನಾದ ಬಿಯಾಂತ್ ಸಿಂಗ್‌ನನ್ನು ಉಗ್ರಗಾಮಿಗಳು ಸಂಪರ್ಕಿಸಿದ್ದರೆಂದು ಇಂದಿರಾಗಾಂಧಿಯವರನ್ನು ಎಚ್ಚರಿಸಲಾಗಿದ್ದು, ಆಕೆಯ ಸೆಕ್ರೆಟರಿಯೇಟ್‌ನ ಒಬ್ಬ ನಿಕಟ ಸದಸ್ಯನ ಮಧ್ಯಪ್ರವೇಶವಿಲ್ಲದಿದ್ದರೆ ಆತನನ್ನು ತೆಗೆದು ಹಾಕಲಾಗುತ್ತಿತ್ತು ಎಂದು ಬರೆದಿದ್ದರು. ಈ 'ನಿಕಟ ಸದಸ್ಯ' ಯಾರೆಂದು ಆಯೋಗ ಅವರನ್ನು ಕೇಳಿದ್ದರೂ, ಏನೂ ಸಮರ್ಥನೆಯಿಲ್ಲದಿದ್ದರೂ ಹೆಸರು ತಿಳಿಸಲು ಮಾರ್ಕ್‌ಟುಲಿ ನಿರಾಕರಿಸಿದ ಬಗ್ಗೆ ಠಕ್ಕರ್ ಆಯೋಗ ತನ್ನ ಅಸಂತೋಷ ವ್ಯಕ್ತಪಡಿಸಿದೆ.

- ಅಮೆರಿಕಾದಲ್ಲಿರುವ ಕ್ಯಾಂಪರ್ ಸ್ಕೂಲ್‌ನಂತಹ ಕೇಂದ್ರಗಳು ವಿದೇಶೀ ನಾಗರೀಕರಿಗೆ ಅವರ ದೇಶದ ರಕ್ಷಣೆಗಾಗಿ ಶಸ್ತ್ರ ತರಬೇತಿ ನೀಡುವ ಕೇಂದ್ರಗಳಲ್ಲಿ. ಬದಲಾಗಿ ಹೆಚ್ಚಾಗಿ ಮುಗ್ಧ ನಾಗರಿಕರ ಮೇಲೆ ಹಲ್ಲೆ ಮಾಡುವ, ದೇಶದಲ್ಲಿ ಅಂತರಿಕ ಅವ್ಯವಸ್ಥೆ ನಿರ್ಮಿಸುವ ಭಯೋತ್ಪಾದಕತೆ ಕಲಿಸುವ ಶಾಲೆಗಳು. ಇವುಗಳ ತೀವ್ರ ಬೆದರಿಕೆಯನ್ನು ಗಮನಿಸಲೇ ಬೇಕು. ಉದಾ: ಬ್ರಿಟನ್, ಪಶ್ಚಿಮ ಜರ್ಮನಿ, ಇಸ್ರೇಲ್ ಅಥವಾ ಪಾಕಿಸ್ತಾನದ ವಿರುದ್ಧ ಕಾರ್ಯಾಚರಣೆ ಮಾಡಬೇಕೆಂದು ಬಯಸುವ ಭಯೋತ್ಪಾದಕರಿಗೆ ತರಬೇತಿ ನೀಡಲು- ಅದು ಖಾಸಗೀ ಶಾಲೆಯಲ್ಲೇ ಆದರೂ ಕೂಡಾ- ಅಮೆರಿಕನ್ ಸರ್ಕಾರ ಅವಕಾಶ ಕೊಡುತ್ತಿತ್ತೇ ಎಂದು ವರದಿ ಪ್ರಶ್ನಿಸಿದೆ.

- ಅಮೆರಿಕನ್ ವಿದೇಶಾಂಗ ಇಲಾಖೆ ಭಾರತದ ರಾಜಕೀಯ ಪ್ರವೃತ್ತಿಯ ಬಗ್ಗೆ ಅಧ್ಯಯನ ಮಾಡುವ ಕೆಲಸವನ್ನು ಪ್ರೊ॥ ಹಾರ್ಡ್‌ಗ್ರೇವ್ ಎಂಬಾತನಿಗೆ ಒಪ್ಪಿಸಿತ್ತು. ಆತ 1984ರಲ್ಲಿ ಪ್ರಕಟಿಸಿದ ಪುಸ್ತಕದಲ್ಲಿ "ಮುಂದಿನ ಸಂಸದೀಯ ಚುನಾವಣೆಯ ಮೊದಲು ಶ್ರೀಮತಿ ಗಾಂಧಿ ಇದ್ದಕ್ಕಿದ್ದಂತೆ ಸತ್ತರೆ ರಾಜೀವರ ಭವಿಷ್ಯ ಇನ್ನಷ್ಟು ಕಷ್ಟಕರವಾಗಬಹುದು" ಎಂದು ಹೇಳಿದ್ದಾರೆ. "ಇದ್ದಕ್ಕಿದ್ದಂತೆ ಸಾಯುವ" ಬಗ್ಗೆ ಇದರ ಮೊದಲು ಅಥವಾ ಆಮೇಲೆ ಚುನಾವಣೆ ನಡೆಸುವ ಬಗ್ಗೆ ಯೋಚಿಸಬೇಕಾಗಿ ಬಂದ ಸಂದರ್ಭವಾದರೂ ಏನು ಎಂದು ವರದಿ ಪ್ರಶ್ನಿಸಿದೆ.

ಕೊನೆಯದಾಗಿ ಠಕ್ಕರ್ ಆಯೋಗ ತನ್ನ ವರದಿಯ ಅಂತ್ಯದಲ್ಲಿ ಹೀಗನ್ನುತ್ತದೆ" ಭಾರತವನ್ನು ಅಂತರಿಕವಾಗಿ ಅಸ್ಥಿರಗೊಳಿಸುವಲ್ಲಿ ತೊಡಗಿದವರಿಗೆ ಯಾವುದಾದರೂ ವಿದೇಶೀ ಏಜೆನ್ಸಿ ನೆರವಾಗಿದೆಯೇ ಎಂಬುದು ಈ ಆಯೋಗದ ತನಿಖೆಯ ಚೌಕಟ್ಟಿಗೆ ಸೇರಿದ ವಿಷಯವಲ್ಲ. ವಿಚಾರಣಾ ಸಂಸ್ಥೆ ಬಹಳಷ್ಟು ಮಾಹಿತಿ ಕಲೆ ಹಾಕಿದೆ. ಭಯೋತ್ಪಾದಕರಿಗೆ ಪ್ರೇರಣೆ, ಪ್ರೋತ್ಸಾಹ, ನೆರವು ಮತ್ತು ತರಬೇತಿ ನೀಡಿ ವಿದೇಶೀ ಏಜೆನ್ಸಿಯೊಂದು ಇಂತಹ ಪಾತ್ರ ವಹಿಸಿದೆಯೆಂದು ತೋರಿಸುವ ಮಾಹಿತಿಯಿದು. ತನಿಖಾ ಸಂಸ್ಥೆ ಶ್ರಮವಹಿಸಿ, ಜಾಗರೂಕತೆಯಿಂದ ಕಲೆಹಾಕಿದ ಮಾಹಿತಿಗಳ ಪೂರ್ಣ, ವಿವರವಾದ ವರದಿಯನ್ನು ಭಾಗ-ಎ ನಲ್ಲಿ ಕೊಡಲಾಗಿದೆ"

ಅಂದರೆ ನ್ಯಾಯಮೂರ್ತಿ ಠಕ್ಕರ್‌ರವರಿಗೆ ಈ ಬಗ್ಗೆ ಬಹಳಷ್ಟು ಮನವರಿಕೆಯಾಗಿದೆ. ಅದಕ್ಕೆ ಆಧಾರ ಒದಗಿಸಿದ ಭಾಗ-IIಎ ವರದಿಯಲ್ಲಿದೆ ಎಂಬುದು ಸ್ಪಷ್ಟ. ಅಂದರೆ ಇದು ಅಂತಿಮ ವರದಿಯ ಒಂದು ಭಾಗ. ಆದರೆ ಸರ್ಕಾರ ಸಂಸತ್ತಿನಲ್ಲಿಟ್ಟ ವರದಿಯಲ್ಲಿ ಈ ಭಾಗವಿಲ್ಲ. ಅದನ್ನು ಬಚ್ಚಿಡಲಾಗಿದೆ.

ಏಕೆ? ಸರ್ಕಾರ ಯಾರನ್ನು ಉಳಿಸಬಯಸುತ್ತಿದೆ? ಇದೊಂದು ಸಾಮಾನ್ಯ ಹತ್ಯೆಯಲ್ಲ. ಭಾರತದ ಪ್ರಧಾನಮಂತ್ರಿಯ ಕೊಲೆಯಾಯಿತು. ಈ ಘಾತಕ ಪಿತೂರಿಯಲ್ಲಿ ವಿದೇಶೀ ಏಜೆನ್ಸಿಗಳ ಕೈವಾಡವಿತ್ತು. ಆದರೆ ಈ ವಿದೇಶಿ ಸಂಪರ್ಕ ಯಾವುದೆಂದು ತಿಳಿಯುವ ಹಕ್ಕು ಜನತೆಗಿಲ್ಲ! ಎಂತಹ ಪ್ರಜಾಪ್ರಭುತ್ವವಿದು!

ಸಂಗತಿಯನ್ನು ಬಚ್ಚಿಡುವುದರಿಂದ ಸಂಶಯದ ಬೆಂಕಿಗೆ ತುಪ್ಪ ಸುರಿದಂತಾಗುತ್ತದಷ್ಟೆ. ಬೊಫೋರ್ಸ್, ಸಬ್‌ಮೆರಿನ್, ಫೇರ್‌ಫೇಕ್ಸ್, ಬಚ್ಚನ್ ಮುಂತಾದ ಹಗರಣಗಳ ಹಿನ್ನೆಲೆಯಲ್ಲಿ ಒಂದು ಗಂಭೀರ ಅನುಮಾನ ಮೂಡುತ್ತಿದೆ-ಪ್ರಧಾನ ಮಂತ್ರಿಯನ್ನು ಬ್ಲಾಕ್‌ಮೇಲ್ ಮಾಡಲಾಗುತ್ತಿದೆಯೇ?

('ಪೀಪಲ್ಸ್ ಡೆಮಾಕ್ರಸಿ''ಯಲ್ಲಿ ಕಾ॥ ಸುನಿಲ್ ಮೈತ್ರಾರವರ ಲೇಖನದ ಸಂಗ್ರಹಾನುವಾದ)

ಎಸ್. ಎಂ. ಜೋಷಿ

ಪ್ರಸಿದ್ಧ ಸಮಾಜವಾದೀ ಮುಖಂಡ ಮತ್ತು ಸ್ವಾತಂತ್ರ್ಯ ಹೋರಾಟಗಾರ ಶ್ರೀ ಎಸ್.ಎಂ.ಜೋಷಿಯವರ ನಿಧನಕ್ಕೆ ಸಿ.ಪಿ.ಐ.(ಎಂ) ಪಾಲಿಟ್‌ಬ್ಯೂರೋ ತೀವ್ರ ಸಂತಾಪ ವ್ಯಕ್ತಪಡಿಸಿದೆ. ವಿದ್ಯಾರ್ಥಿ ದೆಸೆಯಿಂದಲೇ ಅವರು ರಾಷ್ಟ್ರೀಯ ಹೋರಾಟದಲ್ಲಿ ಭಾಗವಹಿಸಿದರು. 1928-30ರಲ್ಲಿ ಯೂತ್ ಲೀಗ್‌ನೊಂದಿಗೆ ಕೆಲಸ ಮಾಡಿದರು. ಅಸಹಕಾರ ಆಂದೋಲನ ಸೇರಿ 1930ರಲ್ಲಿ ಬಂಧನಕ್ಕೊಳಗಾದರು. ಅವರು ಕಾಂಗ್ರೆಸ್ ಸೋಶಲಿಸ್ಟ್ ಪಕ್ಷ ಮತ್ತು ಅಖಿಲ ಭಾರತ ಕಿಸಾನ್ ಸಭಾ ಸ್ಥಾಪಕರಲ್ಲಿ ಒಬ್ಬರು. ಕರ್ಕಿ ರಕ್ಷಣಾ ಉದ್ದಿಮೆಗಳಲ್ಲಿ ಕಾರ್ಮಿಕರ ಸಂಘಟನೆಯನ್ನೂ ಮಾಡಿದ ಅವರು ರಕ್ಷಣಾ ಕಾರ್ಮಿಕರ ಒಕ್ಕೂಟದ ಅಧ್ಯಕ್ಷರಾಗಿದ್ದರು.

ತನ್ನ ರಾಜಕೀಯ ಜೀವನದಾದ್ಯಂತ ಅವರು ಕೋಮುವಾದದ ವಿರುದ್ಧ ಜಾತಿವಾದದ ವಿರುದ್ಧ ಹಾಗೂ ಜಾತ್ಯತೀತ ಮೌಲ್ಯಗಳ ರಕ್ಷಣೆಯ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದರು. ಉನ್ನತ ಮುಜುತ್ವದ ವ್ಯಕ್ತಿಯಾಗಿದ್ದ ಅವರ ಸಾವಿನಿಂದ ಎಡ ಮತ್ತು ಪ್ರಜಾಪ್ರಭುತ್ವ ಆಂದೋಲನಕ್ಕೆ ಒಂದು ದೊಡ್ಡ ಹಾನಿಯಾಗಿದೆ ಎಂದು ಶ್ರದ್ಧಾಂಜಲಿ ಅರ್ಪಿಸಿರುವ ಪಾಲಿಟ್‌ಬ್ಯೂರೋ ಅವರ ಪರಿವಾರದ ಸದಸ್ಯರಿಗೆ ಮತ್ತು ಸಹಯೋಗಿಗಳಿಗೆ ಹಾರ್ದಿಕ ಸಂತಾಪ ವ್ಯಕ್ತಪಡಿಸಿದೆ.

ಚಂದಾದಾರರಿಗೆ, ಏಜೆನ್ಸಿದಾರರಿಗೆ ಸೂಚನೆ

'ಐಕ್ಯರಂಗ'ದ ಮುಂದಿನ ಸಂಚಿಕೆ ಪ್ರಕಟವಾಗುವುದಿಲ್ಲ. ಇದರ ಬದಲು ಏಪ್ರಿಲ್ 30ರ ಸಂಚಿಕೆ "ಮೇ ದಿನಾಚರಣೆ"ಯ ಚಿತ್ರಗಳೊಂದಿಗೆ ಹೆಚ್ಚಿನ ಪುಟಗಳಲ್ಲಿ ಪ್ರಕಟಿಸಲಾಗುವುದು.

ವ್ಯವಸ್ಥಾಪಕರು.

ಹಿಂದೂ ಮತ ಬ್ಯಾಂಕಿಗಾಗಿ....

(ಪುಟ 1ರಿಂದ)

ಇದಕ್ಕಿದೆ. ಆರ್.ಎಸ್.ಎಸ್. ಸರಸಂಘಚಾಲಕ ಬಾಳಾಸಾಹೇಬ ದೇವರಸರಂತಹ ಹಿಂದೂ ಪುನರುತ್ಥಾನವಾದಿಗಳ ಜ್ವಾಜಲ್ಯಮಾನ ಪುತ್ಥಳಿಗಳ ಸಮ್ಮುಖ ಪ್ರಧಾನ ಮಂತ್ರಿ ಪಟ್ಟಕ್ಕೆ ಬಿ.ಜೆ.ಪಿ.ಯ ಅಭ್ಯರ್ಥಿ ಅಟಲ ಬಿಹಾರಿ ವಾಜಪೇಯಿಯವರು ಘೋಷಿಸಿಯೇ ಬಿಟ್ಟಿದ್ದಾರೆ: ರಾಮಜನ್ಮಭೂಮಿ ಪ್ರಶ್ನೆಯ ಮೇಲೆ ಕೊನೆಯವರೆಗೂ ಹೋರಾಟ ನಡೆಯುತ್ತದೆ! ಸರ್ಕಾರಕ್ಕೆ ಮನಸ್ಸಿದ್ದರೆ ಶಾಂತಿಯುತವಾಗಿ ಇದನ್ನು ಪರಿಹರಿಸಬಹುದಾಗಿತ್ತು ಎಂದಿದ್ದಾರೆ ಅವರು. ಏನುದು ಶಾಂತಿಯುತ ಪರಿಹಾರ? ಈ ವಿವಾದಗ್ರಸ್ತ ಪ್ರಾರ್ಥನಾ ಸ್ಥಳವನ್ನು ಮುಸ್ಲಿಮರು ಬಳಸದಂತೆ ನಿಲ್ಲಿಸಿ ಅದನ್ನು ಹಿಂದೂಗಳಿಗೆ ವಾಪಸು ಕೊಡುವುದು! ಅಂದರೆ ಆರ್.ಎಸ್.ಎಸ್.-ಬಿ.ಜೆ.ಪಿ. ಮುಸ್ಲಿಮರು ಏನು ಮಾಡಬೇಕು ಎಂದು ಬಯಸುತ್ತದೋ ಅದನ್ನು ಸರ್ಕಾರ ತನ್ನ ಆಡಳಿತ ಅಧಿಕಾರ ಬಳಸಿ ಮಾಡಬೇಕು! ಆರ್.ಎಸ್.ಎಸ್.-ಬಿ.ಜೆ.ಪಿ.ಯ ವಕ್ತಾರನಾಗಿ ವಾಜಪೇಯಿಯವರ ಕನಿಷ್ಠ ಬೇಡಿಕೆಯಿದು!

ಎರಡು ಪಕ್ಷಗಳ ನಡುವೆ ವಿವಾದದ ಸಂದರ್ಭದಲ್ಲಿ ಸಾಮಾನ್ಯವಾದ ನಾಗರೀಕ ವಿಧಾನಗಳೆಂದರೆ ಮಾತುಕತೆ, ಪಂಚಾಯ್ತಿ ಅಥವಾ ನ್ಯಾಯಾಲಯದ ಮೊರೆ ಹೋಗುವುದು. ಆದರೆ ಆರ್.ಎಸ್.ಎಸ್.-ಬಿ.ಜೆ.ಪಿ., ವಿಶ್ವ ಹಿಂದೂ ಪರಿಷತ್ತುಗಳಿಗೆ ಈ ನಾಗರಿಕ ವಿಧಾನಗಳು ಯಾವುದೂ ಬೇಕಿಲ್ಲ.

ವಾಜಪೇಯಿ ಮತ್ತು ಇತರ ಆರ್.ಎಸ್.ಎಸ್.-ಬಿ.ಜೆ.ಪಿ. ಮುಖಂಡರು ಮಾತನಾಡಿದ ರ್‍ಯಾಲಿ ಆರ್.ಎಸ್.ಎಸ್.ನ ಸಂಸ್ಥಾಪಕ ಡಾ॥ ಹೆಡ್ಗೆವಾರ್ ಜನ್ಮ ಶತಾಬ್ದಿ ಆಚರಣೆಯ ಭಾಗವೆಂದು ಹೇಳಲಾಗಿತ್ತು. ಆದರೆ 'ಸ್ಟೇಟ್ಸ್‌ಮನ್' ಪತ್ರಿಕೆ ಹೇಳಿರುವಂತೆ "ಶತಾಬ್ದಿ ಆಚರಣೆ ಹಿನ್ನೆಲೆಗೆ ಸರಿದಿತ್ತು, ಭಾಷಣಕಾರರೆಲ್ಲಾ ರಾಮಜನ್ಮಭೂಮಿ ಪ್ರಶ್ನೆಯ ಮೇಲಷ್ಟೇ ಮಾತನಾಡಿದರು".

ಅಂದರೆ ಹಿಂದೂ ಜನಸಮೂಹಗಳ ಭಾವನೆಗಳನ್ನು ಕೆರಳಿಸುವ ಶಕ್ತಿ ಪ್ರದರ್ಶನ ಮುಖ್ಯ ಉದ್ದೇಶವಾಗಿತ್ತು. ಎಷ್ಟು ಸಾಧ್ಯವೋ ಅಷ್ಟು ಸೂಕ್ಷ್ಮ ವಿಷಯಗಳ ಮೇಲೆ ಹಿಂದೂ ಜನಸಮೂಹಗಳ ಭಾವನೆಗಳನ್ನು ಹಿಂದೂಗಳು ಮುಸ್ಲಿಮರು ಪರಸ್ಪರ ಹೊಡೆದಾಡುವ ನೇರ ಕಾರ್ಯಾಚರಣೆಯ ಕಾರ್ಯಕ್ರಮದ ಆಧಾರದ ಮೇಲೆ ಕೆರಳಿಸಿ ಅಲ್ಪಸಂಖ್ಯಾತ ಆಯೋಗವನ್ನು, 370ನೇ ಕಲಮನ್ನು ರದ್ದು ಮಾಡಲು ಭಯಾನಕ ಒತ್ತಡವುಂಟು ಮಾಡುವ ಯೋಜನೆಯ ಆರಂಭವಿದು.

ಅಲ್ಪಸಂಖ್ಯಾತರ ಸಮಸ್ಯೆಯೆಂಬುದೇ ಇಲ್ಲ. ಅದು ಕೇವಲ ಬ್ರಿಟಿಷರ ಸೃಷ್ಟಿ-ಹೀಗೆಂದು ಚಿತ್ರಿಸಲು ಈ ರ್‍ಯಾಲಿಯ ಎಲ್ಲಾ ಭಾಷಣಕಾರರು ಪ್ರಯತ್ನಿಸಿದರು. ಆದರೆ ಬ್ರಿಟಿಷರು ಬಿಟ್ಟು ಹೋದ 42 ವರ್ಷಗಳ ನಂತರವೂ ದೇಶಾದ್ಯಂತ ಮುಸ್ಲಿಂ-ವಿರೋಧಿ ದಾಂಗೆಗಳು ಏಕೆ ನಡೆಯುತ್ತಿವೆ? ದೇಶದ ಕೆಲವು ಭಾಗಗಳಲ್ಲಿ ಮುಸ್ಲಿಂ ಅಲ್ಪಸಂಖ್ಯಾತರ ಉರ್ದು ಭಾಷೆಗೆ ಅಡ್ಡಿ ಉಂಟು ಮಾಡಲಾಗುತ್ತಿದೆ. ಕೆಲವು ರಾಜ್ಯ ಸರ್ಕಾರಗಳು ಅದನ್ನು ದಮನ ಕೂಡ ಮಾಡಿವೆ ಏಕೆ? ದೇಶದ ವಿವಿಧ ಭಾಗಗಳಲ್ಲಿ ವಿವಿಧ ರೀತಿಯಲ್ಲಿ ಅಲ್ಪಸಂಖ್ಯಾತರ ವಿರುದ್ಧ ಪಕ್ಷಪಾತದ ವರ್ತನೆ ಏಕೆ ನಡೆಯುತ್ತಿದೆ? ಅಲ್ಪಸಂಖ್ಯಾತ ಆಯೋಗವನ್ನು ವಿಸರ್ಜಿಸಬೇಕೆಂದು ಆರ್.ಎಸ್.ಎಸ್.-ಬಿ.ಜೆ.ಪಿ. ಮುಖಂಡರು ಒತ್ತಾಯ ಮಾಡುತ್ತಿರುವುದೇ ಅಲ್ಪಸಂಖ್ಯಾತರ ವಿರುದ್ಧ ಪಕ್ಷಪಾತದ ಆಚರಣೆಗಳನ್ನು ಮರೆಮಾಚುವ ಉದ್ದೇಶದಿಂದ ಎಂಬುದನ್ನು ಯಾವುದೇ ನಿಷ್ಪಕ್ಷಪಾತಿ ವೀಕ್ಷಕ ಸ್ಪಷ್ಟವಾಗಿ ಕಾಣಬಹುದಾಗಿದೆ.

ಇದು ಆರ್.ಎಸ್.ಎಸ್.-ಬಿ.ಜೆ.ಪಿ. ಸೃಷ್ಟಿಸುತ್ತಿರುವ ಚುನಾವಣಾ ಕೂಟದ ಪ್ರಶ್ನೆ ಮಾತ್ರವೇ ಅಲ್ಲ. ಆತಂಕಕಾರೀ ಸಂಗತಿಯೆಂದರೆ ಕೋಟ್ಯಾಂತರ ಹಿಂದೂ ಧರ್ಮದ ಜನಗಳನ್ನು ಇತರ ಧರ್ಮಗಳ ಜನಗಳ ವಿರುದ್ಧ ನಿಲ್ಲಿಸುವ ಪ್ರಶ್ನೆಯಿದು. ಇದರ ವಿರುದ್ಧ ಜಾತ್ಯಾತೀತ ಪ್ರಜಾಪ್ರಭುತ್ವವಾದಿ ಶಕ್ತಿಗಳು ದೃಢ ನಿಲುವು ತಳೆಯದಿದ್ದರೆ ಹಿಂದೂ ಕ್ರೋಢೀಕರಣದ ಈ ಸಂಘಟಕರು ದೇಶವನ್ನು ಕೋಮು ದಂಗೆಗಳ ಮಹಾಪೂರದಲ್ಲಿ ಮುಳುಗಿಸುತ್ತಾರೆ. ಇದನ್ನು ತಡೆಯುವುದು ಜಾತ್ಯಾತೀತ ಪ್ರಜಾಪ್ರಭುತ್ವ ನೀತಿಗಳನ್ನು ನಂಬಿರುವ ಎಲ್ಲಾ ಸದ್ಭಾವನೆಯ ನಾಗರಿಕರ ತಕ್ಷಣದ ಕರ್ತವ್ಯ.

ಈ ವಾರ....

ರೈತರ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಟ ನಡೆಸುವುದೇ ಪ್ರತ್ಯೇಕ ರಾಜಕೀಯೇತರ ಪ್ರಶ್ನೆ. ಆದರೆ ಜನತಾದಳ ಸರ್ಕಾರದ ಪದಚ್ಯುತಿ ಮಾಡಿ ರಾಷ್ಟ್ರಪತಿ ಆಳ್ವಿಕೆಯಲ್ಲಿ ಚುನಾವಣೆ ನಡೆಸಬೇಕೆಂಬ ಒತ್ತಾಯದಲ್ಲಿ ನೂರಕ್ಕೆ ನೂರರಷ್ಟು ರಾಜಕೀಯವಿದೆ.

'ಪ್ರಜಾವಾಣಿ' ಸಂಪಾದಕೀಯ

ರೈತಸಂಘ ತನ್ನ ಮಿತಿಯನ್ನು ಕೂಡಾ ಅರಿತುಕೊಳ್ಳಬೇಕಾಗಿದೆ. ಅತಿ ಠೇಂಕಾರದಿಂದ ಬಸ್ಸು, ರೈಲು ತಡೆಯುವ ಸರ್ಕಾರವನ್ನುರುಳಿಸಿ ವಿಧಾನಸೌಧ ಆಕ್ರಮಿಸುವ ಮಾತಾಡುವುದಕ್ಕೆ ಬದಲು ಗ್ರಾಮೀಣ ಜನತೆಯನ್ನು ಒಗ್ಗೂಡಿಸುವ ಇಡೀ ಕರ್ನಾಟಕದ ಸಹಾನುಭೂತಿ ಪಡೆಯುವ ಪ್ರತಿಭಟನೆಯ ಶೈಲಿಯೊಂದನ್ನು ರೂಪಿಸುವುದು ಅನಿವಾರ್ಯ.

-'ಲಂಕೇಶ್‌ಪತ್ರಿಕೆ' ಸಂಪಾದಕೀಯ.

ತುರ್ತುಪರಿಸ್ಥಿತಿ ವಿರುದ್ಧ ನಡೆದ ಹೋರಾಟದಲ್ಲಿ ಆರ್.ಎಸ್.ಎಸ್.ನವರದೇ ಸಿಂಹಪಾಲು ಎನ್ನುವ ನಂಬಿಕೆ ಹಲವರದು. ಆದರೆ ತುರ್ತುಪರಿಸ್ಥಿತಿಯ ವಿರುದ್ಧ ಆರ್.ಎಸ್.ಎಸ್.ತನ್ನ ಕಿರುಬೆರಳನ್ನು ಸಹ ಎತ್ತಲಿಲ್ಲ ಮಾತ್ರವಲ್ಲದೆ ಇಂದಿರಾಗಾಂಧಿಯವರ ಶರಣು ಹೋಗಿ ಪರಿಸ್ಥಿತಿಯಿಂದ ಪಾರಾಗಬೇಕೆಂದು ಆರ್.ಎಸ್.ಎಸ್. ಸರ್ವಪ್ರಯತ್ನ ನಡೆಸಿತ್ತೆಂಬುದು ಬಯಲಾದರೆ ಹಲವರಿಗೆ ದಿಗ್ಭ್ರಮೆಯಾದೀತು.

-'ಆರ್.ಎಸ್.ಎಸ್. ಅಂತರಂಗ' ಪುಸ್ತಕದಿಂದ

ಶಿರಸಿಯಲ್ಲಿ ಹೋಳಿಹಬ್ಬದಲ್ಲಿ ಆಸಿಡ್ ಎರಚಿದವನಿಗಿಂತ ಅದಕ್ಕೆ ಕೋಮುಬಣ್ಣ ಹಚ್ಚಲು ಪ್ರಯತ್ನಿಸಿದ ಆರ್.ಎಸ್.ಎಸ್. ಮುಖವಾಣಿ ಹಾಗೂ ವ್ಯಕ್ತಿಗಳು ಹೆಚ್ಚು ಅಪಾಯಕಾರಿಯಾಗುತ್ತಾರೆ. ಮನುಷ್ಯ ಸಂಬಂಧಗಳ ಮೇಲೆ ಮತ್ತು ಕೋಮು ಸೌಹಾರ್ದತೆಗೆ ಆಸಿಡ್ ಎರಚುವ ಶಕ್ತಿಗಳಿವು.

-'ಸುದ್ದಿಸಂಗಾತಿ' ಲೇಖನದಲ್ಲಿ.

ಠಕ್ಕರ್ ಆಯೋಗ ಹೊರಗೆಡಹಿರುವ ಆಘಾತಕರ ಕಥೆ ಸರ್ಕಾರಕ್ಕೆ ಹಾಗೂ ಜನತೆಗೆ ಮುಖ್ಯ ಪಾಠ ಕಲಿಸುತ್ತದೆ.

-'ಫ್ರಂಟ್‌ಲೈನ್' ಸಂಪಾದಕೀಯ.

ಪ್ರತಿಬಾರಿ ರಾಜೀವ್‌ಗಾಂಧಿ ಹೊಸ ರಾಜಕೀಯ ಉಡುಪು ತೊಡಲು ಯತ್ನಿಸಿದಾಗೆಲ್ಲಾ ಬಟ್ಟೆ ಇಲ್ಲದ ಸಾಮ್ರಾಟನಂತೆ ಬಟಾಬಯಲಾಗಿದ್ದಾರೆ.

-ಇಂಡಿಯಾಟುಡೇ

Printed and published by P. RAMACHANDRA RAO on behalf of Communist Party of India (Marxist), Karnataka State Committee, L-56, K.V. Temple Street, Sulthanpet, Bangalore- 560053. Phone No. 75331 Editor: P. RAMACHANDRA RAO managerial Office: C/O Kriya Prakashana, Shobha Lodge Complex, 5th Main Road, Gandhinagar, Bangalore-560009.